ಮೊಳಕಾಲ್ಮೂರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ಮಲ್ಲಿಕಾರ್ಜುನ .ಕೆ

ಮಾರ್ಗದರ್ಶಕರು

ಡಾ.ಸಿ.ಟಿ.ಗುರುಪ್ರಸಾದ್
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೭-೦೮

"ಮೊಳಕಾಲ್ಮೂರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು"

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ಮಲ್ಲಿಕಾರ್ಜುನ .ಕೆ

ಮಾರ್ಗದರ್ಶಕರು

ಡಾ.ಸಿ.ಟಿ.ಗುರುಪ್ರಸಾದ್

ಹಿರಿಯ ಶ್ರೇಣಿ ಉಪನ್ಯಾಸಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೦೭–೦೮

ದೃಢೀಕರಣ ಪತ್ರ

"ಮೊಳಕಾಲ್ಮುರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು" ಎಂಬ ಶೀರ್ಷಿಕೆಯ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ **ಮಲ್ಲಿಕಾರ್ಜುನ ಕೆ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿಗಾಗಲಿ, ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಸಿ.ಟಿ.ಗುರುಪ್ರಸಾದ್)
ಮಾರ್ಗದರ್ಶಕರು
ಹಿರಿಯ ಶ್ರೇಣಿ ಉಪನ್ಯಾಸಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : ೦೬-೧೦-೦೮
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಮೊಳಕಾಲ್ಮುರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು" ಎಂಬ ನಿಬಂಧವನ್ನು **ಡಾ. ಸಿ.ಟಿ. ಗುರುಪ್ರಸಾದ್** ಅವರ ಮಾರ್ಗದರ್ಶನದಡಿಯಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

15/10/08

ಮಲ್ಲಿಕಾರ್ಜುನ ಕೆ.
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : ೧೫-೧೦-೦೮
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

"ಮೊಳಕಾಲ್ಮೂರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು" ಎಂಬ ನಿಬಂಧವನ್ನು ಸಿದ್ದಪಡಿಸಲು ಮುಕ್ತ ಮನಸ್ಸಿನಿಂದ ಸೂಕ್ತ ಸಲಹೆ-ಸೂಚನೆಗಳೊಂದಿಗೆ ಮಾರ್ಗದರ್ಶನ ನೀಡಿದ ಮಾನ್ಯ ಡಾ.ಸಿ.ಟಿ.ಗುರುಪ್ರಸಾದ್ ಅವರಿಗೆ ನನ್ನ ಅನಂತ ಹೃತ್ಪೂರ್ವಕ ಕೃತಜ್ಞತೆಗಳು.

ನನಗೆ ಸಂಶೋಧನೆ ಮಾಡಲು ಸೂಕ್ತ ವಾತಾವರಣವನ್ನು ಕಲ್ಪಿಸಿ ಕೊಟ್ಟಂತಹ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಮಾನ್ಯ ಡಾ.ಡಿ.ಪಾಂಡುರಂಗಬಾಬು ಅವರಿಗೆ ಮತ್ತು ಅಭ್ಯಾಸಕ್ಕೆ ಸಹಾಯಮಾಡಿದ ಗ್ರಂಥಪಾಲಕರಿಗೆ, ಸಿಬ್ಬಂದಿಯವರಿಗೆ ಅತ್ಯಂತ ಅಭಾರಿಯಾಗಿದ್ದೇನೆ.

ನಿಬಂಧದ ಅಧ್ಯಯನಕ್ಕೆ ತಮ್ಮ ತನು-ಮನದಿಂದ ಉತ್ತಮ ಸಲಹೆ-ಸೂಚನೆ ನೀಡಿ ಸಹಕರಿಸಿದಂತಹ ವಿಭಾಗದ ಮುಖ್ಯಸ್ಥರು ಹಾಗೂ ಪ್ರವಾಚಕರಾದಂತ ಮಾನ್ಯ, ಡಾ.ಹೆಬ್ಬಾಲೆ ಕೆ.ನಾಗೇಶ್ ರವರಿಗೆ ಅತ್ಯಂತ ಪ್ರೀತಿಯ ಅಭಿನಂದನೆಗಳು.

ಅಧ್ಯಯನದ ಅವಧಿಯಲ್ಲಿ ಉತ್ತಮ ಮೌಲ್ಯಯುತ, ವಿವಿಧ ಆಯಾಮಗಳಲ್ಲಿ ನಮ್ಮನ್ನು ತಿದ್ದಿ ತೀಡಿ ಸಂಶೋಧಕನಿಗೆ ಬೇಕಾದಂತಹ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಸಹಕರಿಸಿ ಭೋಧಿಸಿದ ಗುರುಗಳಾದ ಪ್ರೊ.ಮಂಜುನಾಥ ಬೇವಿಕಟ್ಟಿ ಅವರಿಗೆ, ಡಾ.ಮೊಗಳ್ಳಿ ಗಣೇಶ್ ಅವರಿಗೆ, ಡಾ.ಸಿ.ಟಿ.ಗುರುಪ್ರಸಾದ್ ಅವರಿಗೆ, ಡಾ.ಹರಿಶ್ಚಂದ್ರ ದಿಗ್ಸಂಗೀಕರ್ ಅವರಿಗೆ, ಪ್ರೊ.ಸ.ಚಿ.ರಮೇಶ್ ಅವರುಗಳಿಗೆ ಪ್ರೀತಿ ತುಂಬಿದ ನಮನಗಳು.

ಬಡತನದ ಬವಣೆಯಲ್ಲೂ ಒಂದೊಂದು ತೊಟ್ಟು ಬೆವರಿನ ಹನಿಯನ್ನು ಸದಾ ನನ್ನ ಓದಿಗೆ ಮೀಸಲಿರಿಸಿ ನನ್ನ ಹಿತಕಾಯುವ ನನ್ನ ತಾಯಿ ಶ್ರೀಮತಿ ತಿಪ್ಪಮ್ಮ, ತಂದೆ ದಿ.ಕೆಂಚಪ್ಪ ರವರ ಪಾದಗಳಿಗೆ ನನ್ನ ಸಾಷ್ಟಾಂಗ ನಮನಗಳು, ಹಾಗೂ ನನ್ನ ತಮ್ಮ ಕಿರಣ್‌ಕುಮಾರ್‌ಗೆ, ತಮ್ಮ ಮಕ್ಕಳ ಜೊತೆಯಲ್ಲಿಯೇ ನನ್ನನ್ನೂ ಒಬ್ಬ ನೆಂದೇ ಸಾಕಿ ಬೆಳೆಸಿ ನನ್ನ ಏಳ್ಗೆಗೆಯನ್ನ ನೋಡಿ ಸಂತೋಷಿಸುವ ಪ್ರೀತಿಯ ಅತ್ತೆ-ಮಾವಂದಿರಾದ ಶ್ರೀಸಿ.ಎಂ.ಪರಮೇಶ್ವರಪ್ಪ, ಶ್ರೀಮತಿ ಯಲ್ಲಮ್ಮ, ಶ್ರೀ ದೇವೇಂದ್ರಪ್ಪ ಸಿ.ಎಂ., ಶ್ರೀಮತಿ ತಿಪ್ಪಮ್ಮ ಇವರುಗಳಿಗೆ ನನ್ನ ಪ್ರಣಾಮಗಳು.

ಅಕ್ಕಂದಿರಾದ ಶ್ರೀಮತಿ ಸಿ.ಪಿ.ಶಿವರುದ್ರಮ್ಮ, ಶ್ರೀಮತಿ ದ್ರಾಕ್ಷಾಯಿಣಿ, ಸುರೇಶ ಸಿ.ಪಿ, ಮಧು ಸಿ.ಪಿ, ಸುಮ ಸಿ.ಡಿ, ಶ್ರೀಮತಿ ಲಕ್ಷ್ಮಿದೇವಿ, ಶ್ರೀ ರುದ್ರಮುನಿ ಸಿ.ಎಂ.(ಶಿಕ್ಷಕರು) ಇವರುಗಳಿಗೆ.

ಸ್ನೇಹಿತರಾದ ಹನುಮಂತಪ್ಪ ಡಿ., ಮೇಘನಾಥ ಎ.ಕೆ.ಎನ್., ಹನುಮಂತಪ್ಪ ಡಿ.ಎನ್., ಆನಂದ ಕೆ.ಜಿ., ಸೊಂಡೂರಪ್ಪ ಜಿ., ಲಕ್ಷ್ಮಿಬಾಯಿ ಎಲ್.ವಿ., ಪವಿತ್ರ, ಪದ್ಮಶ್ರೀ ಎಂ, ಮೀಟ್ಯಾನಾಯ್ಕ ಮತ್ತು ಸಣ್ಣ ನಾಗರಾಜ ಇವರಿಗೆ,

ಅಧ್ಯಯನದ ಸಮಯದಲ್ಲಿ ಮುಕ್ತ ಮನಸ್ಸಿನ ಭಾವನೆಗಳನ್ನು ಸುಖ-ಸಂತೋಷಗಳನ್ನು ನನ್ನೊಡನೆ ಹಂಚಿಕೊಂಡ ಸಹಪಾಠಿ-ಹಿರಿಯರಾದ ಡಿ.ದೂರಣ್ಣವರ., ಎ.ಕೆ.ಬಸವರಾಜ, ಮಂಗಳಾ ಬಿ.ಎನ್., ಹೊನ್ನೂರುಸಾಬ್, ಸಹಮಿತ್ರರಾದ, ರಂಗನಾಥ ಕೆ. ಪರಮೇಶ್ವರ್ ಜಾನೆ, ನಿಂಗಪ್ಪಮಾದಣ್ಣವರ್, ನಿಸಾರ್ ಅಹಮದ್, ಅಂಜಲಿದೇವಿ, ವೆಂಕಟೇಶ್ ಸಿ, ನವಲಗುಂದ ಗುರುರಾಜ, ಜಗದೀಶ್ ಆರ್, ಯಲ್ಲಣ್ಣ ಕೆ, ಇವರುಗಳಿಗೆ

ಸಂಶೋಧನೆ ಸಂದರ್ಭದಲ್ಲಿ ಸೂಕ್ತ ಸಲಹೆಗಳನ್ನು ನೀಡಿದ ಜಗದೀಶ್ ಕುಮಾರ್, ಎ.ಡಿ.ಬಸವರಾಜ, ರಾಮುಕಲಾಲ್, ಓಬಯ್ಯ, ಹಾಗೂ ವಿಭಾಗದಲ್ಲಿ ಪ್ರೀತಿಯಿಂದಲೇ ನನ್ನ ಸಂಶೋಧನೆಗೆ ಸಹಕರಿಸಿದ ವಿಭಾಗದ ಸಿಬ್ಬಂದಿಯವರಾದ ಬಸವರಾಜು ಸಿ, ಅಬ್ದುಲ್ ನಭಿ ಅವರಿಗೂ,

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಮ್ಮ ಕೆಲಸಕಾರ್ಯಗಳನ್ನು ಬದಿಗೊತ್ತಿ ಸಂಶೋಧನೆಗೆ ಬೇಕಾದ ಅಗತ್ಯ ವಿವರಗಳನ್ನು ನೀಡಿದ ಮೊಳಕಾಲ್ಮೂರು ಗ್ರಾಮದ ಜನತೆಗೆ ಹೃತ್ಪೂರ್ವಕ ಕೃತಜ್ಞತೆಗಳು.

ನಿಬಂಧದ ಅಕ್ಷರ ಜೋಡಣೆ ಮಾಡಿದ **ಮಾನಸ ಗ್ರಾಫಿಕ್ಸ್‌ಗೆ** ತನು-ಮನದ ಕೃತಜ್ಞತೆಗಳು.

ಮಲ್ಲಿಕಾರ್ಜುನ.ಕೆ

ಪರಿವಿಡಿ

ಅಧ್ಯಾಯ-೧ ೧-೫

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಅಧ್ಯಾಯ-೨ ೬-೧೧

೧. ಮೊಳಕಾಲ್ಮುರು ಗ್ರಾಮದ ಭೌಗೋಳಿಕ ಹಿನ್ನಲೆ

ಅ ಮೊಳಕಾಲ್ಮುರು ಗ್ರಾಮ ಪದನಿಷ್ಪತಿ

ಅಧ್ಯಾಯ-೩ ೧೨-೩೫

೧. ಸಾಮಾಜಿಕ ಸ್ಥಿತ್ಯಂತರಗಳು

೨. ಆರ್ಥಿಕ ಸ್ಥಿತ್ಯಂತರಗಳು

೩. ರಾಜಕೀಯ ಸ್ಥಿತ್ಯಂತರಗಳು

ಅಧ್ಯಾಯ-೪ ೩೬-೬೧

ಮೊಳಕಾಲ್ಮೂರು ಗ್ರಾಮದ ಕಲೆಗಳು,

ಆಚರಣೆಗಳು,

ಸಂಪ್ರದಾಯಗಳು,

ಹಬ್ಬ ಹರಿದಿನಗಳು,

ಅಧ್ಯಾಯ-೫ ೬೨-೬೭

ಸಮಕಾಲೀನತೆಯ ಸಂದರ್ಭದಲ್ಲಿ ಮೊಳಕಾಲ್ಮೂರಿ
ಗ್ರಾಮದ ಸ್ಥಿತ್ಯಂತರಗಳು

ಅಧ್ಯಾಯ-೬ ೬೮-೭೨

ಉಪಸಂಹಾರ

ಅನುಬಂಧಗಳು ೭೩

ಆಧಾರ ಗ್ರಂಥಗಳು ೭೪

ವಕ್ತೃಗಳ ವಿವರ ೭೬

ಛಾಯಚಿತ್ರಗಳು ೭೮

ಅಧ್ಯಾಯ-ಒಂದು

ಮೊಳಕಾಲ್ಮೂರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು

ಅಧ್ಯಾಯ–ಒಂದು

ಮೊಳಕಾಲ್ಮೂರು ಗ್ರಾಮಾಧ್ಯಯನ ಮತ್ತು ಸ್ಥಿತ್ಯಂತರಗಳು

ಪೀಠಿಕೆ

ಕೋಟ್ಯಾನು ಕೋಟಿ ವರ್ಷಗಳ ಹಿಂದೆ ಸೂರ್ಯನಿಂದ ಸಿಡಿದು ಬಂದ ಅಂಶದಿಂದ ಕಾಲಗರ್ಭದಲ್ಲಿ ರೂಪುಗೊಂಡ ಭೂಮಿ, ಜೀವ ಸಂತಾನಕ್ಕೆ ಆಶ್ರಯ ನೀಡಿತು. ಅದೆಷ್ಟೋ ವರ್ಷಗಳ ನಂತರ ಮನುಷ್ಯ ಜೀವಿ ಸೃಷ್ಟಿಯಾಯಿತು. ಭೂಭಾಗದಲ್ಲಿ ಎಲ್ಲೆಲ್ಲಿ ಜೀವ ಸೃಷ್ಟಿಗೆ ಅವಕಾಶವಿತ್ತೋ ಅಲ್ಲೆಲ್ಲಾ ಬಹುಶಃ ಏಕಕಾಲದಲ್ಲಿ ಮಾನವ ಸೃಷ್ಟಿಯಾದ.

'ನಿರ್ದಿಷ್ಟ ಪ್ರದೇಶದಲ್ಲಿ ನಿಧಿಗಳ ಜನ ಸಮುದಾಯ ಪಾದವೂರಿದ್ದೇ ಜನಪದ' 'ಜನರಿಗೆ ಸಂಬಂಧಿಸಿದ್ದೆ ಜನಪದ'

ಜನಪದ ಶಬ್ದ ಸರಳವೂ ಹೌದು, ಸಂಕೀರ್ಣವೂ ಹೌದು. ಇದರಲ್ಲಿ ಜನ, ಜನರ ಭಾಷೆ, ಅವರ ನೆಲೆ, ಜಾತಿ, ಪಂಗಡ, ಆಚಾರ–ವಿಚಾರ, ಕಲೆ, ಸಾಹಿತ್ಯ ವೇದ ಮುಂತಾದವು ಅಡಕವಾಗಿವೆ. ಜನಪದ ನಿಂತ ನೀರಲ್ಲ. ಸ್ವಾರ್ಥ ಮೂಲವಾದದ್ದು ಅಲ್ಲ, ಸಂಚಲನೆ, ಪರಿವರ್ತನೆ, ಸ್ವೀಕಾರ, ವಿನಿಮಯ ಇದರ ಮೂಲಮಂತ್ರ.

ಶಿಷ್ಟಪದ ವಿಜೃಂಭಿಸಿದಾಗ ಜನಪದ ಸ್ವಲ್ಪ ಹಿಂದೆ ಸರಿದರೂ ತನ್ನ ಸಂಪೂರ್ಣ ಅಸ್ತಿತ್ವ ಅಳಿಸಿಕೊಂಡಿಲ್ಲ. ಬೇಸಿಗೆಯಲ್ಲಿ ಬಾಡಿದರೂ ಕುಟುಕು ಜೀವ ಹಿಡಿದು ಉಸಿರಾಡುವ ಗರಿಕೆಯಂತೆ ಶಿಷ್ಟಪದದ ನಡುವೆ ಜನಪದ ಜೀವಿಸುತ್ತದೆ.

ಜನಪದಕ್ಕೆ ಸಂಬಂಧಿಸಿದ್ದು 'ಜಾನಪದ' ಅದರ ಸಮಸ್ತವನ್ನು ಒಳಗೊಂಡಿರುತ್ತದೆ. ಇದು ಮಾತು ಮತ್ತು ಕೃತಿಗಳಿಂದ ಅಭಿವ್ಯಕ್ತವಾಗುತ್ತದೆ. ಜನಪದ ಕಥೆ, ನೀತಿ, ಗಾದೆ, ಒಗಟು, ಲಾವಣಿ, ಮೊದಲಾದ ಶಾಬ್ದಿಕ ಪ್ರಕಾರಗಳು ಮಾತಿಗೆ ಮಾಧ್ಯಮವಾಗಿರುತ್ತವೆ.

ಹಾಗೆಯೇ ಜನಪದ ಸಂಪ್ರದಾಯ, ಆಚರಣೆ, ಕುಣಿತ, ಆಟಪಾಟ, ನಂಬಿಕೆ, ಪೂಜೆ ಮುಂತಾದವು ಕ್ರಿಯೆಗೆ ಮಾಧ್ಯಮವಾಗುತ್ತವೆ. ಜನಪದ ಸಂಸ್ಕೃತಿಯ ಅಂಗವಾಗಿ ಸಮಸ್ತ ಜನಪದ ಸಂಸ್ಕೃತಿಯ ತಿಳುವಳಿಕೆಯಾಗಿದೆ ಜಾನಪದ. ಈ ಹಿನ್ನೆಲೆಯಲ್ಲಿ ಮೊಳಕಾಲ್ಮೂರು ಗ್ರಾಮಪರಿಸರದ ಜಾನಪದ ಸಂಪತ್ತನೆಲ್ಲ ಅಧ್ಯಯನ ಮಾಡುವುದು ಮತ್ತು ಹೊರಗೆಡುವುದು ಸೂಕ್ತವೆನಿಸುತ್ತದೆ.

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಕರ್ನಾಟಕ ಜಾನಪದ ಸಂಪತ್ತಿನ ದೃಷ್ಠಿಯಿಂದ ಅತ್ಯಂತ ಫಲವತ್ತಾದ ಕ್ಷೇತ್ರ. ಕಾಲಾನುಗುಣವಾಗಿ ನಾಗರೀಕತೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ತಮ್ಮ ಅಘಾದವಾದ ಆಕರ್ಷಣಾ ಶಕ್ತಿಯಿಂದ ಭಾರತವನ್ನು ಆವರಿಸಿವೆ. ಹಾಗೆಯೇ ಕರ್ನಾಟಕವನ್ನು ಅನಾಮತ್ತಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಾ. ಪ್ರಾಚೀನವಾದುದನ್ನೆಲ್ಲ ತನ್ನ ಪ್ರಭಾವದಿಂದ ಗುಡಿಸಿ ಹಾಕುತ್ತಾ, ದಾಪು ಗಾಲಿಟ್ಟು ನಡೆಯುತ್ತಿದೆ. ಪಳ್ಳಿ ಪಟ್ಟಣಗಳೆನ್ನದೆ ಎಲ್ಲವನ್ನೂ ಮತ್ತು ಎಲ್ಲರನ್ನೂ ತನ್ನೆಡೆಗೆ ತೆಗೆದುಕೊಳ್ಳುತ್ತಿರುವ ಈ ಸಂಕ್ರಮಣ ಸಂದರ್ಭದಲ್ಲಿಯೂ ಸಹ ಪರಂಪರೆಯ ಬಗೆಗೆ ಪ್ರೀತಿ, ಆಸಕ್ತಿಗಳನ್ನು ಕಳೆದುಕೊಳ್ಳದ ತಮ್ಮ ಮೂಲ ಸಂಸ್ಕೃತಿಯನ್ನು ಆದಷ್ಟು ಮಟ್ಟಿಗೆ ಪರೀಕ್ಷಿಸಿಕೊಳ್ಳುವ ಹಾಗೂ ಚಲಾವಣೆಗೊಳಿಸುವ ಕಾಯಕದಲ್ಲಿ, ಗ್ರಾಮದ ಜನ, ತೊಡಗಿಸಿಕೊಂಡಿದ್ದಾರೆ, ಗ್ರಾಮ್ಯಗಳ ವೈವಿಧ್ಯ ಪೂರ್ಣಬದುಕಿಗೆ ಇನ್ನೂ ವಿವೇಚನಾ ಪೂರ್ವವಾದ ಪ್ರೀತಿಯನ್ನು ಉಳಿಸಿಕೊಂಡಿರುವ ವಿದ್ಯಾವಂತ ಜನಾಂಗ ಕಡಿಮೆ ಪ್ರಮಾಣದಲ್ಲಿಯಾದರೂ ಕಾರ್ಯನಿರತವಾಗಿವೆ ಎಂಬುದು ಸ್ಮರಣೀಯವಾಗಿದೆ.

ಜಾನಪದ ಇಂದು ಬಹುಮುಖಿಯ ಆಯಾಮಗಳಲ್ಲಿ ಮುಂದುವರಿಯುತ್ತಿರುವ ಕ್ಷೇತ್ರ. ಬಹುಮುಖ ಕ್ಷೇತ್ರಗಳಿಂದ ಆಧುನಿಕ ಮಾನವನಿಗೆ ಜನಪದ ಬಗೆಗಿನ ಅಂತಃ ಪ್ರಜ್ಞಾ ವಲಯದ ಪಳುವಳಿಕೆಗಳು ಮತ್ತು ಅವುಗಳ ಸಾಮಾಜಿಕ, ಸಾಂಸ್ಕೃತಿಕ ಸಂಬಂಧಗಳ ಪರಿಚಯ ಉಂಟಾಗಲು ಸಾಧ್ಯವಾಗಿದೆ. ಈ ಕ್ಷೇತ್ರದಲ್ಲಿನ ಅಭಿಮತ ಮತ್ತು ಅಗತ್ಯಗಳನ್ನು ಮನಗಂಡು ದೇಶವಿದೇಶಗಳಲ್ಲಿ ಜನಪದ ಸಂಸ್ಕೃತಿಗಳು ಸ್ಥಾಪನೆಗೊಂಡಿವೆ.

ಭಾರತ ಮೂಲತಃ ಹಳ್ಳಿಗಳ ದೇಶ. ಇಂದಿಗೂ ಸಹ ಶೇಕಡಾ ೭೦% ರಷ್ಟು ಜನರು ಹಳ್ಳಿಗಳಲ್ಲಿಯೇ ತಮ್ಮ ನಿತ್ಯ ಬದುಕಿನ ಜಟಕಾಬಂಡಿಯನ್ನು ತಳ್ಳುತ್ತಿದ್ದಾರೆ ಜಾಗತೀಕರಣ ಮತ್ತು ಆಧುನೀಕರಣದ ಪ್ರಭಾವದಿಂದಾಗಿ ಇತ್ತೀಚಿನ ದಿನಗಳಲ್ಲಿ ಗ್ರಾಮಗಳು ಸ್ವಲ್ಪ ಬದಲಾವಣೆ ಕಾಣುತ್ತಿವೆ. ಅದಕ್ಕೆ ಜಾಗತೀಕರಣದ ಅನೇಕ ಕಾರಣಗಳನ್ನು ಕೊಡಬಹುದಾದರೂ ಪ್ರಸ್ತುತ ಹಳ್ಳಿಗಳ ಜೀವನ ಸ್ವಲ್ಪಮಟ್ಟಿಗೆ ಸುಧಾರಣೆಹೊಂದಿ ಜನರಲ್ಲಿ ಹೊಸ ಚೇತನ ಹುಟ್ಟಿ ಜನರ ನಿತ್ಯ ಬದುಕನ್ನು ಬದಲಾಯಿಸುತ್ತಿದೆ. ಪ್ರಾಚೀನ ಕಾಲದಲ್ಲಿ

ಸಾಂಸ್ಕೃತಿಕ ಚಟುವಟಿಕೆ ಮುಂತಾದ ಸಂಸ್ಕೃತಿಗೆ ಪ್ರತೀಕವಾಗಿದ್ದಂತ. ಅಂಶಗಳು ಇಂದಿನ ಸಿಮೆಂಟ್ ಸಂಸ್ಕೃತಿಯ ಅಡಿಯಲ್ಲಿ ಮುಳುಗಿ ಹೋಗುತ್ತಿವೆ. ಇಂದಿನ ರಾಜಕಾರಣ ದೆಹಲಿಯಿಂದ ಹಳ್ಳಿಗೆ ಸುಲಭವಾಗಿ ಮುಟ್ಟುತ್ತಿದೆ. ಇದಕ್ಕೆಲ್ಲ ಪ್ರಮುಖ ಪ್ರಬಲ ಕಾರಣ ಪ್ರಸ್ತುತ ಸಮಾಜದಲ್ಲಿ ತಮ್ಮ ಬಲವಾದ ಛಾಪನ್ನು ಮೂಡಿಸಿರುವ ಆಧುನಿಕ ಮಾಧ್ಯಮಗಳೇ ಆಗಿವೆ. ಮಾಧ್ಯಮಗಳಿಂದ ಇಂದು ಇಡೀ ಪ್ರಪಂಚವನ್ನು ಜನರು ತಮ್ಮ ಕಣ್ಣಮುಂದೆ ತಮ್ಮ ತಮ್ಮ ಮನೆಯಲ್ಲಿಯೇ ವೀಕ್ಷಿಸುವಂತಾಗಿದೆ.

ಈ ರೀತಿಯ ಜನರ ನಿತ್ಯ ಬದುಕಿನ ಶೈಲಿಯಲ್ಲಿ ಗ್ರಾಮೀಣ ಪರಿಸರದ ಕಲ್ಪನೆಗಳು ಬದಲಾಗುತ್ತಿವೆ. ಈ ಹಿಂದೆ ಇದ್ದಂತಹ ಗ್ರಾಮ್ಯ ಕಲ್ಪನೆ ಇಂದು ಹೊಸರೂಪವನ್ನು ಪಡೆದು ರಂಗು ರಂಗಿನ ಚಿತ್ತಾರಗಳಿಂದ ಅಲಂಕೃತಗೊಂಡಂತಹ ಗ್ರಾಮೀಣ ಪ್ರದೇಶಗಳು ಆಕಾಶದಲ್ಲಿ ಮಿನುಗುವ ನಕ್ಷತ್ರಗಳಂತೆ ತಮ್ಮ ಬದುಕಿನ ಬಣ್ಣವನ್ನು ಬದಲಾಯಿಸುವ ದಿಕ್ಕಿನತ್ತ ಸಾಗಿವೆ.

ಪ್ರಸ್ತುತ ಮೊಳಕಾಲ್ಮೂರು ಗ್ರಾಮ ಅಧ್ಯಯನ ಕುರಿತಂತೆ ಈ ಪ್ರಬಂಧದಲ್ಲಿ ಮೊಳಕಾಲ್ಮೂರು ಗ್ರಾಮದ ಜನತೆಯ ನಿತ್ಯ ಚಟುವಟಿಕೆ, ರೀತಿ ನೀತಿ, ಆಚರಣೆ-ಸಂಪ್ರದಾಯ, ಇಲ್ಲಿನ ಸ್ಥಿತಿಗತಿಗಳಿಗೆ ಸಂಬಂಧಪಟ್ಟಂತೆ ಪ್ರಸ್ಥಾಪಿಸಿ ಅಧ್ಯಯಾನಕ್ಕೊಳ-ಪಡಿಸುವ ಉದ್ದೇಶವನ್ನು ಹೊಂದಿದೆ. ಈ ಮೊಳಕಾಲ್ಮೂರು ಗ್ರಾಮವು ಚಿತ್ರದುರ್ಗ(ಜಿಲ್ಲೆ)ದಿಂದ ಸುಮಾರು ೬೫ ಕಿ.ಮೀ ದೂರದಲ್ಲಿರುವ ಒಂದು ತಾಲ್ಲೂಕು ಕೇಂದ್ರ, ಜಿಲ್ಲೆಗೆ ಕಳಸವಿಟ್ಟಂತೆ ನಕ್ಷೆಯಲ್ಲಿ ಕಾಣುತ್ತದೆ. ಮೊಳಕಾಲ್ಮರು ಇಂದು ತಾಲ್ಲೂಕು ಕೇಂದ್ರವಾಗಿದ್ದರೂ ಸಹ ನಾವು ಕೇವಲ ಮೊಳಕಾಲ್ಮೂರು ಗ್ರಾಮವನ್ನಷ್ಟೆ ದೃಷ್ಟಿಯಲ್ಲಿಟ್ಟಿಕೊಂಡು ಆ ಗ್ರಾಮದ ಸಾಧಕ-ಬಾದಕಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚೆ ಮಾಡಲಾಗುತ್ತದೆ.

ಪ್ರಮುಖವಾಗಿ ಪ್ರಸ್ತುತ ಪ್ರಬಂಧದಲ್ಲಿ ಮೊಳಕಾಲ್ಮೂರು ಗ್ರಾಮಕ್ಕೆ ಸಂಬಂಧಿಸಿದಂತೆ ಆರು ಅಧ್ಯಾಯಗಳನ್ನು ವಿಂಗಡಿಸಿಕೊಂಡು ಪ್ರತಿಯೊಂದು ಅಧ್ಯಯದಲ್ಲೂ ಗ್ರಾಮದ ಸ್ಥಿತಿ ಗತಿಗತಿಗಳನ್ನಾಗಿ ನೈಜರೂಪದಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಮಹತ್ವವನ್ನು ಸಾದರಪಡಿಸಲಾಗಿದ್ದು ಎರಡನೇ ಅಧ್ಯಾಯದಲ್ಲಿ ಊರಿನ ಇತಿಹಾಸ, ಭೌಗೋಳಿಕ ಹಿನ್ನೆಲೆ, ಇಲ್ಲಿನ ಖನಿಜಸಂಪತ್ತು, ಅರಣ್ಯ ಸಂಪತ್ತು, ಜಲಸಂಪತ್ತುಗಳ ಬಗ್ಗೆ ವಿವೇಚಿಸಲಾಗಿದೆ. ಅಧ್ಯಾಯ ಮೂರರಲ್ಲಿ ಗ್ರಾಮದಲ್ಲಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಂತಹ ಸ್ಥಿತಿಗತಿಗಳನ್ನು, ಅಲ್ಲಿನ ಸ್ಥಳೀಯರೊಂದಿಗೆ ಚರ್ಚಿಸಿ ಅಧ್ಯಯನಕೊಳಪಡಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಇಡೀಗ್ರಾಮದ ಜನತೆ ಆಚರಿಸುವಂತಹ ರೂಡಿ ಸಂಪ್ರದಾಯಗಳು, ವಿಧಿ ಸಂಪ್ರದಾಯಗಳು ಹಬ್ಬ-ಹರಿದಿನಗಳನ್ನು ಮತ್ತು ಮದುವೆ,

ನಾಮಕರಣದಂತಹ ವಿಧಿಗಳನ್ನು ಹೇಗೆ ಆಚರಿಸುತ್ತಿದ್ದಾರೆ ಮತ್ತು, ಆಚರಣೆ ವಿಧಿಗಳಲ್ಲಿ ಕಂಡುಬರುವಂತಹ ಜಾನಪದ ಅಂಶಗಳೇನು ಆಧುನೀಕತೆಯ ಪ್ರಭಾವದಿಂದಾಗಿ ಜನರ ಜೀವನದ ಮೇಲೆ ಆಗಿರುವ ಪರಿಣಾಮಗಳೇನು ಎಂಬುದನ್ನು ವಿವೇಚಿಸಲಾಗಿದೆ. ಈ ಅಧ್ಯಾಯದಲ್ಲಿ ಪ್ರಸ್ತುತ ಸಮಕಾಲಿನತೆಯಲ್ಲಿ ಕಂಡುಬಂದಿರುವ ಗ್ರಾಮದ ಸ್ಥಿತ್ಯಂತರಗಳೇನು ಎಂಬುದನ್ನು ತಿಳಿಸಲಾಗಿದೆ. ಅಧ್ಯಾಯ ಆರರಲ್ಲಿ ಉಪಸಂಹಾರ. ಮುಖ್ಯವಾಗಿ ಮೊಳಕಾಲ್ಮುರು ಗ್ರಾಮ ಅಧ್ಯಯನಕ್ಕೆ ಈ ಗ್ರಾಮದ ಸುತ್ತಮುತ್ತಲಿನ ಪರಿಸರಕ್ಕೂ, ಮೊಳಕಾಲ್ಮೂರುಗ್ರಾಮದ ಪರಿಸರಕ್ಕೂ ಯಾವುದೇ ಹೆಚ್ಚಿನ ವ್ಯತ್ಯಾಸಗಳು ಕಂಡು ಬರುವುದಿಲ್ಲ ಆದ್ದರಿಂದ ಗ್ರಾಮವನ್ನಷ್ಟೇ ಅಲ್ಲ ಗ್ರಾಮದ ಸುತ್ತಮುತ್ತಲಿನ ಪರಿಸರವನ್ನು ಸಹ ಈ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾಗಿದೆ ಇಲ್ಲಿ ಸ್ಥಿತ್ಯಂತರ ಎಂಬ ಪದದ ಅರ್ಥವು ಒಟ್ಟಾರೆ ಗ್ರಾಮದ ಸ್ಥಿತಿಗತಿ ಮತ್ತು ಬದಲಾವಣೆಯನ್ನು ಸೂಚಿಸುತ್ತದೆ.

ಈ ವರೆಗೆ ಗ್ರಾಮ ಅಧ್ಯಯನಗಳ ಬಗೆಗೆ ಹಲವಾರು ಸಂಶೋಧನಾ ಪ್ರಬಂಧಗಳು, ಸಂಶೋಧನಾ ಕೃತಿಗಳು ಹೊರಬಂದಿರುವುದು ತಿಳಿಯುತ್ತದೆ. ಅದೇ ರೀತಿ ಗ್ರಾಮ ಅಧ್ಯಯನ ಕುರಿತು ಸಂಶೋಧಕರು ಅವರ ಅಧ್ಯಯನದ ಅಡಿಯಲ್ಲಿ ಇಡೀ ಗ್ರಾಮ್ಯ ಪರಿಸರದ ಚಿತ್ರಣವನ್ನು ಹಿಡಿದಿಟ್ಟಿದ್ದಾರೆ. ಹಾಗೆಯೇ ಒಂದು ಗ್ರಾಮದಲ್ಲಿರಬಹುದಾದ ಅನೇಕ ಆಚರಣೆ ಕಲೆ, ನಂಬಿಕೆ, ಧಾರ್ಮಿಕ ಪರಂಪರೆಗಳು ಸಾಮಾಜಿಕ ಜೀವನ, ಆರ್ಥಿಕ, ರಾಜಕೀಯ ಜೀವನವನ್ನು ಕುರಿತಂತೆ ಸಂಶೋಧನಾ ಗ್ರಂಥಗಳು ಈಗಾಗಲೇ ಕೆಲವು ವಿಶ್ವ ವಿದ್ಯಾಲಯಗಳಲ್ಲಿ ಪ್ರಚುರ ಪಡಿಸಿದಂತವುಗಳೇ ಆಗಿವೆ. ನನ್ನ ಈ ಅಧ್ಯಯನದಲ್ಲಿ ಪ್ರಮುಖವಾಗಿ ಕರ್ನಾಟಕದ ಬಯಲುಸೀಮೆ ಎಂದು ಹೆಸರಾದ ಚಿತ್ರದುರ್ಗ ಜಿಲ್ಲೆ ಮತ್ತು ಅಲ್ಲಿನ ಆಸುಪಾಸಿನ ಜಿಲ್ಲೆಗಳ ಸುತ್ತಲ ಪ್ರದೇಶವನ್ನು ಅನುಲಕ್ಷಿಸಿ ತಾಲ್ಲೂಕು ಕೇಂದ್ರವಾದ ಮೊಳಕಾಲ್ಮೂರು ಗ್ರಾಮದ ಬಗ್ಗೆಗಿನ ಜನರ ಬದುಕನ್ನು ಸಾದರಪಡಿಸಿ ಅಧ್ಯಯನಕ್ಕೊಳ ಪಡಿಸುವುದೇ ನನ್ನ ಪ್ರಬಂಧದ ಮಹತ್ವವಾಗಿದೆ.

ಅಧ್ಯಾಯನದಲ್ಲಿ ವೈಧಾನಿಕತೆ, ಪ್ರಶ್ನಾವಳಿ, ಅವಲೋಕನ, ಸಂಧರ್ಶನ, ಸಾಮಾನ್ಯ ವಿಧಿವಿಧಾನಗಳನ್ನು ಸಂಶೋಧನಾ ಸಂದರ್ಭದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗಿದ್ದು. ಈ ಎಲ್ಲಾ ಅಂಶಗಳು ಅಧ್ಯಯನಕ್ಕೆ ಸಕರ್ಮಕವಾಗಿರುತ್ತವೆ.

ಅಧ್ಯಾಯ-ಎರಡು

ಮೊಳಕಾಲ್ಮೂರು ಗ್ರಾಮದ ಭೌಗೋಳಿಕ ಹಿನ್ನೆಲೆ

ಅಧ್ಯಾಯ-ಎರಡು

ಮೊಳಕಾಲ್ಮೂರು ಗ್ರಾಮದ ಭೌಗೋಳಿಕ ಹಿನ್ನೆಲೆ

ಪ್ರತಿಯೊಂದು ಗ್ರಾಮದ ಉಗಮಕ್ಕೂ ಒಂದೊಂದು ಮೂಲ ಕಾರಣವಿರುತ್ತದೆ. ಸಾಮಾನ್ಯವಾಗಿ ಆಗ್ರಾಮದ ಉಗಮ-ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದೊಂದು ತೆರೆನಾದ ವಿಶಿಷ್ಟ ರೀತಿಯ ಚರಿತ್ರೆಯನ್ನೊಳಗೊಂಡಿರುತ್ತದೆ ಅದರಂತೆ ಮೊಳಕಾಲ್ಮೂರು ಗ್ರಾಮದ ಭೌಗೋಳಿಕ ಹಿನ್ನಲೆಗೂ ವಿಶೇಷತೆಯಿರುವುದನ್ನು ಗಮನಿಸಬಹುದು. ಒಂದು ಸ್ಥಳ ಅಭಿವೃದ್ಧಿ ಪಥದಲ್ಲಿ ಚಲಿಸಲು ನೆರವಾಗುವ ಕಾರಣಗಳಲ್ಲಿ ಅದು ಗ್ರಾಮ/ನಗರಕ್ಕೆ ಭೌಗೋಳಿಕವಾಗಿ ಎಷ್ಟು ಸಮೀಪದಲ್ಲಿದೆ ಮತ್ತು ವ್ಯವಹಾರಿಕವಾಗಿ ಬಾಹ್ಯ ಜಗತ್ತಿನೊಂದಿಗೆ ಎಷ್ಟು ನಿಕಟ ಸಂಬಂಧ ಹೊಂದಿದೆ ಎಂಬುದು ಪ್ರಮುಖ ನಿರ್ಣಾಯಕ ಅಂಶವಾಗಿರುತ್ತದೆ.

ಮೊಳಕಾಲ್ಮೂರು ಗ್ರಾಮದ ಹಿನ್ನೆಲೆಯನ್ನು ಅವಲೋಕಿಸಿದಾಗ ಇದು ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದ್ದು ಪ್ರಸ್ತುತ ಅಧ್ಯಯನದಲ್ಲಿ ಒಟ್ಟಾರೆ ತಾಲ್ಲೂಕನ್ನು ಅಧ್ಯಯನಕ್ಕೆ ಒಳಪಡಿಸಲಾಗಿಲ್ಲ. ಕೇವಲ ಮೊಳಕಾಲ್ಮರು ಗ್ರಾಮದ ಬಗೆಗೆ ಮಾತ್ರ ಅಧ್ಯಯನದಲ್ಲಿ ತೊಡಗಿಸಿ ಕೊಳ್ಳಲಾಗಿದೆ ಆದರೆ ಮೊಳಕಾಲ್ಮರು ಗ್ರಾಮದ ಒಟ್ಟಾರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಜೀವನದ ಎಲ್ಲಾ ಅಂಶಗಳು ಗ್ರಾಮದ ಸುತ್ತಮುತ್ತಲಿರುವ ಪ್ರದೇಶವನ್ನು ಬಿಟ್ಟು ಹೊರತಾಗಿಲ್ಲ. ಆದ್ದರಿಂದ ಮೊಳಕಾಲ್ಮೂರುಪರಿಸರದ ಪ್ರಾದೇಶಿಕ ಹಿನ್ನೆಲೆಯನ್ನು ಸಹ ಹೇಳುವುದು ಸೂಕ್ತ ಎನಿಸುತ್ತದೆ.

ಚಿತ್ರದುರ್ಗದಿಂದ ೬೫ಕಿ.ಮೀ. ಅಂತರದಲ್ಲಿರುವ ಮೊಳಕಾಲ್ಮೂರು ಗ್ರಾಮ, ಚಿತ್ರದುರ್ಗ ಜಿಲ್ಲೆ ಇದು ಭಾರತಕ್ಕೆ ಜಮ್ಮು-ಕಾಶ್ಮೀರದ ತಲೆಭಾಗ ಹೇಗಿದೆಯೋ ಅದೇ ರೀತಿ ಚಿತ್ರದುರ್ಗ ಜಿಲ್ಲೆಯ ತಲೆ ಭಾಗವೆಂದರೂ ಅತಿಶಯವಾಗಲಾರದು. ಈ ತಲೆಯ ಭಾಗ ನೋಡಲು ಜಿರಾಫೆಯ ಕತ್ತಿನಂತೆ ಉದ್ದವಾದ ಪ್ರಾದೇಶಿಕತೆ ಪರಿಸರವನ್ನು ಪಡೆದಿದೆ.

[illegible]

[illegible]

[illegible]

[illegible]

[illegible]

ಈ ಮೊಳಕಾಲ್ಮೂರಿನ ಪೂರ್ವ ಭಾಗಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ರಾಯದುರ್ಗ, ಪಶ್ಚಿಮ ಮತ್ತು ಉತ್ತರಕ್ಕೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಸಂಡೂರು ತಾಲ್ಲೂಕುಗಳ ಪರಿಸರ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ/ಗ್ರಾಮಗಳ ಗಡಿಯನ್ನು ಹೊಂದಿದೆ. ಹೀಗಾಗಿ ಈ ಮೊಳಕಾಲ್ಮರು ಗ್ರಾಮ ತನ್ನ ಸುತ್ತ ಮುತ್ತಲ ಪರಿಸರ ಸಾಮಾನ್ಯವಾಗಿ ಗುಡ್ಡ ಗಾಡು, ಬಯಲು ಸೀಮೆಗೆ ಸೇರಿದಂತಹ ಭೂ ಭಾಗವನ್ನು ಒಳಗೊಂಡಿರುವುದನ್ನು ಕಾಣಬಹುದು.

ಮೊಳಕಾಲ್ಮರು ಗ್ರಾಮದ ಪ್ರಾಚೀನತೆ ಅತ್ಯಂತ ಪುರಾತನವಾದದು. ಆದಿಮಾನವನ ಮೂಲ ಹೆಜ್ಜೆಗಳನ್ನು ಗುರುತಿಸುವಂತಹ ಅಂಶಗಳು ಈ ಗ್ರಾಮದ ಸುತ್ತಲೂ ಕಂಡುಬರುವುದು ಒಂದು ವಿಶೇಷದ ಸಂಗತಿ, ಪೂರ್ವಶಿಲಾಯುಗದಿಂದಲೂ ಈ ಪ್ರದೇಶಗಳಲ್ಲಿ ಜನವಸತಿ ಇತ್ತೆಂಬುದಕ್ಕೆ ಕೆಲವು ನಂಬಲಾರ್ಹ ಸಾಕ್ಷಿಗಳು ದೊರೆತಿರುವುದೇ ಇದಕ್ಕೆ ಕಾರಣ. ಈ ಅಂಶ ಪ್ರಾಕ್ತಾನ ಇಲಾಖೆಯ ವತಿಯಿಂದ ನಡೆಸಿದಂತಹ ಅನ್ವೇಷಣೆಗಳಿಂದ ತಿಳಿದು ಬಂದಿದೆ, ಪ್ರಾಕ್ತಾನ ಮತ್ತು ಪುರಾತತ್ವ ಇಲಾಖೆಗಳಲ್ಲಿ ಕೆಲವು ದಾಖಲೆಗಳು ಸಹ ಸಿಗುತ್ತವೆ.

ಮೊಳಕಾಲ್ಮೂರು ಗ್ರಾಮಟ ಇತಿಹಾಸ ಮತ್ತು ಅದರ ಪೂರ್ವಾಪರವನ್ನು ಅವಲೋಕಿಸಿದಾಗ ನಾವು ಇದನ್ನು ಸುಮಾರು ಕ್ರಿ.ಶ.ಮೂರನೇ ಶತಮಾನದಿಂದಲೇ ಗುರುತಿಸಬಹುದೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಸುಮಾರು ಕ್ರಿ.ಶ.೮ನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದಂತಹ ಭಾರತದ ಮೊದಲ ಸಾಮ್ರಾಜ್ಯವಾದ ಮೌರ್ಯ ಸಾಮ್ರಾಟ ಅರಸರು ಈ ಪ್ರದೇಶಗಳಲ್ಲಿ ತಮ್ಮ ಆಡಳಿತದ ಅಧಿಪತ್ಯವನ್ನು ಸ್ಥಾಪಿಸಿದ್ದರು ಎಂಬುದನ್ನು ಹೇಳಲಾಗುತ್ತದೆ. ಅದಕ್ಕೆ ದೊರೆತಿರುವ ಉತ್ತಮ ದಾಖಲೆಗಳೆಂದರೆ ಬ್ರಹ್ಮಗಿರಿ, ಅಶೋಕಸಿದ್ಧಾಪುರ, ಜಟಿಂಗರಾಮೇಶ್ವರ ಮುಂತಾದ ಕಡೆಗಳಲ್ಲಿ ದೊರೆತಂತಹ ಶಾಸನಗಳ ಸಾಹಿತ್ಯದಿಂದ ಈ ಅಂಶಗಳು ದೃಡಪಟ್ಟಿವೆ, ಹಾಗಾಗಿ ಈ ಪ್ರದೇಶವು ಅಶೋಕನ ಕಾಲಕ್ಕೆ ಪ್ರಚಲಿತದಲ್ಲಿದ್ದುದನ್ನು ಗಮನಿಸಬಹುದಾಗಿದೆ. ಆದ್ದರಿಂದ ಇದರ ಇತಿಹಾಸವನ್ನು ನಾವು ಆರಂಭದಲ್ಲಿಯೇ ಗುರುತಿಸಲು ಸಾಧ್ಯವಾಗಿದೆ.[೧]

ಕ್ರಿ.ಶ.೧೦ನೇ ಶತಮಾನದಲ್ಲಿ ಮೊಳಕಾಲ್ಮೂರು ನೊಳಂಬವಾಡ ೩೨೦೦ ಸೀಮೆಯಲ್ಲಿ ಸೇರ್ಪಡೆಗೊಂಡಿತ್ತು. ತದನಂತರ ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಆಳ್ವಿಕೆಗೆ ಒಳಪಟ್ಟು, ರಾಯದುರ್ಗದ ಪಾಳೆಗಾರರ ಆಡಳಿತಕ್ಕೆ ಸೇರಿತ್ತು. ಹಟ್ಟಿಯ ಪಾಳೇಗಾರ ಮಲ್ಲಪ್ಪ ನಾಯಕನು ಈ ಪ್ರದೇಶವನ್ನು ರಾಯದುರ್ಗದ ಬೊಮ್ಮನಾಯಕನಿಗೆ ೨೦೦೦ ಕಪ್ಪು ಹಸುಗಳನ್ನು, ೧೦೦೦ ಬಿಳಿ ಹಸುಗಳನ್ನು ಕೊಟ್ಟು ಪಡೆದುಕೊಂಡು ಇಲ್ಲಿನ ಬೆಟ್ಟದ ಮೇಲಿನ ಕೋಟೆ ಹಾಗೂ ಸರೋವರಗಳನ್ನು ಕಟ್ಟಿಸಿದನು. ಮುಂದೆ ಇದು ಚಿಚ್ಚು

ಗತ್ತಿ ಭರಮಣ್ಣ ನಾಯಕನ ಕಾಲದಲ್ಲಿ ಕ್ರಿ.ಶ.೧೬೮೯-೧೭೨೧ರ ಅವಧಿಯಲ್ಲಿ ಚಿತ್ರದುರ್ಗ ಪಾಳೇಗಾರರ ಆಳ್ವಿಕೆಯಲ್ಲಿ ಲೀನವಾಯಿತು. ಆನಂತರ ಹೈದರ್, ಟಿಪ್ಪು, ಬ್ರಿಟೀಷ್ ಮೈಸೂರು ಒಡೆಯರ ಆಳ್ವಿಕೆಗೆ ಒಳಗಾಗಿ ೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಗೆ ಮೊಳಕಾಲ್ಮೂರು ಪ್ರದೇಶವು ಸೇರಿತು. ಹಾಗೆಯೇ ಈ ಪ್ರದೇಶದಲ್ಲಿ ನಡೆಸಿದಂತಹ ಸಂಶೋಧನೆಗಳಿಂದ ಮತ್ತು ಖಚಿತ ಮಾಹಿತಿಗಳು ಈ ಗ್ರಾಮದ ಮೇಲೆ ಬೆಳಕು ಚೆಲ್ಲುತ್ತವೆ.[೨]

ಪದ ನಿಷ್ಪತ್ತಿ

ಮೊಳಕಾಲ್ಮೂರು ಎಂಬ ಪದದ ಬಗೆಗೆ ನಿಷ್ಪತ್ತಿಯನ್ನು ನಂಬಲರ್ಹವಾದ ನಿಯಮಿತ ಅರ್ಥಗಳನ್ನು ಕೊಡಲಾಗದಿದ್ದರೂ, ಸಾಮಾನ್ಯ ಜನರಿಂದ ಸಂಗ್ರಹಿಸಿದಂತಹ ಸಾಮಾನ್ಯ ಅರ್ಥವನ್ನು ನೀಡುವುದು ಸಾಧ್ಯವಾಗಿದೆ ಅಂತೆಯೇ ಮೊಳಕಾಲ್ಮೂರು ಎಂಬ ಹೆಸರು ಈ ಪ್ರದೇಶದಲ್ಲಿ ದೊರೆಯುತ್ತಿದ್ದಂತಹ ಜಲ ಸಸ್ಯದಿಂದ ಬಂದಿರಬಹುದು. ಅಲ್ಲದೆ ಈ ಊರಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಕೋಟೆಯನ್ನು ಶತ್ರು ಪಕ್ಷದವರು ವಶಪಡಿಸಿಕೊಳ್ಳಲು ಬಂದಾಗ ಇಲ್ಲಿನ ಸೈನಿಕರು ಶತ್ರುಗಳನ್ನು ಹಿಮ್ಮೆಟ್ಟಿಸಲು ಕೋಟೆಯ ಮೇಲಿಂದ ಕಡಿದಾದ ಬಂಡೆಗಳ ಮೇಲೆ ಎಣ್ಣೆ ಮತ್ತು ರಾಗಿಯನ್ನು ಸುರಿದರು. ಇದರಿಂದ ಕೋಟೆಯನ್ನು ಹತ್ತುತ್ತಿದ್ದ ಶತ್ರು ಸೈನಿಕರು ಹತ್ತುತ್ತಿದ್ದಂತೆಯೇ ಜಾರಿಕೊಂಡು ಬೀಳತೊಡಗಿದರು. ಬಿದ್ದಂತಹವರಿಗೆ ಮೊಳಕಾಲು ಮುರಿದುಹೋಗಿ ಮತ್ತೆ ಹತ್ತದೇ ಇರುವ ಹಾಗೆ ಮಾಡಿದ್ದರಿಂದ ಈ ಪ್ರದೇಶಕ್ಕೆ ಮೊಳಕಾಲು ಮುರಿ, ಮೊಳಕಾಲ್ಮುರಿ, ನಂತರದ ದಿನಗಳಲ್ಲಿ ಮೊಳಕಾಲ್ಮೂರು ಎಂಬ ಸ್ಪಷ್ಟವಾದ ಉಚ್ಚಾರಣೆ ಚಾಲ್ತಿಗೆ ಬಂತು ಎಂದು ಹೇಳಲಾಗುತ್ತದೆ.

ಅದರಂತೆ ಈ ಐತಿಹ್ಯವನ್ನು ಪುಷ್ಠೀಕರಿಸಲು ಯಾವುದೇ ದಾಖಲೆಗಳು ನಿಖರವಾಗಿ ಸಿಗುವುದಿಲ್ಲ. ಅದೆಲ್ಲ ಜನಪದರ ಕಲ್ಪನೆಗೆ ಸಂಬಂಧಿಸಿದ್ದು, ಆ ಕಲ್ಪನೆಯೇ ಇಂದಿಗೂ ಶಾಶ್ವತವಾಗಿ ಮುಂದುವರಿದುಕೊಂಡು ಬಂದಿದೆ. ಅಂದರೆ ಇಲ್ಲಿನ ಜನಪದರಿಗಿರುವ ಮಹತ್ವ, ಅವರ ಮಾತಿನ ದೃಢೀಕೃತೆ, ನಿತ್ಯ ನಿರಂತರವಾಗಿ ಉಳಿಸಿಕೊಂಡು ಬಂದಿರುವುದು ಇಲ್ಲಿನ ಜನರ ಮತ್ತೊಂದು ವಿಶೇಷತೆ ಎಂದರೆ ತಪ್ಪಾಗಲಾರದು.

ಮೊಳಕಾಲ್ಮುರು ಗ್ರಾಮದ ಒಟ್ಟಾರೆ ಸುತ್ತಳತೆ ೪.೧೦ ಕಿ.ಮೀ ವ್ಯಾಪ್ತಿ ಹೊಂದಿದ್ದು ಇಲ್ಲಿನ ಜನಸಂಖ್ಯೆ ೧೫.೦೦೦ (ಕೃಪೆ- ಪಂಚಾಯ್ತಿ ಕಾರ್ಯಾಲಯ ಮೊಳಕಾಲ್ಮೂರು) ಇದೆ

ಪುರುಷರ ಸಂಖ್ಯೆ	೭,೩೪೫
ಸ್ತ್ರೀಯರ ಸಂಖ್ಯೆ	೬,೭೮೮

ಒಟ್ಟು ಮತದಾರರ ಸಂಖ್ಯೆ ೧೨,೭೨೩

ಲಿಂಗಾನುಪಾತ ೧,೦೦೦ಕ್ಕೆ ೯೨೪

(ಕೃಪೆ- ಪಂಚಾಯ್ತಿ ಕಾರ್ಯಾಲಯ ಮೊಳಕಾಲ್ಮೂರು)

ಹೀಗೆ ಗ್ರಾಮದಲ್ಲಿ ಸಂಪತ್ ಭರಿತವಾದ ಜನಸಂಖ್ಯೆಯಿದೆ.

ಸಂಪತ್ತು

ಇಲ್ಲಿನ ಮುಖ್ಯ ಖನಿಜ ಸಂಪತ್ತುಗಳೆಂದರೆ ಈ ಪ್ರದೇಶದ ಸುತ್ತಮುತ್ತಲಿನಲ್ಲಿ ಬೆಟ್ಟ ಗುಡ್ಡಗಳಿವೆ. ಈ ಬೆಟ್ಟಗಳಲ್ಲಿ ನೀರಿನ ತಾಣಗಳು ನೈಸರ್ಗಿಕ ಗವಿಗಳು, ಕಲ್ಲಾಸರೆಗಳು ಅಧಿಕ ಪ್ರಮಾಣದಲ್ಲಿದ್ದು ಈ ಅಂಶಗಳು ಆದಿಮಾನವನ ವಾಸ್ತವ್ಯಕ್ಕೆ ಅನುಕೂಲಕರವಾಗಿದ್ದವು. ಎಂಬುದನ್ನು ಸ್ಪಷ್ಟಪಡಿಸುತ್ತದೆ ಮತ್ತು ಈ ಪ್ರದೇಶದ ಸುತ್ತಮುತ್ತ ಲಿನ ಹಲವಾರು ನೆಲೆಗಳು ಪ್ರಾಗೈತಿಹಾಸಿಕ ಕಾಲದ ಅನೇಕ ಪ್ರಾಚೀನ ಅವಶೇಷಗಳು ದೊರೆತಿವೆ. ಇದರ ಉತ್ತರ ಭಾಗದಲ್ಲಿರುವ ಸಂಗನಕಲ್ಲು, ತೆಕ್ಕಲ ಕೋಟೆ, ಹಲಕುಂದಿ, ಕಪ್ಪಗಲ್ಲು, ಕೂನಬೇವು, ಚಿಪ್ಪನ ಕೆರೆ ಮುಂತಾದ ಕಡೆ ಹಾಗೂ ಪೂರ್ವದಲ್ಲಿರುವ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನಲ್ಲಿ ಹಳೆ ಶಿಲಾಯುಗದ ಮಾನವನ ಕುರುಹುಗಳು ದೊರೆತಿವೆ ಈ ಎಲ್ಲ ಸಂಗತಿಗಳಿಂದ ಒಟ್ಟಾರೆ ತಿಳಿದುಬರುವುದೇನೆಂದರೆ ಇಲ್ಲಿ ಮೂಲ ಮಾನವನಿಂದಲೂ ಜನವಾಸ್ತವ್ಯ ಇತ್ತು ಮತ್ತು ಹಾಗೆ ಮುಂದುವರಿದುಕೊಂಡು ಬಂದಿರುತ್ತದೆ ಎಂಬುದನ್ನು ಪರೋಕ್ಷವಾಗಿ ತಿಳಿಸುತವಂತಹ ವಿಷಯಗಳಾಗಿವೆ. ಇದರ ಉತ್ತರ ಅಕ್ಷಾಂಶ ೧೪.೪ ರಿಂದ ೧೫.೨ ಮತ್ತು ಪೂರ್ವ ರೇಖಾಂಶ ೨೬.೪ ರಿಂದ ೭೭.೦೭ರವರೆಗೆ ಬಾಚಿಕೊಂಡಿದೆ.[೩] ಹೆಚ್ಚಿನ ಪ್ರಮಾಣದಲ್ಲಿ ಗ್ರಾನೈಟ್ ಶಿಲೆ, ಗಣಿಗಾರಿಕೆ ಮಾಡಲಾಗುತ್ತಿದ್ದು ತಾಲ್ಲೂಕಿನ ಇತರ ಭಾಗದಲ್ಲಿಯೂ ಈ ಶಿಲೆಯ ಗಣಿಗಾರಿಕೆ ನಡೆಯುತ್ತಿದೆ. ಈ ಪ್ರದೇಶದಲ್ಲಿ ಗ್ರಾನೈಟ್ ಶಿಲೆಯ ಗಣಿಗಾರಿಕೆಯ ಸಂಪ್ರದಾಯ ಬೃಹತ್ ಶಿಲಾಯುಗದ ಸಂಸ್ಕೃತಿ ಹಂತದಿಂದಲೇ ಆರಂಭಿಸಿರುವ ಸಾಧ್ಯತೆಗಳಿವೆ. ಏಕೆಂದರೆ ಈ ಸಂಸ್ಕೃತಿಯ ಜನರು ತಮ್ಮ ಸಮಾಧಿಗಳಿಗೆ ಬಳಸಿರುವ ಗ್ರಾನೈಟ್ ಶಿಲೆಯ ಚಪ್ಪಡಿಗಳಿಂದ ದೃಡಪಡಿಸಬಹುದು.[೪]

ಗ್ರಾಮದ ಸುತ್ತಮುತ್ತಲೂ ಯಾವುದೇ ದೈತ್ಯನದಿಗಳು ಹರಿಯದಿದ್ದರೂ ತುಂಗಾಭದ್ರಾನದಿಯ ಮುಖ್ಯ ಉಪನದಿಯಾದ ಜಗನಹಳ್ಳ (ಸಣ್ಣಹಗರಿ) ಹರಿಯುತ್ತದೆ. ಈ ನದಿಯನ್ನು 'ಪಾಪಹಾರಿ' ಅಥವಾ 'ಪಾಪನಾಶಿನಿ' ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಚಿನ್ನಹಗರಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಜಗನ ಹಳ್ಳಿ ಎಂಬ ಹೆಸರಿನಿಂದ ಚಿತ್ರದುರ್ಗ, ಜಗಳೂರು, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹರಿದು ಅನೇಕ ಕೆರೆಗಳಿಗೆ ಜಲಮೂಲವಾಗಿದ್ದು ಮುಂದೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕನ್ನು

ಪ್ರವೇಶಿಸಿ ಮೊಳಕಾಲ್ಮುರು ಪ್ರದೇಶದಲ್ಲಿ ಹರಿದು ಆಂಧ್ರಪ್ರದೇಶವನ್ನು ಸೇರುತ್ತದೆ.[೫] ಈ ಉಪನದಿಗೆ ರಂಗಯ್ಯನ ದುರ್ಗ ಎಂಬ ಹೆಸರಿಟ್ಟು ಅದಕ್ಕೊಂದು ಅಣೆಕಟ್ಟನ್ನು ನಿರ್ಮಿಸಿದ್ದಾರೆ. ಈ ಜಲಾಶಯದಿಂದ ಅಲ್ಲಿಯೇ ಕೆಲವೇ ಹಳ್ಳಿಗಳಿಗೆ – ಕೆರೆಗಳಿಗೆ ನೀರು ಸರಬರಾಜು ಮಾಡುತ್ತಿದ್ದು ಸೀಮಿತ ಪ್ರದೇಶಗಳಲ್ಲಿ ನೀರಾವರಿ ವ್ಯವಸ್ಥೆಯಿಂದ ಕೆಲವೊಂದು ಹಳ್ಳಿಗಳಿಗೆ ಉಪಯುಕ್ತವಾಗಿದೆ. ಬಹುತೇಕ ಪ್ರದೇಶವು/ಜಮೀನುಗಳು ಬೆದ್ದಲು (ಮಳೆಯಾಶ್ರಿತ ಭೂಮಿ) ಭೂಮಿಯಿಂದ ಕೂಡಿದ್ದು ಋತು ಕಾಲಮಾನದ ಮಳೆಗಾಲದಲ್ಲಿ ಮಾತ್ರ ಜನರು ಒಳ್ಳೆಯ ಫಲವತ್ತಾದ ಫಸಲನ್ನು ತೆಗೆದುಕೊಳ್ಳಲು ಸಾಧ್ಯ. ಒಂದು ವೇಳೆ ಮಳೆಯೇ ಬಾರದೆ ಹೋದರೆ ಅಥವಾ ಕಾಲಕ್ಕೆ ಸರಿಯಾಗಿ ಮಳೆಯಾಗದೇ ಹೋದರೆ ಅಲ್ಲಿನ ಭೂಮಿಯೆಲ್ಲಾ ಬಂಜರು ಭೂಮಿಯಾಗಿ ಅಥವಾ ಯಾವುದೇ ಬೆಳೆಯನ್ನು ಬೆಳೆಯದೇ ಇರುವಂತಹ ಸಂದರ್ಭ ಕಂಡು ಬರುತ್ತದೆ. ಹೀಗಾಗಿ ಇಲ್ಲಿನ ಜನರಿಗೆ ಮಳೆಯೇ ಮುಖ್ಯ, ಮಳೆ ಬಂದರೆ ಮಾತ್ರ ಇಲ್ಲಿರುವ ಜನರ ಬದುಕು ಬಂಗಾರವಾಗಲು ಸಾಧ್ಯ ಎಂಬುದನ್ನು ನನ್ನ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು

೧. ಮೊಳಕಾಲ್ಮೂರು ತಾಲ್ಲೂಕಿನ ಮ್ಯಾಸ ನಾಯಕರ ಭಾಷಿಕ ಅಧ್ಯಯನ, ಆಂಜನೇಯ, ಪುಟ ಸಂಖ್ಯೆ-೯, ೧೦. ೨೦೦೩

೨. ಮೊಳಕಾಲ್ಮುರು ತಾಲ್ಲೂಕುದರ್ಶನ, ಕೆ.ಎನ್.ಭಿಮಾರೆಡ್ಡಿ, ಪುಟ ಸಂಖ್ಯೆ-೬, ೧೯೮೭

೩. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವದ ಪರಿಸರ, ಜಯಣ್ಣ ಯು, ಪುಟ ಸಂಖ್ಯೆ-೨೨, ೨೩. ೨೦೦೨

೪. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩, (ಸಂ) ಸೂರ್ಯನಾಥ್ ಯು.ಕಾಮತ್

೫. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ, ಜಯಣ್ಣ ಯು, ೨೦೦೨.

ಅಧ್ಯಾಯ–ಮೂರು

ಸಾಮಾಜಿಕ ಸ್ಥಿತ್ಯಂತರಗಳು

ಆರ್ಥಿಕ ಸ್ಥಿತ್ಯಂತರಗಳು

ರಾಜಕೀಯ ಸ್ಥಿತ್ಯಂತರಗಳು

ಅಧ್ಯಾಯ–ಮೂರು

ಸಾಮಾಜಿಕ ಸ್ಥಿತ್ಯಂತರಗಳು

ಸಾಮಾಜಿಕ, ಭೌತಿಕ ಹಾಗೂ ಭಾವನಾತ್ಮಕ ಅವಶ್ಯಕತೆಗಳಿಗನುಗುಣವಾಗಿಯೇ ಸಮಾಜ ರಚನೆ ಮಾಡಿಕೊಂಡಿರುತ್ತಾರೆ. ಈ ಸಾಮಾಜಿಕ ರಚನೆಗಳು ಹಂತಹಂತವಾಗಿ ಬೆಳವಣಿಗೆ ಹೊಂದುತ್ತಾ ಒಂದು ಬೃಹತ್ ಸಮಾಜವಾಗಿ ಮಾರ್ಪಡುತ್ತದೆ. ಇಂತಹ ಸಮಾಜದಲ್ಲಿಯೇ ಮಾನವ ಜೀವಿಸುತ್ತಾನೆ. ಜೀವಿಸಬೇಕಾಗುತ್ತದೆ. ಪ್ರಸಿದ್ದ ಚಿಂತಕರು ಹೇಳುವಂತೆ ಮಾನವ ಮೂಲತಃ ಸಮೂಹ ಜೀವಿ–ಸಂಘಜೀವಿ' ಎಂಬ ಮಾತಿನಂತೆ ಮನುಷ್ಯ ಒಂಟಿಯಲ್ಲ, ಅವನ ಸುತ್ತಲೂ ಹಲವು ಸಮೂಹಗಳು–ಸಮಾಜದಲ್ಲಿ ರಚನೆಗೊಂಡಿರುವುದರಿಂದ ಮಾನವ ಸಮಾಜದ ಹೊರತಾಗಿ ಏನೇನು ಮಾಡುವಂತಿಲ್ಲ. ಏಕೆಂದರೆ ಅವನು ಸಮಾಜದ ಒಂದು ಭಾಗವೇ ಆಗಿರುವುದರಿಂದ, ಮನುಷ್ಯ ಅವನ ಕುಟುಂಬದ ರಚನೆ ನೆರೆ ಹೊರೆಯ ಸಂಬಂಧ, ವ್ಯವಹಾರಿಕ ಸಂಬಂಧ ಇತ್ಯಾದಿ ಚಟುವಟಿಕೆಗಳಲ್ಲಿ ಶುದ್ಧ ಭಾವನೆಗಳಿಂದ ಕೂಡಿದ ಸಂಬಂಧವನ್ನು ಏರ್ಪಡಿಸಿಕೊಂಡಿರುತ್ತಾನೆ. ಸಮಾಜ ಮತ್ತು ವ್ಯಕ್ತಿ ಇವೆರೆಡೋ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದರೆ ತಪ್ಪಾಗಲಾರದು.

ಭಾರತ ವಿವಿಧ ಸಂಸ್ಕೃತಿಯ ಜನರನ್ನು, ವಿವಿಧ ಸಮೂಹದ ವ್ಯಕ್ತಿಗಳನ್ನು ಹೊಂದಿರುವ ಬೃಹತ್ ರಾಷ್ಟ್ರ, ಮೂಲತಃ ನಮ್ಮ ಭಾರತ ಹಳ್ಳಿಗಳ ದೇಶವಾಗಿರುವುದರಿಂದ ಈ ದೇಶದಲ್ಲಿ ಹಲವಾರು ರೀತಿಯ ಜನಾಂಗಗಳನ್ನು, ಸಂಸ್ಕೃತಿಯನ್ನು ಕಾಣಬಹುದಾಗಿದೆ. ಈ ತರಹದ ಒಟ್ಟಾರೆ ಸಂಸ್ಕೃತಿಯು ನೋಡುಗರ ಮನದಲ್ಲಿ ಯಾವುದೇ ಕೆಟ್ಟ ಆಲೋಚನೆಗಳು ಮೂಡದಂತೆ ಗಟ್ಟಿಯಾದ ಸುಸಂಸ್ಕೃತ ಭಾವನೆಗಳನ್ನು ಮೂಡಿಸುವುದರಿಂದ ಇಂದಿಗೂ ನಮ್ಮ

[illegible]

[illegible]

[illegible]

[illegible]

[illegible]

ಭಾರತ ಅಥವಾ ಭಾರತ ಸಂಸ್ಕೃತಿ ಇತರೆ ರಾಷ್ಟ್ರಗಳಿಗೆ ಮಾದರಿಯೆನಿಸಿದೆ. ಹಾಗೆಯೇ ಇಲ್ಲಿನ ಜನರ ನಡೆನುಡಿ, ಆಚರಣೆ–ಸಂಪ್ರದಾಯ, ನಂಬಿಕೆ, ಕಲೆ, ವಾಸ್ತುಶಿಲ್ಪ, ಎಲ್ಲವೂ ವಿಶೇಷ ರೀತಿಯಾಗಿ ನೋಡುಗರಿಗೆ ಉತ್ತಮ ಗುಣಾತ್ಮಕ ಭಾವನೆಯನ್ನು ಮೂಡಿಸುತ್ತದೆ. ಹೀಗಾಗಿ ನಮ್ಮ ಸಂಸ್ಕೃತಿಯ ಬಗ್ಗೆ ಏನೊಂದು ದೋಷಗಳನ್ನು ಕಾಣಲಾರೆವು.

ಮೊಳಕಾಲ್ಮೂರು ಗ್ರಾಮ ಹತ್ತಾರು ಕೇರಿ, ಬಡಾವಣೆಗಳಿಂದ ಕೂಡಿದ ಒಂದು ದೊಡ್ಡ ಮಾದರಿ ಗ್ರಾಮ, ಒಂದೊಂದು ತಿರುವಿನಲ್ಲಿಯೂ ಸಹ ವಿವಿಧ ಜಾತಿವರ್ಗದ ಜನರಿದ್ದಾರೆ ಇಲ್ಲಿನ ಸಂಬಂಧಗಳು ಅಷ್ಟೇ ಅನ್ಯೋನ್ಯವಾಗಿ ಕೂಡಿವೆ. ಒಂದು ಬಡಾವಣೆಯಲ್ಲಿನ ಜನರ ವೃತ್ತಿ–ಜಾತಿಗನುಗುಣವಾಗಿ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಿರುವುದನ್ನು ಅಲ್ಲಿ ಕಾಣಬಹುದಾಗಿದೆ.

ಶ್ರೇಣಿಕೃತ ಸಮಾಜದಲ್ಲಿ ಆಯಾ ವರ್ಗಗಳಿಗೆ ಸಂಬಂಧ ಪಟ್ಟಂತೆ ಅದರದೇ ಆದ ಇತಿಹಾಸ– ಪುರಾಣ, ದಂತ ಕತೆಗಳಿಂದ ಕೂಡಿರುತ್ತವೆ. ಆ ವರ್ಗಗಳ ಕಸುಬು, ಆಚಾರ, ವಿಚಾರ ಪದ್ದತಿ ಒಂದಕ್ಕೊಂದು ಭಿನ್ನವಾಗಿರುತ್ತವೆ. ಹಾಗೆಯೇ ಈ ವರ್ಗದ ಜನರು ತಮ್ಮ ಜಾತಿ ನಿಯಮಗಳನ್ನು ನಂಬಿಕೆಗಳನ್ನು ತಪ್ಪದೆ ಪಾಲಿಸಿಕೊಂಡು ಬರುತ್ತಿರುತ್ತಾರೆ. ಈ ಪದ್ದತಿ ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ವಂಶಪಾರಂಪಾರ್ಯವಾಗಿ ವರ್ಗವಾಗುತ್ತ ಶಿಸ್ತುಬದ್ದತೆಯಿಂದ ತಮ್ಮ ಸಂಸ್ಕೃತಿಗೆ ಯಾವುದೇ ಮಾರಕವಾಗದಂತೆ ರೂಡಿಸಿಕೊಂಡು ಬಂದಿರುತ್ತಾರೆ.

ಮೊಳಕಾಲ್ಮೂರು ಗ್ರಾಮದಲ್ಲಿನ ಜನ ಸಾಮಾನ್ಯರ ಜಾತಿ ವರ್ಗಗಳಿಗೆ ಸಂಬಂಧಿಸಿದಂತೆ ಅವಲೋಕಿಸಿದಾಗ ಅಲ್ಲಿ ಎಲ್ಲಾ ವರ್ಗದ ಜನರು ಇದ್ದಾರೆ ಜನರ ಸಾಮಾಜಿಕ ಬದುಕಿನ ಹಿನ್ನೆಲೆಯನ್ನು ಅಭ್ಯಾಸಮಾಡಿದಾಗ ವಿವಿಧ ವರ್ಗದ ಜನರು ವಿಭಿನ್ನ ರೀತಿಯಲ್ಲಿ ಜಾತಿ–ಜಾತಿಗಳ ಮಧ್ಯ, ಮನುಷ್ಯ–ಮನುಷ್ಯರ ಮಧ್ಯೆ ಸಂಪರ್ಕಕೊಂಡಿಯನ್ನು ಏರ್ಪಡಿಸಿಕೊಂಡು ಒಂದಲ್ಲಾ ಒಂದು ರೀತಿಯ ಸಂಬಂಧವನ್ನು ಅಂತರ್ ಶಿಸ್ತೀಯವಾಗಿ ಬಾಹ್ಯ, ನೋಟದಲ್ಲಿ ಹೆಣೆದುಕೊಂಡಿರುತ್ತವೆ ಎನ್ನುವುದಕ್ಕೆ ಡಾ.ಎಂ.ಚಿದಾನಂದಮೂರ್ತಿಯವರು ಹೇಳುವಂತೆ 'ಬಡಗಿ ರೈತನ ಮರಮುಟ್ಟುಗಳನ್ನು ಮಾಡಿಕೊಟ್ಟರೆ, ಕಮ್ಮಾರ ಲೋಹದ ಸಾಮಾನುಗಳನ್ನು ಮಾಡಿಕೊಡುತ್ತಾನೆ, ಕೆಳವರ್ಗದ ವ್ಯಕ್ತಿ ಚರ್ಮದ ವಸ್ತುಗಳನ್ನು ಒದಗಿಸುತ್ತಾನೆ. ಕ್ಷೌರದವನು ಕೇಶಮುಂಡನ ಮಾಡಿದರೆ, ಅಗಸ ಬಟ್ಟೆಗಳನ್ನು ಮಡಿ ಮಾಡಿಕೊಟ್ಟು ಮದುವೆಯಲ್ಲಿ ಚಪ್ಪರಕ್ಕೆ ಬಟ್ಟೆ ಕಟ್ಟುತ್ತಾನೆ. ಜಂಗಮ ಮದುವೆ, ಹಬ್ಬ, ನಾಮಕರಣ ಇತ್ಯಾದಿ ವಿಶೇಷ ದಿನಗಳಲ್ಲಿ ಬಹಳ ಬೇಡಿಕೆ ಇರುವ ವ್ಯಕ್ತಿ ಇವರಿಗೆಲ್ಲ ರೈತ ಸುಗ್ಗಿಯ ಸಮಯದಲ್ಲಿ ಧಾನ್ಯದ ರಾಶಿಯಿಂದ ಆಯಾ (ಹಡದೆ)ವನ್ನು ಅಳೆದುಕೊಡುತ್ತಾನೆ. ಹೀಗೆ ಒಂದು ಗ್ರಾಮದಲ್ಲಿ ಪ್ರಮುಖವಾಗಿ

ರೈತನೊಬ್ಬ ಗ್ರಾಮದ ಎಲ್ಲಾ ವರ್ಗದ ಜನತೆಯ ಜೊತೆ ಆತ್ಮೀಯ ಸಂಬಂಧವನ್ನು ಹೊಂದಿರುತ್ತಾನೆ. ಈ ಮಾತಿಗೆ ಮೊಳಕಾಲ್ಮೂರು ಗ್ರಾಮವೂ ಸಹ ಹೊರತಾಗಿಲ್ಲ.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜಾತೀಯತೆ ಎದ್ದುಕಾಣುತ್ತದೆ. ಇದು ಸಮಾಜಕ್ಕಂಟಿಕೊಂಡ ಒಂದು ದೊಡ್ಡ ಪಿಡುಗು, ಮೇಲ್ಜಾತಿಯ ಮನೆಗಳಿಗೆ ಕೆಳಜಾತಿಯಜನ ಹೋಗುವಂತಿಲ್ಲ, ಅಥವಾ ಮನೆಯ ಒಳಗೆ ಪ್ರವೇಶವಿಲ್ಲ, ಹೊರಗಡೆ ನಿಂತು ಮಾತನಾಡಿಸಿಕೊಂಡು ತಾವು ಬಂದ ವಿಷಯವನ್ನು ತಿಳಿಸಿ ಹೋಗಬೇಕು. ಮೇಲ್ಜಾತಿ ಮನೆಗಳಿಗೆ ಮೇಲ್ಜಾತಿ ಜನರಿಗಷ್ಟೇ ಪ್ರವೇಶ ವಿರುತ್ತದೆ ಉಳಿದಂತೆ ಯಾರಿಗೂ ಅವಕಾಶ ಇಲ್ಲ, ಇದು ಅನಾದಿಕಾಲದಿಂದಲೂ ಮುಂದು ವರಿದುಕೊಂಡು ಬಂದಂತಹ ಒಂದು ದೊಡ್ಡದುಷ್ಕೃತ್ಯ. ಇಲ್ಲಿ ಬ್ರಾಹ್ಮಣ ಶಾಹಿ ಅತ್ಯಂತ ಪ್ರಬಲವಾಗಿದ್ದು ಎಲ್ಲಾ ವಿಚಾರಗಳಲ್ಲೂ ಅವರದೇ ಅಂತಿಮವಾಗಿರುತ್ತದೆ. ಏಕೆಂದರೆ ಗ್ರಾಮದ ಪ್ರತಿಯೊಂದು ಒಳ್ಳೆಯದಕ್ಕೆ ಕೆಟ್ಟದಕ್ಕೆ ಬ್ರಾಹ್ಮಣ ಇರಲೇಬೇಕು, ಇಂದು ಹಳ್ಳಿಗಳಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ, ಜನರೆಲ್ಲಾ ಪ್ರಜ್ಞಾವಂತರಾಗಿವುದರಿಂದ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ ಎನಿಸಿದರೂ, ಕೆಲವೊಂದು ಹಳ್ಳಿಗಳಲ್ಲಿ ಈಗಲೂ ಮುಂದುವರಿದಿದೆ.

ಈ ರೀತಿಯ ಶೋಷಣೆ ಪರಂಪರೆಯಿಂದಲೂ ಸಾಗಿಕೊಂಡು ಬಂದಿದೆ ಬಾಹ್ಯ ನೋಟಕ್ಕೆ ಗ್ರಾಮದ ಜನರೆಲ್ಲ ಒಂದೇ ಎಂಬಂತ ಭಾವನೆ ಮೂಡಿದರೂ, ಜಾತಿ ದೃಷ್ಟಿಯಿಂದ ಅಲ್ಲಿ ಶೋಷಣೆಗೆ ಕೆಳಜಾತಿಯವರು ಒಳಗಾಗಿದ್ದಾರೆ. ಈ ರೀತಿಯ ಸ್ಥಿತಿಗೆ ಹಲವಾರು ಉದಾಹರಣೆಯನ್ನು ನೀಡಬಹುದು

ಸಾಮಾನ್ಯವಾಗಿ ರೈತನಿಗೆ ಊರಿನ ಜನರೆಲ್ಲ ಒಂದಿಲ್ಲೊಂದು ಕೆಲಸಕ್ಕೆ ಬೇಕೇಬೇಕು. ಇಲ್ಲವಾದಲ್ಲಿ ರೈತನ ಕೆಲಸಕಾರ್ಯಗಳು ಮುಂದುವರಿಯುವುದಿಲ್ಲ. ಹೀಗಿರುವಾಗ ಜಾತೀಯತೆ ಎಂಬ ಬೃಹತ್ ರಾಕ್ಷಸ ನಮ್ಮ ರಾಷ್ಟ್ರದಲ್ಲಿ ಇಂದಿಗೂ ಕಾಡುತ್ತಿರುವ ಯಕ್ಷ ಪ್ರಶ್ನೆಯಾಗಿದೆ. ಇದಕ್ಕೆಲ್ಲ ಉತ್ತರ/ಪರಿಹಾರ ಹುಡುಕಲು ಅಸಾಧ್ಯವೆನ್ನಬಹುದು.

ಜಾಗತೀಕರಣದ ಸಂದರ್ಭದಲ್ಲಿನ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಬದಲಾಗುತ್ತಿರುವ ಗ್ರಾಮಗಳ ಸಾಲಿನಲ್ಲಿ ಈ ಮೊಳಕಾಲ್ಮೂರು ಗ್ರಾಮವೂ ಸೇರಿದೆ. ಇಂದು ಗ್ರಾಮದ ಸ್ವರೂಪ, ರಚನೆ, ಸ್ಥಿತಿಗತಿಗಳಲ್ಲಿ ಗಮನಾರ್ಹವಾದ ಬದಲಾವಣೆಗಳು ಕಂಡುಬರುತ್ತಿವೆ.

ಸೃಷ್ಟಿಯಲ್ಲಿ ಬದುಕುತ್ತಿರುವ ಪ್ರಾಣಿ-ಪಕ್ಷಿ ಸಂಕುಲಗಳಲ್ಲಿ ಜೀವಿಸಲು ಅವುಗಳದೇ ಆದ ಒಂದು ಪದ್ದತಿಯನ್ನು ಆಯ್ದುಕೊಂಡಿರುತ್ತವೆ. ಈ ಮಾತಿಗೆ ಮನುಷ್ಯ ಪ್ರಾಣಿಯೂ ಹೊರತಾಗಿಲ್ಲ, ಗ್ರಾಮದಲ್ಲಿ ಎಲ್ಲಾ ವರ್ಗದ ಜನತೆ ಇದ್ದು ಅವರೆಲ್ಲರೂ ತಮಗೆ ಪರಂಪರೆಯಿಂದ ಬಂದ ವೃತ್ತಿಗಳನ್ನು ಮಾಡಿಕೊಂಡು ಬಂದಿದ್ದಾರೆ. ಹಲವು ಜನ ವೃತ್ತಿಪರ

ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಶಿಕ್ಷಣವನ್ನು ಪಡೆದ ಜನರು ಕೈಗಾರಿಕೆಗಳಲ್ಲಿ, ನಗರಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಕೆಲಸ ಕಂಡುಕೊಂಡು ಕೆಲಸ ಮಾಡುತ್ತಿದ್ದಾರೆ, ಹಾಗೆಯೇ ಊರಲ್ಲಿ ಚಪ್ಪಲಿ ಹೊಲೆಯುವವರು, ಕಂಬಾರಿಕೆ ಮಾಡುವವರು. ವ್ಯಾಪಾರ ಮಾಡುವವರು, ಬ್ರಾಹ್ಮಣ ತ್ವವನಾಗಿ ಮಾಡುವವರು ಹೀಗೆ ಅವರಿಗೆ ಅವರ ಹಿರಿಯರಿಂದ ಬಳುವಳಿಯಾಗಿ ಬಂದಂತಹ ವೃತ್ತಿಯನ್ನು ತಪ್ಪದೆ ನಿರ್ವಹಿಸುತ್ತಾ ಜೀವನ ನಿರ್ವಹಣೆಯಲ್ಲಿ, ಕುಟುಂಬದ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಶ್ರೇಣಿಕೃತ ಸಮಾಜದಲ್ಲಿರುವ ನಾಲ್ಕುವರ್ಗಗಳಾದ ಬ್ರಾಹ್ಮಣ, ಕ್ಷತ್ರೀಯ, ವೈಷ್ಣವ, ಶೂದ್ರ ಈ ವರ್ಗಗಳಿಂದ ಚದುರಿದ ಜನತೆ, ತಲೆಮಾರುಗಳಿಂದ ಮಾಡಿಕೊಂಡುಬರುತ್ತಿದ್ದ ವೃತ್ತಿ ಪರ ಜನರಿಂದ ಕಮ್ಮಾರ, ಒಕ್ಕಲಿಗ, ಬಡಿಗ, ಅಗಸ, ಹೊಲೆಯ, ಕುಂಬಾರ, ಆಚಾರಿ, ಈ ಎಲ್ಲಾ ವರ್ಗದ ಜನ ಇಂದಿಗೂ ತಮ್ಮ ವೃತ್ತಿಯನ್ನು ಬಿಟ್ಟಿಲ್ಲ. ಅದನ್ನ ಬಿಟ್ಟರೆ ಬೇರೆ ಕೆಲಸಗೊತ್ತಿಲ್ಲ. ತಲತಲಾಂತರದಿಂದ ನಿರ್ವಹಿಸಿಕೊಂಡು ಬರುತ್ತಿದ್ದ ವೃತ್ತಿಯನ್ನು ಬಿಡಬಾರದು ಎಂಬ ಉದ್ದೇಶ ಅವರಲ್ಲಿದೆ. ಆವೃತ್ತಿ ಕಸುಬಿನಿಂದಲೆ ಹಿಂದೆಲ್ಲಾ ಹೊಟ್ಟೆಗೆ ಹಿಟ್ಟು ಗೊರೆತಿದ್ದು ಅದನ್ನ ಮರೆತರೆ ಮುಂದೆ ಬದುಕಲು ದುಸ್ತರ, ಅಥವಾ ಅನ್ನ ಸಿಗುವುದಿಲ್ಲ ಎಂಬ ಹಿರಿಯರ ನೀತಿ ಮಾತುಗಳನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿರುವುದು ವಿಶೇಷತೆ. ತಮ್ಮ ತಮ್ಮ ವೃತ್ತಿಗಳಲ್ಲಿ ಸ್ವರೂಪ, ರಚನೆ ಗಾತ್ರದಲ್ಲಿ ಆಧುನಿಕತೆಯ ಪ್ರಭಾವ ಕಂಡುಬಂದರೂ ಮೂಲ ಮಾತ್ರ ಒಂದೇ ಎಂದು ತಿಳಿಯಬಹುದು.

ಗ್ರಾಮವು ಇಂದು ಆಧುನೀಕತೆಯ ಜಾಗತೀಕರಣದ ತೆಕ್ಕೆಗೆ ಬಿದ್ದಿದೆ. ಆದರ ನಡೆ-ನುಡಿ, ಆಚಾರ-ವಿಚಾರ, ಆಹಾರ ಪದ್ದತಿಗಳಲ್ಲಿ ಮಡಿ-ಮೈಲಿಗೆಯಲ್ಲಿ ಹೊಸತನ ಕಂಡು ಬರುತ್ತಿದೆ. ಇದಕ್ಕೆ ಪರೋಕ್ಷವಾಗಿ ಸಮೂಹಮಾಧ್ಯಮಗಳು ಸಹ ಕಾರಣವೆನ್ನಬಹುದು. ಈ ಬೆಳವಣಿಗೆ ಗ್ರಾಮದ ಬಗೆಗಿನ ಕಲ್ಪನೆಯನ್ನು ಬದಲಾಯಿಸುತ್ತದೆ. ವೃತ್ತಿಗಳಲ್ಲಿ ಪೈಪೋಟಿ ಎದ್ದುಕಾಣುತ್ತಿದೆ. ಜನರು ಇನ್ನೂ ಹೆಚ್ಚು ಉತ್ತಮ ಸ್ಥಿತಿಗೆ ಬರಬೇಕೆಂಬ ಹಂಬಲ ಉಳ್ಳವರಾಗಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಕೇವಲ ವೃತ್ತಿಗಳಲ್ಲಿ ಅಷ್ಟೇ ಅಲ್ಲ ಜನರ ನಡವಳಿಕೆಗಳಲ್ಲಿ, ಚಟುವಟಿಕೆಗಳಲ್ಲಿಯೂ ಪರಿವರ್ತನೆಯ ಅಂಶಗಳ ಸಾಮಾನ್ಯವಾದ ಸಂಗತಿಗಳಾಗಿದೆ. ಸಮಾಜದ ಪ್ರತಿಷ್ಠಿತ ವರ್ಗವಾದ ಬ್ರಾಹ್ಮಣ ಜನಾಂಗ ಇಂದು ವೈಧಿಕತ್ವವನ್ನು ಮಾಡಲಾಗದೆ ಕೆಲ ಜನರು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆ. ಹೋಟೆಲ್, ಕೈಗಾರಿಕೆ, ಸರ್ಕಾರದ ಉನ್ನತ ಹುದ್ದೆಗಳಲ್ಲಿ ರಾಜಕೀಯ ವಿವಿಧ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವುದನ್ನು ಕಾಣಬಹುದು. ಹಾಗೆಯೇ ಇತರೆ ದಲಿತವರ್ಗ, ಮುಸ್ಲೀಂ ಜನಾಂಗ, ಕಂಬಾರ, ಒಕ್ಕಲಿಗ

ಮುಂತಾದ ವರ್ಗದವರು ತಮ್ಮಯೋಗ್ಯ ತಾನುಸಾರ ವಿವಿಧ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕಿನಲ್ಲಿ ಮೇಲೆ ಬರುತ್ತಿದ್ದಾರೆ. ಸಮಾಜದಲ್ಲಿ ಗೌರವಸ್ಥಾನಗಳನ್ನು ಪಡೆಯಲು ಹಂಬಲಿಸುತ್ತಿದ್ದಾರೆ ಎಷ್ಟೋ ಜನ ಉತ್ತಮ ಸ್ಥಾನಕ್ಕೇರಿ ಉತ್ತಮ ಸ್ಥಿತಿಯಲ್ಲಿದ್ದಾರೆ.

ಈ ಬದಲಾವಣೆಗೆ ಕಾರಣ ಜನರಲ್ಲಿ ಮೂಡುತ್ತಿರುವ ವೈಚಾರಿಕ ಪ್ರಜ್ಞೆ, ಪಡೆದಂತಹ ಶಿಕ್ಷಣ, ಪ್ರಭಾವ, ಇತರರಂತೆ ನಾವು ಚೆನ್ನಾಗಿರಬೇಕು, ಮುಂದುವರೆಯಬೇಕು, ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಪಡೆಯಬೇಕೆಂಬ ಹಂಬಲ, ಪ್ರಸ್ತುತದಲ್ಲಿ ಒಂದು ಮನೆಯಲ್ಲಿ ಕನಿಷ್ಠ ಇಬ್ಬರು ವ್ಯಕ್ತಿಗಳಾದರೂ ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣವು ಜೀವನದ ಒಂದು ಮುಖ್ಯವಾದ ಹವ್ಯಾಸವಾಗಿದೆ. ಇದರಲ್ಲಿ ಪ್ರಚಲಿತ ಇತಿಹಾಸ ಹಾಗೂ ನಯತಿಕ ಲಕ್ಷಣಗಳು ಇದ್ದೇ ಇರಬೇಕು. ಹೀಗೆ ಮೌಲ್ಯಯುಕ್ತ ಈ ಶಿಕ್ಷಣವನ್ನು ಪಡೆದ ಜನತೆ ಸ್ವಾವಲಂಬನೆಯ ಬದುಕನ್ನು ಸೃಷ್ಟಿಸಿಕೊಂಡು ವಿವಿಧ ಕೆಲಸಕಾರ್ಯಗಳನ್ನು ಮಾಡುತ್ತ ಇತರರಂತೆ ಮೇಲಿನಸ್ತರಕ್ಕೆ ಹೋಗುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಕೇವಲ ಮೇಲ್ಜಾತಿ ವರ್ಗದವರಿಗಷ್ಟೇ ಶಿಕ್ಷಣ ಮೀಸಲಾಗಿತ್ತು. ಆದರೆ ಇಂದು ಸರ್ಕಾರದ ಸಂವಿಧಾನದ ನಿಮಯದಡಿಯಲ್ಲಿ ಎಲ್ಲಾ ವರ್ಗದ ಜನತೆಗೂ ಶಿಕ್ಷಣ ದೊರೆಯುತ್ತಿದ. ಹೆಣ್ಣು-ಗಂಡೆಂಬ ಭೇದವಿಲ್ಲದೆ ಎಲ್ಲರಿಗೂ ಶಿಕ್ಷಣ ಸೌಲಭ್ಯಗಳು ಸಮಾನವಾಗಿ ದೊರೆಯುತ್ತಿದೆ. ಸರ್ಕಾರ ಬದಲಾವಣೆ ಅದಂತೆ ಶಿಕ್ಷಣ ಪದ್ದತಿಯಲ್ಲಿಯೂ ಬದಲಾವಣೆ ಕಂಡು ಬಂದಿದ್ದು ಬಾಲಕಿಯರಿಗೆ ಉಚಿತ ಸೈಕಲ್ ವಿತರಣೆ, ಉಚಿತ ಬಟ್ಟೆ, ಪುಸ್ತಕವಿತರಣೆ ಮುಂತಾದ ಸುಧಾರಿತ ಯೋಜನೆಗಳಿಂದ ಮನೆಯಲ್ಲಿನ ಹಿರಿಯರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಉತ್ತೇಜನ ನೀಡುತ್ತಾರೆ. ಅಲ್ಲದೆ ವಿದ್ಯಾರ್ಥಿನಿಲಯಗಳ ಸೌಲಭ್ಯಗಳಿಂದ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ವಿದ್ಯಾರ್ಥಿನಿಲಯಗಳಲ್ಲಿ ಓದಿ ಉತ್ತಮ ರ್‍ಯಾಂಕಿಂಗ್ ಪಡೆದು ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ಇದು ಇಡೀ ಸಮಾಜಕ್ಕೆ ಪೂರಕವಾದಂತಹ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ.

ಗ್ರಾಮದ ವರ್ತಮಾನದಲ್ಲಿ ಜನರು ತಮ್ಮ ಜೀವನೋಪಾಯಕ್ಕಾಗಿ ಅನೇಕ ದಾರಿಗಳನ್ನು ಕಂಡುಕೊಂಡಿದ್ದಾರೆ. ವ್ಯಾಪಾರ, ಹೋಟೆಲ್‌ಗಳನ್ನು ನಡೆಸುವುದು, ಟೈಲರಿಂಗ್ ವೃತ್ತಿ, ಹೈನುಗಾರಿಕೆ, ಕೋಳಿಸಾಕಾಣಿಕೆ, ಜವಳಿಅಂಗಡಿ, ದಿನಸಿ ಅಂಗಡಿ, ಗೃಹ ಉಪಯೋಗಿ ವಸ್ತುಗಳ ಮಾರಾಟ, ಎಸ್.ಟಿ.ಡಿ ಬೂತ್‌ಗಳ ಸ್ಟುಡಿಯೋ, ತರಕಾರಿ-ಹಣ್ಣು-ಹಂಪಲು ವ್ಯಾಪಾರ, ಮುಂತಾದ ಕೆಲ ವೃತ್ತಿಗಳನ್ನು ಮಾಡುತ್ತಿದ್ದಾರೆ ಜೊತೆಗೆ ವ್ಯವಸಾಯವೂ ಸಹ ನಡೆಯುತ್ತಿದೆ. ಈ ಸ್ಥಿತಿಗಳನ್ನು ಕಂಡ ಮೇಲೆ ಜನರು ಕೇವಲ ಒಂದೇ ವೃತ್ತಿಗೆ ಸೀಮಿತವಾಗದೆ

ಬದುಕಲು, ಜೀವನದಲ್ಲಿ ಮುಂದೆ ಬರಲು ಅನೇಕಾನೇಕ ಕೆಲಸಗಳನ್ನು ಮಾಡುತ್ತ ಗ್ರಾಮದ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಂಡಿದ್ದಾರೆ ಎನ್ನಬಹುದು.

ಈ ಮೊಳಕಾಲ್ಮೂರು ವಿನ ಪ್ರಮುಖ ವೃತ್ತಿಯೆಂದರೆ ರೇಷ್ಮೆ ಬಟ್ಟೆ ನೇಯ್ಗೆ, ಇದು ಊರಿನಲ್ಲಿ ಬಹುತೇಕ ಜನರು ಕೈಗೊಂಡಿರುವ ಪ್ರಮುಖವೃತ್ತಿಯಾಗಿದ್ದು ಇದರಿಂದಲೇ ಜನರು, ಉತ್ತಮಸ್ಥಿತಿಯಲ್ಲಿದ್ದಾರೆ. ಇಲ್ಲಿ ತಯಾರಾಗುವ ರೇಷ್ಮೆ ಸೀರೆಗಳು ಕರ್ನಾಟಕದಲ್ಲಿಯೇ ಪ್ರಸಿದ್ಧಿಪಡೆದಿವೆ. ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ ಭಾರತದ ವಿವಿಧ ರಾಜ್ಯಗಳಲ್ಲಿಯೂ ಇಲ್ಲಿ ತಯಾರಾದ ರೇಷ್ಮೆ ಸೀರೆಗಳಿಗೆ ಬೇಡಿಕೆಯಿದೆ ಹೆಚ್ಚಾಗಿ ತಯಾರಾದ ಸೀರೆಗಳು ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ರಾಜ್ಯಗಳಲ್ಲಿ ಮಾರಾಟವಾಗುತ್ತಿವೆ ಹಾಗೆಯೇ ಇಲ್ಲಿ ತಯಾರಾದ ಸೀರೆಗಳು ಉತ್ತಮಗುಣಮಟ್ಟದ, ನೈಜತೆಯಿಂದ ಕೂಡಿದ್ದು ಉತ್ತಮ ಬೆಲೆಗೆ ಮಾರಾಟವಾಗುತ್ತಿವೆ. ಈ ರೇಷ್ಮೆ ಸೀರೆ ನೇಯ್ಗೆಯ ವೃತ್ತಿ ಇಲ್ಲಿನ ಜನರಿಗೆ ಹಿರಿಯರಿಂದಲೂ ಮಾಡಿಕೊಂಡುಬಂದಿರುವ ವೃತ್ತಿಯಾಗಿದೆ ಇದರಿಂದ ಈ ಗ್ರಾಮ ಕರ್ನಾಟಕದಲ್ಲಿ ಒಂದು ಸ್ಥಾನವನ್ನು ಕಾಯ್ದುಕೊಂಡಿದೆ/ಪಡೆದುಕೊಂಡಿದೆ.

ಇಲ್ಲಿ ತಯಾರಾಗುವ ಸೀರೆಗಳು ಮದುವೆ, ಮುಂತಾದ ಶುಭಸಮಾರಂಭಗಳಲ್ಲಿ ಸ್ತ್ರೀಯರಿಗೆ ಒಪ್ಪುವಂತಹ ಸೀರೆಗಳಲ್ಲಿ ತಯಾರಾಗುತ್ತಿವೆ. ಸೀರೆ ನೇಯ್ಗೆಯ ಕೈಚಳಕದಿಂದ ಸೀರೆ ಸುಂದರವಾಗಿ ಆಕರ್ಷಕ ರೀತಿಯಲ್ಲಿ ವಿವಿಧ ಚಿತ್ತಾರಗಳಿಂದ ಕೂಡಿದ ಸೀರೆಗಳನ್ನು ತಯಾರಿಸುತ್ತಾರೆ. ಈ ವೃತ್ತಿಯನ್ನು ಮಾಡಿಕೊಂಡು ಇಂದು ಊರಿನಲ್ಲಿ ಗಣ್ಯ-ಶ್ರೀಮಂತರಾಗಿ ಇರುವ ಬಹಳಷ್ಟು ಜನರಿದ್ದಾರೆ, ಅವರಿಗೆ ಈ ಕೆಲಸವೇ ಪ್ರಮುಖ, ಇದು ಊರಿನ ಆರ್ಥಿಕತೆಗೆ ಕಳಸ ಪ್ರಾಯಿದಂತಾಗಿದೆ. ಈ ರೇಷ್ಮೆ ನೇಯ್ಗೆಯಲ್ಲಿಯೂ ಇಂದು ಆಧುನಿಕತೆ ತಲೆದೂರಿದೆ. ಪ್ರಾರಂಭದಿಂದ ಹಿಡಿದು ಮುಕ್ತಾಯದವರೆಗೂ ನವೀನತೆಯನ್ನು ಕಾಣಬಹುದು.

ರೇಷ್ಮೆ ನೆಯ್ಗೆಯಲ್ಲಿ ಇಂದು ಯಂತ್ರೋಪಕರಣಗಳನ್ನು ಅಳವಡಿಸಿಕೊಂಡು ಸೀರೆಯನ್ನು ತಯಾರಿಸಲಾಗುತ್ತಿದೆ. ಹಿಂದೆ ಚರಕದಿಂದ ರೇಷ್ಮೆನೂಲನ್ನು ತೆಗೆದು ಮಗ್ಗದಿಂದ ನೂಲನ್ನು ಜೋಡಿಸುವುದರ ಮುಖಾಂತರ ಸೀರೆ ತಯಾರಿಸಲಾಗುತ್ತಿತ್ತು. ಹಾಗೆಯೇ ಸೀರೆಗೆ ಹಾಕುವಂತಹ ಬಣ್ಣವನ್ನು ಸಹ ಮನೆಯಲ್ಲಿಯೇ ತಯಾರಿಸಿಕೊಳ್ಳಲಾಗುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ಸೀರೆಗೆ ಬೇಕಾಗುವಂತಹ ಬಣ್ಣ, ಸಣ್ಣ ಪುಟ್ಟ ಪರಿಕರಗಳನ್ನು ತಮ್ಮ ಕಲಾಭಿಸಕ್ತಿಗೆ ಸರಿಹೊಂದುವಂತೆ ಜೋಡಿಸಿಕೊಂಡು ಸೀರೆಯಲ್ಲಿ ಚಿತ್ತಾರಗಳನ್ನು ಬಿಡಿಸುವುದರ ಮೂಲಕ ಸೀರೆಗಳನ್ನು ತಯಾರಿಸಲಾಗುತ್ತಿದೆ. ಹೀಗಾಗಿ ಈ ರೇಷ್ಮೆ ನೇಯುವಿಕೆ ವೃತ್ತಿಯಲ್ಲಿಯೂ ಸಹ ಹೊಸತನವನ್ನು ಕಾಣಬಹುದಾಗಿದೆ.

ಗ್ರಾಮದಲ್ಲಿ ಅನೇಕ ಜನ ಕೂಲಿಕಾರ್ಮಿಕರಿದ್ದಾರೆ ಬಸ್‌ಸ್ಟಾಂಡ್‌ಗಳಲ್ಲಿ, ಹೊಲಗದ್ದೆಗಳಲ್ಲಿ ಕೂಲಿಕೆಲಸವನ್ನು ಮಾಡಿಕೊಂಡು ತಮ್ಮ ಜೀವನ ನೂಕುತ್ತಿದ್ದಾರೆ. ಕಾರಣ ಅವರಿಗೆ ಸ್ಥಿರವಾದ ನೆಲೆಯಿಲ್ಲದಿರುವುದು. ಬೇರೆ ಬೇರೆ ಕಡೆಯಿಂದ ವಲಸೆಬಂದು ಈ ಊರಲ್ಲಿ ಬಾಡಿಗೆ ಮನೆಯನ್ನು ಮಾಡಿ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾ ಬದುಕುತ್ತಿದ್ದಾರೆ. ಕೆಲವರು ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡಿಕೊಂಡಿರುವಂತಹ ಜನರೂ ಗ್ರಾಮದಲ್ಲಿ ನೆಲೆಯೂರಿದ್ದಾರೆ. ಬಹಳ ಕಾಲ ಇಲ್ಲೇ ಉಳಿದು ಈ ಊರಿನಲ್ಲಿಯೇ ಸ್ಥಿರವಾಗಿ ಉಳಿದಿದ್ದಾರೆ.

ಆರ್ಥಿಕ ಸ್ಥಿತ್ಯಂತರಗಳು

ಆರಂಭಿಕ ಹಂತದಲ್ಲಿ ಮಾನವನಿಗೆ ಆಹಾರ ಸಂಗ್ರಹಣೆ ಮಾಡುವುದೇ ಪ್ರಥಮ ಕರ್ತವ್ಯವಾಗಿತ್ತು. ಜೊತೆಗೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ಹವಮಾನದಿಂದ ಉಂಟಾಗುತ್ತಿದ್ದ ತೊಂದರೆಗಳಿಂದ ತಪ್ಪಿಸಿಕೊಳ್ಳುವುದು ಅಂದಿನ ಮಾನವನ ಮುಖ್ಯ ಆರ್ಥಿಕ ಪ್ರಶ್ನೆಯಾಗಿ ಪರಿಣಮಿಸಿತ್ತು. ಅಂದಿನ ಕಾಲದ ಅನಾಗರೀಕ ಮನುಷ್ಯನು ಹಣ್ಣು ಹಂಪಲುಗಳನ್ನು ತಿಂದು ಎಲೆ ಚರ್ಮಗಳನ್ನು ಹೊದೆದುಕೊಂಡು ಗುಂಪಿನಲ್ಲಿ ವಾಸಮಾಡುತ್ತಿದ್ದನು. ತದ ನಂತರ ಅವನು ಆಹಾರಕ್ಕಾಗಿ ಬೇಟೆಯಾಡುವುದು, ಮೀನು ಹಿಡಿಯುವುದು ಮುಂತಾದ ಕೆಲಸಗಳನ್ನು ಕೈಗೊಂಡು ವಲಸೆ ಜೀವನವನ್ನು ನಡೆಸಲು ಪ್ರಾರಂಭಿಸಿದನು. ಕಾಲ ಬದಲಾದಂತೆ ಒಂದೇ ಸ್ಥಳದಲ್ಲಿ ನಿಂತು ಸಾಕುಪ್ರಾಣಿಗಳನ್ನು ಸಲುಹಿದನು. ಅವುಗಳನ್ನು ಉಪಯೋಗಿಸಿಕೊಂಡು ಆಹಾರದ ಉತ್ಪಾದನೆಯಲ್ಲಿ ತೊಡಗಿದನು. ಸಾಕುಪ್ರಾಣಿಗಳನ್ನು ಸಾಕುತ್ತಿರುವ ಕಾಲದಲ್ಲಿಯೇ ಆಹಾರಕ್ಕೆ ಅವಶ್ಯಕವಾದ ದವಸ-ಧಾನ್ಯಗಳನ್ನು ಭೂಮಿಯಲ್ಲಿ ಬೆಳೆಯಲಾರಂಭಿಸಿದನು. ಮನುಷ್ಯನ ಜೀವನದ ರೀತಿ-ನೀತಿಗಳು ಬದಲಾವಣೆಯಾದ ಹಾಗೆಲ್ಲ ಅವನ ಜನಾಂಗವು ಬೆಳೆದು. ನಾಗರೀಕತೆಯು ಬೆಳೆದಂತೆಲ್ಲಾ ಆರ್ಥಿಕ ವಿಧಾನಗಳು ಬೆಳೆಯುತ್ತಾ ವಿಸ್ತಾರವಾದ ರೂಪ ಪಡೆದು ಕೊಂಡವು.[೩]

ನಮ್ಮ ರಾಷ್ಟ್ರದಲ್ಲಿ ಶೇ. ೭೦ಕ್ಕಿಂತ ಹೆಚ್ಚಾಗಿ ಇಂದಿಗೂ ಸಹ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಅವರು ತಮ್ಮ ಜೀವನೋಪಾಯಕ್ಕಾಗಿ ಪ್ರಮುಖವಾಗಿ ಬೇಸಾಯವನ್ನು ನಂಬಿಕೊಂಡಿದ್ದಾರೆ ನಮ್ಮ ರಾಜ್ಯದ ಪರಿಮಿತಿಯಲ್ಲಿಯೇ ಅಧ್ಯಯನ ಮಾಡುವುದಾದರೆ ರಾಷ್ಟ್ರದಲ್ಲಷ್ಟೇ ಪ್ರಮಾಣದ ಜನತೆ ಹಳ್ಳಿಯಲ್ಲೂ ವಾಸಿಸುತ್ತಿರುವುದು ಕಂಡುಬರುತ್ತದೆ.[೪]

ಕೃಷಿ ಎಂದಾಕ್ಷಣ ನಮ್ಮ ಕಣ್ಣಮುಂದೆ ಬಂದು ನಿಲ್ಲುವುದು ನೇಗಿಲ ಹೊತ್ತರೈತ, ಭೂಮಿಯನ್ನು ಉಳುಮೆ ಮಾಡುವ ಸಾಮಾನ್ಯಜನ, ಭಾರತದ ಮೂಲ ಬೆನ್ನೆಲುಬು ಕೃಷಿಯಾಗಿದೆ. ಕೃಷಿಯಿಂದಲೇ ದೇಶದ ಪ್ರಗತಿ ಸಾಧ್ಯ. ಕೃಷಿಯಿಂದಲೇ ಆರ್ಥಿಕ ಭದ್ರತೆ

ಸಾಧ್ಯ, ಕೃಷಿಯಿಂದಲೇ ಮನುಷ್ಯ ಬದುಕುವುದು. ಮನುಷ್ಯ ತಾನು ಬಳಸುವ ದಿನನಿತ್ಯದ ವಸ್ತುಗಳು ಕೃಷಿಯಿಂದಲೇ ಬಂದಿರುವುದು. ಸೇವಿಸುವ ಆಹಾರ, ತೊಡುವ ಬಟ್ಟೆ, ಉಪಯೋಗಿಸುವ ವಸ್ತುಗಳು, ಎಲ್ಲವೂ ಕೃಷಿಯಿಂದಲೇ, ಮನುಷ್ಯನಿಗೆ ಮೇಲೆ ತೊಡಲಿಕ್ಕೆ ಬಟ್ಟೆ ಇಲ್ಲದಿದ್ದರೂ ಚಿಂತೆಯಿಲ್ಲ ಬದುಕಲು ಆಹಾರಬೇಕೇಬೇಕು, ಕೇವಲ ಮನುಷ್ಯನಿಗಷ್ಟೇ ಅಲ್ಲ ಜಗತ್ತಿನ ಸಕಲಚರಾಚರ ಪ್ರಾಣಿ ಸಂಕುಲಕ್ಕೂ ಆಹಾರ ಬೇಕೇಬೇಕು. ರೈತಭೂಮಿಯನ್ನು ಉಳುಮೇಮಾಡಿ ಫಸಲನ್ನು ಬೆಳೆಯುವುದರಿಂದ ನಾಲ್ಕಾರು ಜನ ಬದುಕಲು ಸಾಧ್ಯವಾಗುತ್ತದೆ ಇತರೆ ಪ್ರಾಣಿಗಳಂತೆ ಮಾನವ ಹುಲ್ಲು ತಿನ್ನಲು ಸಾಧ್ಯವಿಲ್ಲ ಆ ಕಾರಣಕ್ಕಾಗಿ ಕಷ್ಟ ಪಟ್ಟು ಬೆವರು ಸುರಿಸಿ ರೈತ ಬೆಳೆದರೆ ಮಾತ್ರ ತಿನ್ನಲಿಕ್ಕೆ ಬರುತ್ತದೆ. ಅದೇ ರೀತಿ ಕೈಗಾರಿಕೆಗಳಲ್ಲಿ ರೈತ ಬೆಳೆದ ಫಸಲನ್ನು ಕಾರ್ಮಿಕರು ಹಗಲು ರಾತ್ರಿಯೆನ್ನದೆ ಕೆಲಸಮಾಡಿ ಬಟ್ಟೆ ತಯಾರಿಸುತ್ತಾರೆ ಒಂದು ರೀತಿಯಲ್ಲಿ ಕಾರ್ಮಿಕರೂ ಸಹ ರೈತರೇ ಆದರೆ ಸ್ವರೂಪದಲ್ಲಿ ಬೇರೆಯಿರುತ್ತದೆ ಅಷ್ಟೇ ಹಾಗಾಗಿ ಕೃಷಿ ಕ್ಷೇತ್ರ ಅಧ್ಯಯನದ ದೃಷ್ಟಿಯಂದ ಪ್ರಮುಖ ಕೇಂದ್ರವಾಗಿದೆ.

ಪ್ರಸ್ತುತ ಮೊಳಕಾಲ್ಮೂರು ಗ್ರಾಮದಲ್ಲಿ ವ್ಯವಸಾಯವೇ ಗ್ರಾಮದ ಜನರ ಉಸಿರಾಗಿದೆ. ಈ ವ್ಯವಸಾಯದಿಂದಲೇ ಜನರ ಜೀವನ ನಿರ್ವಹಣೆಯಾಗುತ್ತಿದ್ದು, ಇದು ಕೇವಲ ಮೊಳಕಾಲ್ಮೂರು ಗ್ರಾಮಕ್ಕಷ್ಟೇ ಸೀಮಿತವಾಗಿಲ್ಲ ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿನ ಜನರ ಮೂಲ ಕಸುಬಾಗಿದೆ. ಮೊಳಕಾಲ್ಮೂರು ಗ್ರಾಮ ಈಗಾಗಲೇ ಹೇಳಿದಂತೆ ಬಯಲು ಸೀಮೆ/ಬರಗಾಲ ಪೀಡಿತ ಪ್ರದೇಶವಾಗಿದ್ದು ಇಲ್ಲಿ ಋತುಮಾನವನ್ನಾಧರಿಸಿದ ಬೇಸಾಯಪದ್ದತಿ ಹೆಚ್ಚಾಗಿದೆ. ಗ್ರಾಮದ ಬಹುತೇಕ ಜನರು ಸುಮಾರಾಗಿ ಭೂಮಿಯನ್ನು ಹೊಂದಿದ್ದು ಕೆಲವೇ ಕೆಲವು ಜನರಷ್ಟೇ ನೀರಾವರಿ ಭೂಮಿಯನ್ನು ಹೊಂದಿದ್ದಾರೆ. ಇನ್ನೂ ಉಳಿದಂತೆಲ್ಲಾ ಬೆದ್ದಲು ಭೂಮಿಯಿಂದ ಆವೃತಗೊಂಡಿದೆ. ಅಲ್ಲಿ ವರ್ಷಕ್ಕೆ ಒಂದು ಬೆಳೆಯನ್ನು ಮಾತ್ರ ಬೆಳೆಯಲಾಗುತ್ತದೆ. ವರ್ಷದ ಮೊದಲ ಮುಂಗಾರಿನಲ್ಲಿ ಮಳೆ ಪ್ರಮಾಣ ಚೆನ್ನಾಗಿದ್ದರೆ ಮಾತ್ರ ಉತ್ತಮ ಫಸಲನ್ನು ಬೆಳೆಯಲು ಸಾಧ್ಯವಾಗುತ್ತಿದೆ.

ಮುಂಗಾರು ಮಳೆ ಪ್ರಾರಂಭದಿಂದ ಅಂದರೆ ಜೂನ್-ಜುಲೈ ತಿಂಗಳುಗಳಿಂದ ಡಿಸೆಂಬರ್-ಜನವರಿಗೆ ಒಂದು ಬೆಳೆಯನ್ನು ಮಾತ್ರ ಬೆಳೆಯಲಾಗುತ್ತದೆ. ಆರಂಭದ ಮಳೆ ಬಂದಾಗ ರೈತರು ಮೊದಲು ತಮ್ಮ ಜಮೀನುಗಳನ್ನು ಹಸನುಮಾಡಿ, ಮಡಿಕೆ, ಕುಂಟೆಗಳನ್ನು ಹೊಡೆದು ಭೂಮಿಯನ್ನು ಹದ ಮಾಡಿ ಜಮೀನಿನಲ್ಲಿರುವಂತಹ ಕಸ, ಕಡ್ಡಿಗಳನ್ನು ತೆಗೆದು ಬೆಳೆಗೆ ಅನುಕೂಲವಾಗುವಂತೆ ಮಾಡುತ್ತಾರೆ.

ನಂತರದ ದಿನಗಳಲ್ಲಿ ತಮ್ಮ ಜಮೀನಿಗೆ ಯಾವ ಫಸಲನ್ನು ಬಿತ್ತಿದರೆ ಯೋಗ್ಯ ಎಂದು ಮನೆಮಂದಿಯೆಲ್ಲ ಕುಳಿತು ಚರ್ಚಿಸುತ್ತಾರೆ. ಕೆಲಜನರು ಶಾಸ್ತ್ರಗಳನ್ನು ಕೇಳಿಸುತ್ತಾರೆ. ಆ ವರ್ಷದ ಮಳೆ ಪ್ರಮಾಣ ಹೇಗಿದೆ, ಉತ್ತಮ ಮಳೆಯಾಗುವ ಸಂಭವಪಿದ್ದರೆ ಜನರು ಸಂತೋಷದಿಂದ ಮುಂದಿನ ಕಾರ್ಯಗಳನ್ನು ಕೈಗೊಳ್ಳಲು ಮುಂದಾಗುತ್ತಾರೆ.

ಇಲ್ಲಿನ ಪ್ರಮುಖ ಬೆಳೆಗಳಾಗಿ ಶೇಂಗಾ, ಹತ್ತಿ, ಮೆಕ್ಕೆ ಜೋಳ, ಈರುಳ್ಳಿ, ರಾಗಿ, ಸೂರ್ಯಕಾಂತಿ, ಭತ್ತ, ತೊಗರಿ, ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಬೆಳೆಗಳನ್ನು ಅಧ್ಯಯನದ ದೃಷ್ಟಿಯಿಂದ ಎರಡು ರೀತಿಯಲ್ಲಿ ಕಾಣಬಹುದು.

೧. ಸಾಮಾಜಿಕ ಬೆಳೆಗಳು

೨. ಆರ್ಥಿಕ ಬೆಳೆಗಳು

ಕೃಷಿಯಲ್ಲಿ ಬೆಳೆಯಲಾಗುವ ಬೆಳೆಗಳನ್ನು ನಾವು ಈ ರೀತಿ ಎರಡು ಕ್ರಮಗಳಲ್ಲಿ ಅಧ್ಯಯನ ಮಾಡಲು ಸಹಾಯವಾಗತ್ತವೆ. ಇದರಿಂದ ಒಟ್ಟಾರೆ ಮೊಳಕಾಲ್ಮೂರು ಗ್ರಾಮದ ವ್ಯವಸಾಯ ಪದ್ಧತಿಯುನ್ನು ಹಾಗೂ ಸ್ಥಿತಿಗತಿಗಳನ್ನು ಅವಲೋಕಿಸಲು ಸಹಾಯಕವಾಗಿದೆ. ಈ ವಿಭಾಗಕ್ರಮ ಒಂದು ಹಳ್ಳಿಯ ಇಡೀ ರೈತರ ಬದುಕು–ಬವಣೆಗಳನ್ನು, ಜೀವನ ವಿಧಾನವನ್ನು, ಊರಿನ ಪ್ರಗತಿ–ಅವನತಿಯನ್ನು ತಿಳಿಸುವ ಮಾನದಂಡವಾಗಿದೆ. ಆದುದರಿಂದ ಈ ಎರಡು ಅಂಶಗಳಿಂದ ಅಧ್ಯಯನದ ಪರಿಧಿಯಲ್ಲಿ ವಿವರಿಸಲಾಗುತ್ತದೆ.

ಸಾಮಾಜಿಕ ಬೆಳೆಗಳು ಎಂದರೆ ಸಾಮಾನ್ಯವಾಗಿ ಜನಗು ತಮ್ಮ ನಿತ್ಯದ ಆಹಾರಕ್ಕಾಗಿ ಬೆಳೆಯುವಂತಹ ಬೆಳೆಗಳು, ಈ ಸಾಮಾಜಿಕ ಬೆಳೆಗಳಲ್ಲಿ ಹಲವಾರು ಬೆಳೆಗಳು ಸೇರಿ ಕೊಳ್ಳುತ್ತವಾದರೂ ಪ್ರಮುಖವಾಗಿ ಈ ಪ್ರದೇಶದಲ್ಲಿ ಬೆಳೆಯುವಂತಹ ಬೆಳೆಗಳನ್ನು ಮಾತ್ರ ವಿಶ್ಲೇಷಿಸಲಾಗಿದೆ. ಈ ಸಾಮಾಜಿಕ ಬೆಳೆಗಳು ವರ್ಷದ ಋತುಮಾನವನ್ನು ಆಧರಿಸಿ ಬೆಳೆಯುವಂತಹ ಬೆಳೆಗಳಾಗಿವೆ ಮುಂಗಾರಿನ ಮಳೆಯಿಂದ ಪ್ರಾರಂಭವಾಗಿ ಸುಗ್ಗಿಯ ಕಾಲ ಮುಗಿಯುವವರೆಗೂ ಸುಮಾರು ಆರು ತಿಂಗಳುಗಳ ಕಾಲದ ಅಂತರದಲ್ಲಿ ಬೆಳೆಯುವ, ವರ್ಷಕ್ಕೆ ಒಂದೇ ಫಸಲನ್ನು ಬೆಳೆಯುವಂತಹ ಬೆಳೆಗಳಾಗಿವೆ. ಇವುಗಳನ್ನು ಅತೀಸಣ್ಣರೈತ ಹಾಗೂ ಸಣ್ಣರೈತರು ಬೆಳೆಯುತ್ತಿದ್ದು, ಈ ಬೆಳೆಗಳು ಅವರ ದಿನನಿತ್ಯದ ವ್ಯವಹಾರಕ್ಕಾಗಿ ಕುಟುಂಬದಲ್ಲಿನ ಜನರು ವರ್ಷವಿಡೀ ಬದುಕಲಿಕ್ಕೆ ತಮಗಷ್ಟೇ ಸೀಮಿತವಾಗಿ ಬೆಳೆದುಕೊಳ್ಳುವಂತಹವುಗಳು. ಕಾರಣ ಇವರು ಹೊಂದಿರುವ ಭೂಮಿ ಬೆದ್ದಲು ಭೂಮಿಯಾಗಿದೆ ಇಲ್ಲಿ ಯಾವುದೇ ರೀತಿಯ ಜಲಸಂಪತ್ತು ಇಲ್ಲ– ಕೇವಲ ಮಳೆಯನ್ನು ಆಶ್ರಯಿಸಿ ಬೆಳೆಯನ್ನ ಪಡೆಯಬೇಕು. ಸಕಾಲಕ್ಕೆ ಮಳೆ ಬಾರದೆ ಹೋದರೆ ಆ ವರ್ಷದಲ್ಲಿ ಅವರಿಗೆ ಆಹಾರದ

ಕೊರತೆ/ಮನೆಗೆ ಕಾಳು-ಕಡಿಗಳ ಕೊರತೆ ಕಾಣುತ್ತದೆ. ಆಗ ಅವರ ಜೀವನ ದುಸ್ತರ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ ನಾವು ಈ ಬೆಳೆಯನ್ನು ವರ್ಷದ ಬೆಳೆ ಅಂತಲೇ ಕರೆಯಲಾಗುತ್ತದೆ.

ಒಂದು ವೇಳೆ ಮಳೆ ತಡವಾಗಿ ಬಂದು ಬಿತ್ತನೆ ಕಾರ್ಯ ನಿಧಾನವಾದರೆ ಫಲ ಹುಲುಸಾಗಿ ಬೆಳೆಯದೆ ರೈತರು ನಷ್ಟವನ್ನು ಅನುಭವಿಸುತ್ತಾರೆ ಬಿತ್ತಿದ ಬೀಜಕ್ಕೆ ಬೆಳೆ ಕುಂಟಿತವಾಗುತ್ತದೆ. ತುಂಬಾ ನಿಧಾನವಾಗಿ ಫಸಲು ಬರುತ್ತದೆ. ಅದು ಹೆಚ್ಚಿನ ಇಳುವರಿ ಆಗದೆ ಸ್ವಲ್ಪ ಪ್ರಮಾಣದಲ್ಲಿ ಫಸಲು ಬಂದು ರೈತ ಇದರಿಂದ ಬಹಳ ಕಷ್ಟಕ್ಕೀಡಾಗುತ್ತಾನೆ ಸಕಾಲದಲ್ಲಿ ಮಳೆಯಾಗದ ಕಾರಣ ಬಿತ್ತನೆ ತಡವಾಗಿ, ಫಸಲು ತಡವಾಗಿ, ಫಲವೂ ಕಡಿಮೆ ಪ್ರಮಾಣದಲ್ಲಿ ಬಂದಾಗ ರೈತ ಸಾಲಗಾರನಾಗುತ್ತಾನೆ. ಬಿತ್ತನೆ ಸಂದರ್ಭದಲ್ಲಿ ಸಾಲಮಾಡಿ ಬೀಜತಂದು ಬಿತ್ತನೆ ಮಾಡಿರುತ್ತಾನೆ. ಬೆಳೆ ಮಾತ್ರ ಕಡಿಮೆಯಾಗಿರುತ್ತದೆ. ಇದರಿಂದ ಅವನು ಸಾಲಗಾರನಾಗಿ ಮುಂದೆ ನೆಮ್ಮದಿಯಿಲ್ಲದೆ ಬದುಕಬೇಕಾದ ದುಸ್ಥಿತಿ ಬಂದೊದಗುತ್ತದೆ.

ಈ ಹಿಂದೆ ಪ್ರಕೃತಿಯು ಋತುಮಾನ ಆಯಾಕಾಲಕ್ಕೆ ಸರಿಸಮಾನವಾಗಿರುತ್ತಿದ್ದವು. ನಂತರದ ದಿನಗಳಲ್ಲಿ ಪ್ರಕೃತಿಯ ವೈಪರಿತ್ಯದಿಂದ ನಿಸರ್ಗದಲ್ಲಿ ಅನೇಕ ಊಹಿಸಲಾಗದ ಏರುಪೇರುಗಳು ಉಂಟಾದವು. ಸಮಯಕ್ಕೆ ಸರಿಯಾಗಿ ಮಳೆಯಾಗದೆ ಇರುವುದು. ಮಳೆಗಾಲದಲ್ಲಿ ಬಿಸಿಲಿನ ಪ್ರಮಾಣ ಹೆಚ್ಚಿರುವುದು, ಉರಿಬಿಸಿಲಿನಿಂದ ಭೂಮಿಯ ಜಲಸಂಪತ್ತು ಹಿಂಗಿಹೋಗಿ ಬೆಳೆಗಳು ಒಣಗಿ ಹೋಗುತ್ತವೆ. ಚಳಿಗಾಲದಲ್ಲಿಯೂ ಸಹ, ಉಷ್ಣತೆಯ ಪ್ರಮಾಣ ಹೆಚ್ಚಿರುತ್ತದೆ. ಬೇಸಿಗೆ ಕಾಲದಲ್ಲಿ ಮನುಷ್ಯ ಬಿಸಿಲಿನ ಬೇಗೆಗೆ ಕುಳಿತಲ್ಲಿ ಕೂರಲಾರದೆ, ನಿಂತಲ್ಲಿ ನಿಲ್ಲಲಾರದೆ ಪರದಾಡುವಂತಹ ಸ್ಥಿತಿ ಒದಗುತ್ತದೆ. ಇದಕ್ಕೆಲ್ಲ ಕಾರಣ ಇಂದು ಹೆಚ್ಚಾಗುತ್ತಿರುವ ಕೈಗಾರೀಕರಣ, ವೈಜ್ಞಾನೀಕರಣ ಮುಂತಾದ ಆಧುನಿಕ ಅವಿಷ್ಕಾರಗಳು ಪ್ರಕೃತಿಗೆ ವಿರುದ್ಧವಾಗಿ ಚಲಿಸುತ್ತಿರುವುದರಿಂದ ಇಂದು ಇಷ್ಟೇಲ್ಲಾ ಕಷ್ಟ-ನಷ್ಟವನ್ನು ಅನುಭವಿಸುವಂತಾಗಿದೆ.

ಹಿಂದಿನ ಸುಮಾರು-೩-೪ದಶಕಗಳ ಹಿಂದೆ ಹಾಗೂ ಅದರ ಆಚೆಗೂ ಗ್ರಾಮೀಣ ಪ್ರದೇಶಗಳಲ್ಲಿ ರೈತರು ಜಾನುವಾರಗಳ ಸಾಕುವಿಕೆ/ ಸಾಕುಪ್ರಾಣಿಗಳ ಸಾಕಾಣಿಕೆ ಹೆಚ್ಚಿನ ಪ್ರಮಾಣದಲ್ಲಿತ್ತು, ಪ್ರತಿಯೊಂದು ಮನೆಯಲ್ಲಿ ಕನಿಷ್ಟ ಪ್ರಮಾಣದಲ್ಲಿ ಹಸು-ದನಕರುಗಳು, ಕೋಳಿ-ಕುರಿ, ಆಡು ಮುಂತಾದ ಸಾಕುಪ್ರಾಣಿಗಳನ್ನು ಹೊಂದಿರುತ್ತಿದ್ದರು ಇದರಿಂದ ಅವರ ಮನೆಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಯಾವುದೇ ಕೊರತೆ ಇರುತ್ತಿರಲಿಲ್ಲ. ಸಾಕಷ್ಟು ಕೊಟ್ಟಿಗೆ ಗೊಬ್ಬರ ಸಿಗುತ್ತಿತ್ತು. ಈ ಕೊಟ್ಟಿಗೆ ಗೊಬ್ಬರವನ್ನು ರೈತರು ತಮ್ಮ ಜಮೀನುಗಳಿಗೆ ಹಾಕುತ್ತಿದ್ದು ಹೊಲದಲ್ಲಿ ಬೆಳೆಯುತ್ತಿದ್ದ ಬೆಳೆ ಉತ್ತಮ ರೀತಿಯಲ್ಲಿ ಫಲ ಕೊಡುತ್ತಿದ್ದು ಇದು

ಭೂಮಿಯ ಫಲವತ್ತತೆಯನ್ನು ಕಾಯ್ದುಕೊಂಡು ವರ್ಷವರ್ಷಕ್ಕೂ ಹೆಚ್ಚಿನ ಫಸಲನ್ನು ಕಾಣಬಹುದಾಗಿತ್ತು. ಋತುಮಾನಕ್ಕೆ ಸರಿಯಾಗಿ ಮಳೆಯೂ ಸಹ ಸಕಾಲಕ್ಕೆ ತಪ್ಪದೇ ಆಗುತ್ತಿದ್ದರಿಂದ ಜನರು ನೆಮ್ಮದಿಯ ಜೀವನ ಸಾಗಿಸುತ್ತಿದ್ದರು. ಹಾಗೂ ಜನರಲ್ಲಿ ಧಾರ್ಮಿಕ ನಂಬಿಕೆಗಳು ಅಘಾದವಾಗಿದ್ದು ವರಣ, ವಾಯು, ಸೂರ್ಯ, ಚಂದ್ರ, ಪಂಚಭೂತಗಳನ್ನು ಪೂಜಿಸುತ್ತಿದ್ದರು, ವ್ಯವಸಾಯಕ್ಕೆ ಬಳಸುವ ದನ ಕರುಗಳನ್ನು ಸಹ ಅತ್ಯಂತ ಪ್ರೀತಿಯಿಂದ, ಭಕ್ತಿ, ಗೌರವಗಳಿಂದ ಕಾಣುತ್ತಿದ್ದರು, ಆದರೆ ಇಂದು ಧಾರ್ಮಿಕ ಚಟುವಟಿಕೆಗಳಲ್ಲಿ ನಂಬಿಕೆ, ಆಸಕ್ತಿ ಕಡಿಮೆಯಾಗಿದೆ. ಹಸು-ಕರುಗಳನ್ನು ಕೇವಲವಾಗಿ ಕಾಣುತ್ತಿದ್ದಾರೆ ದನಗಳನ್ನು ಅವು ದುಡಿಮೆಗೆ ಬಳಸುವ ಪ್ರಾಣಿಗಳಷ್ಟೇ ಎಂಬ ಅಲ್ಪ ಪ್ರಜ್ಞೆ ಅನಾಗರೀಕತೆಯಿಂದ ವರ್ತಿಸುತ್ತಿದ್ದಾರೆ ಜನರು ಇತ್ತೀಚಿನ ದಿನಗಳಲ್ಲಿ ಮಳೆ ಅಷ್ಟೇ ಅಲ್ಲ ಭೂಮಿಯೂ ಸಹ ತನ್ನ ನಿಜರೂಪವನ್ನು ಮರೆಮಾಚುತ್ತಿದೆ. ಒಂದು ವೇಳೆ ಸರಿಯಾದ ಕಾಲಕ್ಕೆ ಮಳೆಯಾದರೂ ಉತ್ತಮ ಬೆಳೆಯನ್ನು ಪಡೆಯಲಾಗುತ್ತಿಲ್ಲ, ಕಾರಣ ಇಂದು ಜಮೀನುಗಳು ತಮ್ಮ ಫಲವತ್ತತೆಯ ಅಂಶವನ್ನು ಕಳೆದುಕೊಳ್ಳುತ್ತಿವೆ. ಉತ್ತಮಗೊಬ್ಬರದ ಕೊರತೆ, ಅನೇಕ ರಾಸಾಯನಿಕ ಔಷದಿಗಳಿಂದ ಕೂಡಿದ ಕಾಂಪಸ್ ಗೊಬ್ಬರ ಹಾಕಿದಾಗ ಅದು ಸ್ವಲ್ಪ ಕಾಲವಷ್ಟೇ ತನ್ನ ಪ್ರಭಾವ ಬೀರಿ ಉಳಿದಂತೆ ತನ್ನಲ್ಲಿರುವ ವಿಷ ರಾಸಾಯನಿಕವನ್ನು ಭೂಮಿಗೆ ಇಳಿಬಿಟ್ಟಾಗ ಭೂಮಿಯಲ್ಲಿನ ನಿಸರ್ಗ ಸಹಜ ಕಣಗಳು ಸತ್ತು ಅಲ್ಲಿ ವಿಷವರ್ತುಲ ನಿರ್ಮಾಣಗೊಳ್ಳುತ್ತದೆ, ಇದರಿಂದ ಆ ಭೂಮಿಯಲ್ಲಿ ನಾವು ಎಷ್ಟೇ ಪ್ರಯತ್ನ ಪಟ್ಟರೂ ಫಲವತ್ತಾದ ಬೆಳೆಯನ್ನು ಬೆಳೆಯಲು ಸಾಧ್ಯವಾಗುವುದಿಲ್ಲ.

ಈಗಿನ ದಿನಗಳಲ್ಲಿ ಜನರು ಬಹುತೇಕವಾಗಿ ಜಾನುವಾರುಗಳನ್ನು ಸಾಕುವುದನ್ನು ಬಿಟ್ಟಿದ್ದಾರೆ. ಜಾನುವಾರುಗಳ ಸಾಕುವಿಕೆಯೆಂದರೆ ಅವರಿಗೆ ಅದೊಂದು ಕಷ್ಟದ ಕೆಲಸ, ಅವುಗಳ ಜವಾಬ್ದಾರಿ ಬಹಳ ದುಸ್ತರ, ಹಿಗಾಗಿ ರೈತರಿಗೆ ಉತ್ತಮಗೊಬ್ಬರದ ಕೊರತೆಯೂ ಇದೆ. ಈ ಕೊರತೆಯಿಂದ ರೈತರು ಸರ್ಕಾರಿ/ ರಾಸಾಯನಿಕ ಔಷದಿ-ಗೊಬ್ಬರದ ಅಂಗಡಿಗಳ ಬಾಗಿಲು ಕಾಯುವಂತಾಗಿದೆ. ಎಷ್ಟೋ ಜನ ಜಮೀನಿನ ಆಧಾರದ ಮೇಲೆ ಸಾಲಮಾಡಿ ಅದನ್ನ ಮರು ತಿರಿಸಲಾಗದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮತ್ತೆ ಕೆಲವರು ಊರನ್ನೆ ಬಿಟ್ಟು ಪರ ಊರುಗಳಿಗೆ ವಲಸೆಹೋಗುತ್ತಿದ್ದಾರೆ. ಇದರಿಂದ ಉಳುಮೆ ಮಾಡದೆ ಜಮೀನುಗಳೆಲ್ಲ ಪಾಳುಬಿದ್ದು ಯಾವ ಕೆಲಸಕ್ಕೂ ಬಾರದೆ ಬಂಜರು ಭೂಮಿಗಳಾಗಿ ಕಾಣುತ್ತಿವೆ. ಕೆಲ ಜನತೆ ತಾವು ಮಾಡಿದ ಸಾಲ ತೀರಿಸಲು ಅಥವಾ ತಮ್ಮ ಜಮೀನಿನಲ್ಲಿ ಉತ್ತಮ ಬೆಳೆ ಬೆಳೆಯಲಾರದೆ ಆ ಜಮೀನನ್ನು ಬೇರೆಯವರಿಗೆ ಮಾರಿಕೊಂಡು, ಬಂದಂತಹ ಹಣದಲ್ಲಿ

ಬೇರೆ ಇನ್ನಾವುದೋ ವ್ಯವಹಾರಗಳಲ್ಲಿ ತೊಡಗಿಸಿ ಅದರಿಂದಲೇ ಜೀವನ ಸಾಗಿಸುತ್ತಿದ್ದಾರೆ. ಇದು ಗ್ರಾಮೀಣ ಪ್ರದೇಶಗಳಲ್ಲಿನ ರೈತರ ಬವಣೆಗಳನ್ನು ಸ್ಥಿತಿಯನ್ನು ತೋರಿಸಿಕೊಡುತ್ತದೆ.

ಒಂದು ಕಾಲದಲ್ಲಿ ರೈತರು ಬೆಳೆದ ಬೆಳೆಯನ್ನು ತಮಗೆ ಬೇಕಾಗುವಷ್ಟು ಇಟ್ಟುಕೊಂಡು, ಕೆಲವಷ್ಟು ದಾನ-ಧರ್ಮಮಾಡಿ ಉಳಿದಂತ ಆಹಾರವನ್ನು ಭೂಮಿಯಲ್ಲಿ ಗುಂಡಿಮಾಡಿ ಅಥವಾ ವಾಡೆವು (ಇದು ಮಣ್ಣಿನಿಂದ ಮಾಡಿದ ದೊಡ್ಡ ಗಾತ್ರದ ಗಡಿಗೆ, ಇದನ್ನು ಮನೆಯ ಒಳಗೆ ಅಥವಾ ಗೋಡೆಗೆ ಜೋಡಿಸಿರುತ್ತಾರೆ)ಗಳಲ್ಲಿ ಶೇಖರಿಸಿಕೊಂಡಿರುತ್ತಿದ್ದರು. ಇದರಿಂದ ಮನೆಯಲ್ಲಿ ಆಹಾರದ ಕೊರತೆ ಇರುತ್ತಿರಲಿಲ್ಲ. ಇಂದು ಜನರ ಬೇಜವಾಬ್ದಾರಿತನ ಮತ್ತು ಪ್ರಕೃತಿಯ ವೈಪಲ್ಯತೆಗೆ ತುತ್ತಾಗಿ ಜನರು ತತ್ತರಿಸಿದ್ದಾರೆ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಮಂದಿ ತಮ್ಮ ಊರುಗಳಲ್ಲಿ ಬದುಕಲಾಗದೆ ಬೇರೆ ಬೇರೆ ನಗರ ಪಟ್ಟಣಗಳಿಗೆ ವಲಸೆಹೋಗಿ ಅಲ್ಲಿನ ಕೈಗಾರಿಕೆಗಳಲ್ಲಿ, ಅಂಗಡಿಗಳಲ್ಲಿ, ಹೋಟೆಲ್‌ಗಳಲ್ಲಿ ಕೂಲಿಕಾರ್ಮಿಕರಾಗಿ ಜೀವನ ನಡೆಸುತ್ತಿರುವುದು ವಸ್ತು ಸ್ಥಿತಿಗೆ ಹತ್ತಿರವಾಗಿದೆ. ಹಾಗೆಯೇ ಹಳ್ಳಿಯಲ್ಲಿರುಪ ಕೆಲ ಜನ ಅತ್ತ ನಗರಗಳಿಗೆ ಹೋಗಲಾರದೆ, ಇತ್ತ ಊರಲ್ಲಿ ಬದುಕಲಾರದೆ ಮಧ್ಯದ ಪರಿಸ್ಥಿತಿಯಲ್ಲಿ ತಮ್ಮ ಬದುಕನ್ನು ಸವೆಸುತ್ತಿದ್ದಾರೆ.

ಆರ್ಥಿಕ ಬೆಳೆಗಳು

ಆರ್ಥಿಕ ಬೆಳೆಗಳು ಕೇವಲ ವ್ಯವಹಾರಕ್ಕಾಗಿ ಬೆಳೆಯುವಂತಹ ಬೆಳೆಗಳಾಗಿವೆ ಎನ್ನಬಹುದು. ಏಕೆಂದರೆ ಈ ಬೆಳೆಗಳು ಜನರಿಗೆ ಹಣವನ್ನು ತಂದುಕೊಡುತ್ತವೆ. ಅವರ ಬದುಕನ್ನ ಉತ್ತಮ ಮಟ್ಟದಲ್ಲಿಡಲು ಸಹಕಾರಿಯಾಗುತ್ತದೆ.

ಆರ್ಥಿಕವಲಯದಲ್ಲಿ ಮೌಲ್ಯವನ್ನು ಪಡೆದಿರುವಂತಹ ಬೆಳೆಗಳನ್ನು ಆರ್ಥಿಕ ಬೆಳೆಗಳು ಎಂದು, ಈ ಕ್ಷೇತ್ರದಲ್ಲಿ ಹತ್ತಿ, ರೇಷ್ಮೆ ಮುಂತಾದ ಕೆಲವು ಕೈಗಾರಿಕೆಗಳಿಗೆ ಉಪಯುಕ್ತವಾಗುವಂತಹ ಪ್ರಮುಖ ಬೆಳೆಗಳಾಗಿವೆ. ಈವ್ಯವಸಾಯವು ಬಹುತೇಕ ನೀರಾವರಿ ಬೇಸಾಯ ಪದ್ದತಿಯನ್ನು ಹೊಂದಿದ ಜನರು ಮಾತ್ರ ಬೆಳೆಯಲು ಸಾಧ್ಯವಾಗಿದೆ. ಕಾರಣ ಬೆಳೆಗಳು ಸಾಮಾಜಿಕ ಬೆಳೆಗಳಂತೆ ಸ್ವಲ್ಪವೇ ಮಳೆಗೆ, ಅಲ್ಪ ಪ್ರಮಾಣದ ಗೊಬ್ಬರ ಔಷದಿಗಳಿಗೆ ಬೆಳೆಯುವಂತಹ ಬೆಳೆಗಳಲ್ಲ. ಇವುಗಳಿಗೆ ಅತಿ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನ ಒದಗಿಸಬೇಕಾಗುತ್ತದೆ. ಉತ್ತಮ ತಳಿಯ ಬೀಜ, ಸಕಾಲಕ್ಕೆ ಸರಿಯಾಗಿ ಕ್ರಮ ಬದ್ದವಾದ ಔಷದೋಪಚಾರ ನಡೆದರೆ ಮಾತ್ರ ಫಸಲು ಚೆನ್ನಾಗಿ ಬರಲು ಸಾಧ್ಯ. ಹಾಗಾಗಿ ಈ ಬೆಳೆಗಳು ಆರ್ಥಿಕವಲಯದಲ್ಲಿ ತನ್ನದೇ ಆದ ಪ್ರಮುಖ ಸ್ಥಾನವನ್ನು ಕಾಯ್ದಿರಿಸಿಕೊಂಡಿದೆ. ಹಾಗೆಯೇ ದೇಶದ-ರಾಜ್ಯದ ಆರ್ಥಿಕ ಪ್ರಗತಿಗೆ ಇವು ಪೂರಕವಾದಂತಹ ಬೆಳೆ ಎಂದರೂ ತಪ್ಪಾಗಲಾರದು.

ಮೊಳಕಾಲ್ಮೂರು ಗ್ರಾಮದ ಪರಿಸರದಲ್ಲಿ ಈ ಆರ್ಥಿಕ ಬೆಳೆಯನ್ನು ಅವಲಂಬಿಸಿ ಬದುಕುವ ಜನರು ಕಡಿಮೆ ಪ್ರಮಾಣದಲ್ಲಿದ್ದು ಬಹಳಷ್ಟು ಜನರು ಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಕೆಲವೇ ದೊಡ್ಡ ರೈತರು ತಮ್ಮ ಜಮೀನುಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡು ಸೀಮಿತ ಪ್ರದೇಶಗಳಲ್ಲಿ ತಮಗೆ ಬೇಕಾದಂತಹ ಹಾಗೂ ಉತ್ತಮ ಇಳುವರಿಯನ್ನು ಕೋಡುವಂತಹ ಬೆಳೆಗಳನ್ನಷ್ಟೇ ಬೆಳೆಯುತ್ತಿದ್ದಾರೆ. ಇದರಿಂದ ಅವರ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದ್ದು ಇತರೆ ಸಾಮಾನ್ಯ ಜನರಿಗೆ ಕೆಲಸ ಕೊಡುವ ದನಿಗಳಾಗಿದ್ದಾರೆ.

ಗ್ರಾಮದ ಸುತ್ತ ಮುತ್ತಲಿನ ಪ್ರದೇಶ ಬಯಲು ಪ್ರದೇಶಗಳಿಂದ ತುಂಬಿದ್ದು ವಣ ನೆಲವೇ ಕಾಣುತ್ತಿದೆ. ಮುಂಗಾರಿನ ಸಂದರ್ಭದಲ್ಲಿ ಜಮೀನುಗಳಿಗೆ ಫಸಲನ್ನು ಹಾಕಿದಾಗ. ಪ್ರಕೃತಿ ಹಸುರಿನಿಂದ ಕೂಡಿದ್ದು ಉಳಿದ ಸಮಯದಲ್ಲಿ ಕೇವಲ ಬೆಂಗಾಡಾಗಿ ಕಂಡುಬರುತ್ತದೆ. ಹೆಚ್ಚಿನ ರೈತರು ಜಮೀನುಗಳು ಬೆದ್ದಲು ಭೂಮಿಯಾಗಿರುವುದೇ ಇದಕ್ಕೆ ಮೂಲ ಕಾರಣವಾಗಿದೆ.

ಹೀಗೆ ಪ್ರಮುಖವಾಗಿ ಮೊಳಕಾಲ್ಮೂರು ಗ್ರಾಮದ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದಲ್ಲಿ ಗ್ರಾಮದ ಒಟ್ಟಾರೆ ಕೃಷಿ ಪದ್ದತಿಯಲ್ಲಿ ಎರೆಡು ರೀತಿಯಾಗಿ ವಿಂಗಡಿಸಿಕೊಂಡು ಸಂಶೋಧನೆ ನಡೆಸಿದಾಗ ಮೂಲದಲ್ಲಿ ಎಲ್ಲೂ ವ್ಯತ್ಯಾಸಗಳು ಕಂಡುಬರುವುದಿಲ್ಲ. ಇಂದಿನ ವಾಸ್ತವತೆಗೆ ಅನುಸಾರವಾಗಿ ಗ್ರಾಮದಲ್ಲಿನ ಕೃಷಿ ಕ್ಷೇತ್ರದಲ್ಲಿ ಇಂದು ಹಲವು ಹೊಸ ಮಹತ್ವದ ಬದಲಾವಣೆ ಕಂಡು ಬರುತ್ತಿವೆ. ಮಳೆಯಾಶ್ರಿತ ರೈತರು ಒಂದು ವರ್ಗವಾದರೆ, ಪ್ರಕೃತಿಯ ಅಕಾಲಿಕ ಪರಿಸ್ಥಿತಿಯಿಂದ ಬೇರೆ ಪ್ರದೇಶಗಳಿಗೆ ವಲಸೆ ಹೋಗಿ ಬದುಕುವ ಜನ ಇನ್ನೊಂದು ವರ್ಗವಾಗಿದೆ. ಹೀಗಾಗಿ ಊರಿನಲ್ಲಿರುವ ಜಮೀನುಗಳು ಒಡೆಯರಿಲ್ಲದ ಹಾಳು ದೇವಾಲಯದಂತೆ, ಊರಿನ ಅಡ್ಡಾಡಿ ದನಕರುಗಳು ಸರ್ವಸ್ವತಂತ್ರವಾಗಿ ಆ ಜಮೀನುಗಳಲ್ಲಿ ಬದುಕುತ್ತಿರುವ ಸನ್ನಿವೇಶ ಉಂಟಾಗಿದೆ. ಇನ್ನೂ ಕೆಲ ಜಮೀನುಗಳು ಬಿಸಿಲಿನ ಬೇಗೆಗೆ ಮೈಯೊಡ್ಡಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿವೆ. ಹಾಗೆ ಊರಿನ ಕೆಲ ಉಳ್ಳವರು ತಮ್ಮ ಜಮೀನುಗಳಿಗೆ ಅಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಜಾಗತೀಕರಣದ ಮೊದಲ ಮೆಟ್ಟಿಲನ್ನು ಹತ್ತಿದ್ದಾರೆ. ಇದು ಆ ಗ್ರಾಮ ಅಭಿವೃದ್ದಿ ಹೊಂದುತ್ತಿರುವ ಗ್ರಾಮಗಳ ಸಾಲಿನಲ್ಲಿ ನಿಂತಿರುವುದನ್ನು ತೋರಿಸುತ್ತದೆ.

ಬೇಸಾಯೇತರ ವೃತ್ತಿಗಳು

ಮನುಷ್ಯ ಕೇವಲ ಕೃಷಿಯನ್ನೇ ಅವಲಂಭಿಸಿ ಜೀವನಸಾಗಿಸುವುದು ಕಷ್ಟ ಸಾಧ್ಯ. ಅದು ಇಂದಿನ ಆಧುನಿಕ ಸಂದರ್ಭದಲ್ಲಿ ಇನ್ನಷ್ಟು ಕಷ್ಟ ಆ ರೀತಿಯ ಸಂದರ್ಭ ಸೃಷ್ಟಿಯಾಗಿದೆ. ಇದು ಆಧುನಿಕತೆಯ ಪ್ರಭಾವ ಎಂದರೂ ಅತಿಶಯವಾಗಲಾರದು. ಈ

ಆಧುನಿಕತೆಯ ಪರಿಣಾಮದಿಂದಾಗಿ ಮನೆಗಳಲ್ಲಿ ಹೊಸತನ ತುಂಬಿ ತುಳುಕಾಡುತ್ತಿದೆ. ಊರಲ್ಲಿ ಹಿಂದೆ ಇದ್ದ ನೈಸರ್ಗಿಕ ಪರಿಕರಗಳಿಂದ ರಚನೆಯಾಗಿದ್ದಂತಹ ಗುಡಿಸಲುಗಳು ಮಾಯವಾಗಿ ಸಿಮೆಂಟ್-ಇಟ್ಟಿಗೆಗಳಿಂದ ಕಟ್ಟಿದಂತಹ ಕಟ್ಟಡಗಳು ತಲೆ ಎತ್ತಿನಿಂತಿವೆ. ಅದೇರೀತಿಯಲ್ಲಿ ಜನರು ಒಂದೇ ವೃತ್ತಿಯನ್ನು ಅವಲಂಬಿಸದೆ, ತಮಗೆ ತೋಚಿದ ಬೇರೆ ಸುಲಭ ಮಾರ್ಗೋಪಾಯದಲ್ಲಿ ಜೀವನ ನಿರ್ವಹಣೆಗೆ ಯಾವುದು ಸಹಕಾರಿಯೆನಿಸುತ್ತದೆಯೋ ಆವೃತ್ತಿಯನ್ನು ಆಯ್ಕೆ ಮಾಡಿ ಕೊಂಡಿದ್ದಾರೆ. ಜೀವನ ನಿರ್ವಹಣೆಗೆ ಒಂದೇ ದಾರಿಯಲ್ಲ ಹಲವಾರು ದಾರಿಗಳಿವೆ ಎಂಬುದನ್ನು ಕಂಡುಕೊಂಡ ಗ್ರಾಮದ ಜನರು ಇಂದು ಹಲವಾರು ಉದ್ದಿಮೆ ವ್ಯವಹಾರಗಳಲ್ಲಿ ತೊಡಗಿದ್ದಾರೆ.

ಈ ಮಾತಿನಂತೆ ಮೊಳಕಾಲ್ಮೂರು ಗ್ರಾಮದಲ್ಲಿ ಜನತೆ ಅನೇಕ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದಾರೆ. ಸಂಪರ್ಕ ಸಂವಹನಗಳ ಸಹಾಯದಿಂದ, ಸಂವಹನ ಮಾಧ್ಯಮಗಳ ಪರಿಣಾಮಕಾರಿಯಾದ ಪ್ರಭಾವ ಜನರನ್ನು ಅತಿ ಶೀಘ್ರವಾಗಿ ಆಕರ್ಷಿಸಿವೆ. ಹೊಟೆಲ್ ಉಧ್ಯಮ, ಸಿದ್ದ ಉಡುಪುಗಳ ತಯಾರಿಕೆ, ಹಣ್ಣು-ಹಂಪಲಿನ ವ್ಯಾಪಾರ, ಕೋಳಿಸಾಕಾಣಿಕೆ, ಹೀಗೆ ಇಡೀ ಊರಿನಲ್ಲಿ ಪ್ರಗತಿಯ ಪೂರಕವಾದವಾತಾವರಣ ಸೃಷ್ಠಿಯಾಗಿದೆ. ಇದರಿಂದ ಕೇವಲ ಜನರಷ್ಟೇ ಅಲ್ಲ ಸಮುದಾಯಗಳಲ್ಲಿ ಸರ್ವತೋಮುಖ ಬೆಳವಣಿಗೆ ಕಂಡು ಬರುತ್ತಿದೆ. ಗ್ರಾಮದಲ್ಲಿ ಕೆಲ ಸಂಘ ಸಂಸ್ಥೆಗಳು ಸ್ಥಾಪನೆಯಾಗಿದ್ದು ಇದರಿಂದ ಜನರನ್ನು ಒಗ್ಗೂಡಿಸುವ ಮೂಲಕ ಊರಿನ ಪ್ರತಿಯೊಂದು ವಿಷಯಗಳಿಗೆ ಸ್ಪಂದಿಸುತ್ತ ಒಗ್ಗಟಿನ ಸಹಬಾಳ್ವೆ ನಡೆಸುತ್ತಿದ್ದಾರೆ. ಹಾಗೆಯೇ ಊರಿನಲ್ಲಿ ಪಟ್ಟಣ ಪಂಚಾಯ್ತಿಯಿದ್ದು ಇದು ಇಡೀ ಊರಿನ ಆಗುಹೋಗುಗಳ ಬಗ್ಗೆ ಕಾಳಜಿವಹಿಸುತ್ತ ಸರ್ಕಾರದ ಪಂಚಾಯತ್ ರಾಜ್ಯ ನೀತಿ ಸಂಹಿತೆಯ ನಿಯಮಗಳಡಿಯಲ್ಲಿ ಪ್ರಜಾ ಪ್ರತಿನಿಧಿಗಳು ಚುನಾವಣೆ ಮೂಲಕ ಆಯ್ಕೆಗೊಂಡು ಜನರ ಮತ್ತು ಊರಿನ ಏಳ್ಗಿಗೆ ತಮ್ಮನ್ನು ಮೀಸಲಾಗಿಟ್ಟುಕೊಂಡಿದಾರೆ, ಜನಸೇವೆಯೇ ಜನಾರ್ಧನಸೇವೆ ಎಂಬ ನಾಣ್ಣುಡಿಯಂತೆ ಪ್ರತಿನಿಧಿಗಳು ಊರಿನ ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುವಲ್ಲಿ, ಸಂಸ್ಕೃತಿಯನ್ನು ಉಳಿಸುವಲ್ಲಿ, ಸ್ವಚತೆ ಕಾಪಾಡುವುದರಲ್ಲಿ, ಆರೋಗ್ಯವಾದ ವಾತಾವರಣವನ್ನ ಕಾಯ್ದುಕೊಳ್ಳುವಲ್ಲಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಮೊಳಕಾಲ್ಮೂರು ಗ್ರಾಮ ಪರಿಸರದಲ್ಲಿ ಕಂಡುಬರುವಂತಹ ಕೃಷಿ ಮತ್ತು ಇನ್ನಿತರೆ ಕೃಷಿಯೇತರ ವೃತ್ತಿಗಳನ್ನು ಕಾಣಬಹುದು. ಆಧುನಿಕ ತಂತ್ರಜ್ಞಾನದ ಹಾದಿಯಲ್ಲಿ ಗ್ರಾಮದ ಜನತೆ ಬದುಕಿನಲ್ಲಿ ಹೊಸತನವನ್ನು ಕಂಡುಕೊಂಡಿದ್ದಾರೆ. ಆದರೂ ಇಂದು ಹಳೆ ಗೊಡ್ಡು ಸಂಪ್ರದಾಯಗಳಿಗೆ ಕಟ್ಟುಬೀಳದೆ ಬದಲಾವಣೆಯ ಜೀವನವನ್ನು

ಬಯಸುತ್ತಿದ್ದು ಆಧುನಿಕ ಕಾಲಕ್ಕೆ ಹೊಂದಿಕೊಂಡು, ರೀತಿ ನೀತಿಗಳಲ್ಲಿ ಹೊಸತನವನ್ನು ಆಚರಿಸಿಕೊಂಡು ಬರುತ್ತಿದ್ದಾರೆ.

ಒಟ್ಟಾರೆ ಗ್ರಾಮದ ಪರಿಸರದಲ್ಲಿ ಜನತೆಯು ವೃತ್ತಿಗಳಲ್ಲಿ, ಸಂಪ್ರದಾಯ ಆಚರಣೆಗಳಲ್ಲಿ, ಕೃಷಿ ಪದ್ದತಿಗಳಲ್ಲಿ ಗಣನೀಯ ಬದಲಾವಣೆ ಮತ್ತು ಸಾಧನೆ ಕಂಡು ಬರುತ್ತಿದ್ದು ಈ ಅಂಶಗಳಿಂದ ನಾವು ಈ ಹಿಂದಿನ ತಲೆಮಾರಿನ ಗ್ರಾಮದ ಸ್ಥಿತಿಗತಿಗೂ ಪ್ರಸ್ತುತ ಇರುವಂತಹ ಸ್ಥಿತಿಗತಿಗೂ ಪರಿವರ್ತನೆಯಾಗಿರುವುದು ನಮ್ಮ ಕಣ್ಣಮುಂದೆ ಸಾಕ್ಷಿಯಾಗಿ ನಿಲ್ಲುತ್ತದೆ.

ರಾಜಕೀಯ ಸ್ಥಿತ್ಯಂತರಗಳು

ಮೊಳಕಾಲ್ಮೂರು ಎಂಬ ಹೆಸರು ಸರ್ಕಾರಿ ಕಛೇರಿಗಳಲ್ಲಿ ಗಮನಿಸಿದಂತೆ ಸುಮಾರು ೮+೧೦ ದಶಕಗಳ ಹಿಂದಿನಿಂದಲೂ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿ ಕಂಡು ಬರುತ್ತದೆ ಜಿಲ್ಲೆಯ ಪ್ರಪ್ರಥಮವಾಗಿ ಮೊಳಕಾಲ್ಮೂರು ತಾಲ್ಲೂಕಿನ ಸುತ್ತಲ ಪ್ರದೇಶ ಜಿಲ್ಲಾ ಪ್ರದೇಶದ ತಲೆಯಂತಿದ್ದು ಇದು ಇದೇ ಜಿಲ್ಲೆಗೆ ಕಳಸಪ್ರಾಯದಂತಿದೆ ಸಂವಿಧಾನದ ವಿಧಿನಿಯಮ ಪಂಚಾಯತ್ ರಾಜ್ಯದ ನಿಯಮಾವಳಿಯಡಿಯಂತೆ ಇದು ಇಂದು ಪಟ್ಟಣ ಪಂಚಾಯ್ತಿಯಾಗಿ ಮಾರ್ಪಾಡಾಗಿದೆ.

ಜಿಲ್ಲೆಗಳ ವಿಂಗಡಣೆಯ ಸಂದರ್ಭದ ಕಾಲದಿಂದಲೂ ಈ ಊರು ಚಿತ್ರದುರ್ಗ ಜಿಲ್ಲೆಗೆ ಸೇರ್ಪಡೆಯಾಗಿದ್ದು ಚುನಾವಣೆ ಸಂದರ್ಭಗಳಲ್ಲಿ ಎಂ.ಎಲ್.ಎ. ವಿಧಾನಸಭೆಗೆ ಒಬ್ಬ ಪ್ರತಿನಿಧಿ ಪ್ರತಿ ಚುನಾವಣೆಗೆ ಆಯ್ಕೆಗೊಳ್ಳುತ್ತಿದ್ದಾರೆ. ಪರಿಸರದ ಜನತೆ ತಮ್ಮ ನಿಷ್ಪಕ್ಷಪಾತ ಮತಗಳಿಂದ ಕ್ಷೇತ್ರದ ಆದರ್ಶ ವ್ಯಕ್ತಿಯನ್ನು ಉತ್ತಮ ಆಡಳಿತ ನೀತಿ ಹೊಂದಿದಂತಹ ವ್ಯಕ್ತಿಯನ್ನ ಪ್ರತಿ ನಿಧಿಸುತ್ತಿದ್ದು ಇದು ಜನತೆಯ ಮನೋಧರ್ಮವನ್ನು ತೋರಿಸಿಕೊಡುತ್ತದೆ. ಹೀಗೆ ಈ ಕ್ಷೇತ್ರದಿಂದ ಆಯ್ಕೆಯಾದಂತಹ ಪ್ರತಿನಿಧಿಗಳು ವಿಶಾಲ ಕರ್ನಾಟಕದ ಮುಖ್ಯಮಂತ್ರಿ ಸ್ಥಾನದ ಗದ್ದುಗೆಯನ್ನು ಸಹ ಏರಿ ಕ್ಷೇತ್ರಕ್ಕೆ ಹೆಸರನ್ನು ತಂದುಕೊಟ್ಟಿದ್ದಾರೆ. ಅಂತವರಲ್ಲಿ ಪ್ರಮುಖವಾಗಿ ದಿ.ಎಸ್.ನಿಜಲಿಂಗಪ್ಪನವರು ಪ್ರಮುಖ ರಾಜಕಾರಣಿಯಾಗಿ ಕಂಡುಬರುತ್ತಾರೆ. ಇಂತಹ ಧೀಮಂತ ರಾಜಕಾರಣಿಯನ್ನು ನೀಡಿದ ಹೆಮ್ಮೆ ಈ ಮೊಳಕಾಲ್ಮೂರು ಕ್ಷೇತ್ರಕ್ಕಿದೆ ಎಂಬುದನ್ನು ಇಲ್ಲಿ ನೆನೆಯಬಹುದು.

ಪ್ರಸ್ತುತ ಮೊಳಕಾಲ್ಮೂರು ಗ್ರಾಮವು ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ಬ್ರಿಟೀಷ್ ಆಡಳಿತ ಕಾಲಾವಧಿಯಲ್ಲಿ, ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ್ದು ಈ ಪ್ರದೇಶವು ರಾಜರ ಆಳ್ವಿಕೆ ಕಾಲದಲ್ಲಿ ಅವರ ಆಡಳಿತಕ್ಕೆ ಒಳಪಟ್ಟಿತು.

ಹಾಗೆಯೆ ಮುಂದೆಬಂದಂತಹ ಮೈಸೂರಿನ ಒಡೆಯರ ಕಾಲದಲ್ಲಿ ಈಪ್ರದೇಶ ಪ್ರಮುಖವಾಗಿ ಗುರ್ತಿಸಿಕೊಂಡಿದೆ. ಅದೇ ತೆರನಲ್ಲಿ, ಆಂಧ್ರದ ನಾಯಕರ ಕಪಿಮುಷ್ಠಿಗೂ ಒಳಪಟ್ಟಿತ್ತು ಎಂದು ಕೆಲವು ಬಲ್ಲ ಮೂಲಗಳು ಹೇಳುತ್ತವೆ ಇದರಿಂದ ಇಡೀ ಈ ಮೊಳಕಾಲ್ಮುರು ಪ್ರದೇಶ ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುತ್ತದೆ. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿನ ರಾಜಕೀಯ ಸ್ಥಿತಿಗತಿಗಳನ್ನು ಅವಲೋಕಿಸುವಾಗ ಅಲ್ಲಿ ಊರಿನ ಪ್ರಮುಖರೆನಿಸಿಕೊಂಡವರು ಗೌಡ. ಇವನ ನಂತರ ಪಟೇಲ, ಶ್ಯಾನುಭೋಗ, ತಳವಾರ ಮುಂತಾದ ಊರಿನ ಕೆಲವು ಸಮುದಾಯದ ಪ್ರಮುಖ ವ್ಯಕ್ತಿಗಳು ಊರಿನ ಕಾರ್ಯಭಾರದಲ್ಲಿ ಕಾಣಸಿಗುತ್ತಾರೆ. ಹಿಂದಿನ ಅರಸರ ಕಾಲದಲ್ಲಿ ಒಂದು ಗ್ರಾಮದ ಒಟ್ಟಾರೆ ಪ್ರಗತಿ–ಅವನತಿ ಆಯಾ ಗ್ರಾಮದ ಮುಖಂಡನ ಮೇಲೆ ಅವಲಂಬಿತವಾಗಿರುತ್ತದೆ. ಈ ಮಾತು ಈ ಗ್ರಾಮಕ್ಕೂ ಅನ್ವಯಿಸುತ್ತದೆ.

ಮೊಳಕಾಲ್ಮೂರು ಗ್ರಾಮ ಬಯಲುಸೀಮೆಯಿಂದ–ಬಿರುಬಿಸಿಲಿನಿಂದ ಬೆಟ್ಟ ಗುಡ್ಡಗಳಿಂದ ಕೂಡಿರುಪಂತಹ ಬೆಂಗಾಡು ಪ್ರದೇಶವಾಗಿದೆ ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ನಾವು ನೋಡಿದ್ದೇವೆ. ಇಂತಹ ಬೆಂಗಾಡು ಪ್ರದೇಶದಲ್ಲಿ ಜನತೆ ಅರಸರ ಅಣತಿಯಂತೆ ಊರಿನ ಮುಖಂಡರ ಮಾತಿಗೆ ಎದುರಾಡದೆ ನಯವಿಧೇಯತೆಯಿಂದ ಜೀವನ ನಡೆಸುತ್ತಿದ್ದು, ಏಕತೆಯಲ್ಲಿ ಅನೇಕತೆ ಅನೇಕತೆಯಲ್ಲಿ ಏಕತೆಯನ್ನ ಕಂಡುಕೊಂಡಿದ್ದರು. ಊರಿನ ಯಾವುದೇ ಒಂದು ಕಾರ್ಯ ಕ್ರಮಗಳಿಗೂ, ಒಳ್ಳೆಯ–ಕೆಟ್ಟ ಕಾರ್ಯಗಳಿಗೂ ಎಲ್ಲರೂ ಒಂದಾಗಿ ಸಮನಾಗಿ ಹಂಚಿಕೊಂಡು ಬಾಳುತ್ತಿದ್ದು ಊರಿನ ಎಲ್ಲಾ ಕಷ್ಟನಷ್ಟಗಳನ್ನ ತಮ್ಮ ಮನೆಯ ಕಷ್ಟ ಸುಖವೆಂಬಂತೆ ಸ್ವೀಕರಿಸುತ್ತಿದ್ದರು. ಊರು ಬಿಸಿಲಿನ ಬೇಗೆಯಲ್ಲಿ ಬೆಂದು ಬಂಜರು ಭೂಮಿಯಾಗಿದ್ದರೂ ಜನರಮನಸ್ಸು ಪ್ರೀತಿವಿಶ್ವಾಸ ತುಂಬಿದ ಹಸಿರಿನಿಂದ ಕೂಡಿತ್ತು.

ಕಾಲದ ಅಂತರದಲ್ಲಿ ಸ್ವಾತಂತ್ರ್ಯ ನಂತರ ಕ್ರಮೇಣ ರಾಜಕೀಯ ಊರಿಗೆ ಪಾದಾರ್ಪಣೆ ಮಾಡಿತು. ಈ ರಾಜಕೀಯ ಪ್ರವೇಶದಿಂದ ಊರಿನಲ್ಲಿ ಗಮನಾರ್ಹ ಬದಲಾವಣೆಗಳು ಕಾಣತೊಡಗಿದವು. ಇದು ಕೇವಲ ಈ ಗ್ರಾಮದಲ್ಲಷ್ಟೇ ಅಲ್ಲ ರಾಷ್ಟ್ರವೇ ರಾಜಕೀಯದ ಕಪಿಮುಷ್ಠಿಯಲ್ಲಿ ಸಿಲುಕಿರುವಾಗ ಈ ಊರಿನ ಪಾತ್ರವಾದರೂ ಏನು, ಪ್ರಜೆಗಳು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಸಮಾನಭಾವದಿಂದ ಜೀವಿಸುತ್ತಿದ್ದ ಕಾಲದಲ್ಲಿ ರಾಜಕೀಯ ಪ್ರವೇಶದಿಂದ ಸ್ವಲ್ಪಮಟ್ಟಿಗೆ ಬದಲಾವಣೆ ಬಂತು, ಜನರಲ್ಲಿ ಚಂಚಲತೆ ಬಂತು, ಅದು ನಂತರದ ದಿನಗಳಲ್ಲಿ ಇಡೀ ಊರು ಹಲವುಭಾಗಗಳಾಗುವಷ್ಟರ ಮಟ್ಟಿಗೆ ಇಂದು ರಾಜಕೀಯತೆ ತನ್ನ ಪ್ರಭಾವದ ಕರಾಳ ಹಸ್ತ ಚಾಚಿತು.

ಗೌಡ, ಪಟೇಲ, ಶ್ಯಾನುಭೋಗ ಈ ಮುಖಂಡರ ಕಾಲಮಾನದಲ್ಲಿ ಹಳ್ಳಿಯ/ ಗ್ರಾಮದ ಪ್ರತಿಯೊಬ್ಬ ವೃತ್ತಿ ಕೆಲಸಗಾರರು ಅವರವರ ಕೆಲಸಗಳನ್ನು ನಿಷ್ಠೆಯಿಂದ ಅಷ್ಟೇ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುತ್ತಿದ್ದರು. ಗೌಡ ಊರಿನ ಪ್ರಮುಖ ಕಾರ್ಯಗಳಲ್ಲಿ, ಧರ್ಮ, ಜಾತ್ರೆ, ಉತ್ಸವಗಳಲ್ಲಿ ಪ್ರಮುಖ ಮಹತ್ವ ವ್ಯಕ್ತಿಯಾಗಿ ಉಳಿದಂತೆ ಪಟೇಲ, ಕಂಬಾರ, ಕುಂಬಾರ, ದಲಿತವರ್ಗ, ಅಗಸ, ತಳವಾರ, ಮುಂತಾದ ಆಯಾ ಸಮುದಾಯದ ಜನತೆ ಊರಿನ ಪ್ರತಿಯೊಂದು ಕೆಲಸಗಳಲ್ಲಿ ಭಾಗವಹಿಸಿ ಎಲ್ಲರಲ್ಲಿ ಒಂದಾಗಿ ಸಹಭಾಗಿತ್ವದ ಬದುಕು ಸಾಗಿಸುತ್ತಿದ್ದರು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಇದೇ ಈ ಪದ್ಧತಿಗಳು ಇಂದು ಸಂಪೂರ್ಣ ಮರೆಯಾಗಿವೆ, ಈ ಅಂಶ ಅವೈಜ್ಞಾನಿಕತೆಯ ಮನೋಭಾವನೆಯಲ್ಲಿ ವೈಜ್ಞಾನಿಕ ರಾಜಕೀಯ ಮನೋಭಾವನೆಯನ್ನು ತೋರಿಸಿಕೊಡುತ್ತದೆ. ಗ್ರಾಮದಲ್ಲಿನ ವೃತ್ತಿಗಳಿಗನುಗುಣವಾಗಿ ರಾಜಕೀಯವಿದ್ದರೂ ಕೂಡ ಊರಿನ ಅಭಿವೃದ್ಧಿಗಾಗಿಯೇ ಇತ್ತು. ಆದರೆ ಎಲ್ಲಾ ಸಮುದಾಯದ ಜನರ ಮನಸ್ಸು ಸ್ಥಿರವಾದ ಮನೋಭಾವನೆಗಳಾಗಿದ್ದು ಏಕತೆಯಲ್ಲಿ ಐಕ್ಯತೆಯನ್ನು ಕಾಣುತ್ತಿದ್ದರು.

ಅದೇ ಇಂದಿನ ಸಾಂಸ್ಕೃತಿಕ, ಧಾರ್ಮಿಕವಾಗಿ ಸಾಮಾಜಿಕ ಮನೋಭಾವನೆಯ ಹಿನ್ನಲೆಯಲ್ಲಿ ಒಮ್ಮತ, ಹೊಂದಾಣಿಕೆ ಊರಿನ ಕ್ಷೇಮಾಭಿವೃದ್ಧಿಗಾಗಿ ರಾಜಕೀಯ ಗ್ರಾಮಗಳಲ್ಲಿ ಗ್ರಾಮಸಭೆಗಳು ನಡೆಯುತ್ತಿದ್ದು ಸ್ಥಳಗಳಲ್ಲಿ ಪಂಚಾಯ್ತಿಕಾರ್ಯಾಲಯ ಆ ಸ್ಥಾನವನ್ನು ಆಕ್ರಮಿಸಿಕೊಂಡಿದ್ದು ಇದು ಬದಲಾವಣೆಯನ್ನು ಸೂಚಿಸುತ್ತದೆ. ಒಂದು ನ್ಯಾಯ ತೀರ್ಮಾನವಾಗಬೇಕಾದರೆ ಅಥವಾ ಯಾವುದೇ ಜಗಳ, ಜಾತ್ರೆ, ಉತ್ಸವ, ಮುಂತಾದ ಪ್ರಗತಿಪರ ಕಾರ್ಯಗಳು ನಡೆಯಬೇಕಾದರೆ ಊರಿನ ಚಾವಡಿಯ ಮುಂದೆ ಊರಿನ ಮುಖಂಡ, ಅವನ ಸಹಾಯಕರು, ಊರಿನ ಎಲ್ಲಾ ಜನತೆ ಒಂದು ಕಡೆ ಸಭೆ ಸೇರೆ ಎಲ್ಲ ವಿಷಯಗಳನ್ನು ನೇರಾ ನೇರ ಚರ್ಚಿಸಿ ಒಮ್ಮತದ ಅಭಿಪ್ರಾಯಯನ್ನು ವ್ಯಕ್ತಪಡಿಸಲಾಗುತ್ತಿತ್ತು ಇದಕ್ಕೆಂದೆ ವ್ಯಕ್ತಿಗಳು ನೇಮಕಗೊಂಡಿದು ಅವರನ್ನು ಪಂಚರು ಅಥವಾ ಪಂಚಾಯ್ತಿಯ ಮುಖಂಡರೆಂದು ಕರೆಯಲಾಗುತ್ತಿತ್ತು. ಅವರ ತೀರ್ಮಾನವೇ ಅಂತಿಮ. ಈ ಪಂಚರು ಧರ್ಮಕ್ಕೆ ಅಂಜಿ ನಿಷ್ಪಕ್ಷಪಾತವಾದ ನ್ಯಾಯವನ್ನು ನೀಡುತ್ತಿದ್ದು ಇದರಿಂದ ಆಯಾ ಕಲಾಪಗಳಲ್ಲಿ ಯಾವುದೇ ಭಿನ್ನಭಿಪ್ರಾಯ ಮಾಡಿಸುತ್ತಿರಲಿಲ್ಲ.

ಇಂದಿನ ಜಾಗತೀರಣ, ಕೈಗಾರಿಕರಣದ ಸಂದರ್ಭದಲ್ಲಿ ಇಂತಹ ಸನ್ನಿವೇಶಗಳನ್ನು ನೋಡಲು ಅಸಾಧ್ಯ ಏಕೆಂದರೆ ಊರಿನ ಗೌಡನ ಸ್ಥಾನದಲ್ಲಿ ಇಂದು ಪಂಚಾಯ್ತಿ ಅಧ್ಯಕ್ಷ ನಿದ್ದಾನೆ. ಅವನನ್ನು ಊರಿನ ಜನತೆಯೇ ತಮ್ಮ ಪ್ರತಿನಿಧಿಯೆಂದು ಆಯ್ಕೆಮಾಡಿದ್ದಾರೆ.

ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ಚುನಾವಣೆ ನಡೆದು ಅದರಲ್ಲಿ ಗೆದ್ದಂತಹ ವ್ಯಕ್ತಿಗಳ ಕ್ರಮೇಣ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಹೀಗೆ ವರ್ಗೀಕರಿಸಿಕೊಂಡು ಒಂದು ಊರಿನ ಉಸ್ತುವಾರಿಯನ್ನು ತಮ್ಮ ಕೈಗೆ ತೆಗೆದುಕೊಂಡಿರುತ್ತಾರೆ. ಊರಿನ ಯಜಮಾನ ಸಂಸ್ಕೃತಿ ಹೋಗಿ ಅಧ್ಯಕ್ಷ ಸಂಸ್ಕೃತಿ, ತಾಂಡವಾಡುತ್ತಿದೆ. ಈ ಸ್ಥಾನಗಳಿಗೆ ಊರಿನ ಜನತೆಯಲ್ಲಿಯೇ ಪೈಪೋಟಿ ಏರ್ಪಡುತ್ತಿದೆ. ಇಂದು ಜಾತಿಗೊಬ್ಬ- ವರ್ಗಕ್ಕೊಬ್ಬ ನಾಯಕ ಹುಟ್ಟಿಕೊಂಡಿದ್ದಾನೆ. ಆನಾಯಕ ಇಡೀ ಆ ಸಮುದಾಯವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು, ಜಾತಿಜಾತಿಗಳಲ್ಲಿ ವರ್ಗಸಂಘರ್ಷಗಳು ಕಂಡುಬರುತ್ತಿವೆ, ತಮ್ಮ ಜಾತಿಯ ನಾಯಕನೇ ಅಧ್ಯಕ್ಷ ಸ್ಥಾನವನ್ನು ಆಲಂಕರಿಸಬೇಕೆಂದು ಪರಸ್ಪರ ಸಮಾನ ಮನೋಭಾವನೆದಿಂದ ಬಾಳುತ್ತಿದ್ದ ಜನರ ಮನದಲ್ಲಿ ಇಂದು ದ್ವೇಷ-ಅಸೂಯೆ, ಸಂಘರ್ಷ, ವಿವಾದಗಳು ತಾಂಡವಾಡುತ್ತಿವೆ, ಇದು ಇಡೀ ಊರಿನ ಏಳು-ಬೀಳಿಗೆ ಕಾರಣ ವೆನಿಸುತ್ತದೆ.

ಇಂದಿನ ಸರ್ಕಾರಿ ಕಛೇರಿಗಳಲ್ಲಿ ಒಬ್ಬ ಸಾಮಾನ್ಯ ಬಡವ್ಯಕ್ತಿ ಒಂದು ಸಣ್ಣ ಕೆಲಸ ಮಾಡಿಕೊಳ್ಳಬೇಕೆಂದರೂ ರಾಜಕೀಯ ಮಾಡುತ್ತಾನೆ. ಸಣ್ಣಪುಟ್ಟ ಅಧಿಕಾರಿಗಳಿಂದಲೋ, ಅಥವಾ ಕ್ಷೇತ್ರದ ಮುಖ್ಯ ವ್ಯಕ್ತಿಗಳಿಂದಲೋ, ವಸೂಲಿಯನ್ನು ಪಡೆದು ತನ್ನ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದಾನೆ. ಅಂದರೆ ಪ್ರತಿಯೊಂದು ವಿಷಯದಲ್ಲೂ ರಾಜಕೀಯತೆ ಎಂಬ ಬೃಹತ್ ಪೆಡಂಭೂತ ತನ್ನ ಹಸ್ತವನ್ನು ಎಲ್ಲಾ ಕಡೆ ಚಾಚಿ ನಿಂತಿರುವುದು ಅದರ ಆಳವನ್ನು ತಿಳಿಸಿಕೊಡುತ್ತದೆ.

೧೯೪೭ರಲ್ಲಿ ಸ್ವಾತಂತ್ರ್ಯಗಳಿಸಿಕೊಂಡ ನಾವು ಗ್ರಾಮಸಭೆಗಳ ಸಂಪೂರ್ಣ ಅಧಿಕಾರ ತೊಡೆದುಹಾಕಿ ಜಿಲ್ಲಾಪಂಚಾಯತ್‌ಗಳನ್ನ ಮಂಡಲ್ ಪಂಚಾಯ್ತಿಗಳಾಗಿ ಮಾರ್ಪಾಡಿಸಿ ಅಧಿಕಾರವಿಕೇಂದ್ರಿಕರಣದಿಂದ ಇಡೀ ಗ್ರಾಮದ ಮೇಲ್ವಿಚಾರಣೆಗೆ ಅಧಿಕಾರ ನೀಡಲಾಯಿತು. ಹಿಂದೆ ಅಧಿಕಾರದಲ್ಲಿದ ಗೌಡ, ಪಟೇಲ, ಮತ್ತು ಶ್ಯಾನಬೋಗರು ತಮ್ಮ ವೃತ್ತಿಯಿಂದ ಕೆಳಗಳಿದರು ಈ ನಡುವೆ ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಗ್ರಾಮದ ಇಡೀ ಮೇಲ್ವಿಚಾರಣೆಗೆ ಜನ ಪ್ರತಿನಿಧಿಗಳನ್ನು ಆಯ್ಕೆಮಾಡುವುದಕ್ಕೆ ಚುನಾವಣೆ ಎಂಬ ಮಾನದಂಡದ ಅಳವಡಿಕೆ ಪ್ರಾರಂಭವಾಯಿತು. ಹಾಗಾಗಿ ಗ್ರಾಮಗಳು ಅನಾಧಿಕಾಲದಿಂದ ಏನನ್ನು ಅನುಸರಿಸಿಕೊಂಡು. ಸೌಜನ್ಯ ಬದುಕಿಗೆ ದಾರಿಮಾಡಿಕೊಂಡಿದೆಯೋ ಅವುಗಳೆಲ್ಲದರ ಕೊಂಡಿಗಳನ್ನು ಕಳಚಿ ಗ್ರಾಮದ ಅಧೋಗತಿಗೆ ಏನನ್ನು ರೂಡಿಸಿಕೊಳ್ಳಬೇಕು ಅದೆಲ್ಲವನ್ನು ಸ್ವಾತಂತ್ರ್ಯ ನಂತರದ ಚುನಾವಣೆ ಸಂಸ್ಥೆಗಳ ಅಳವಡಿಕೆ ಮಾಡಿಕೊಳ್ಳುತ್ತಿವೆ.

ಇಂದಿನ ಮೊಳಕಾಲ್ಮುರು ಪಂಚಾಯ್ತಿಗೆ ಸಂಬಂಧಿಸಿದಂತೆ ೧೫ವಾರ್ಡ್‌ಗಳದ್ದು ಒಟ್ಟು ಜನಸಂಖ್ಯೆ ೧೪.೦೦೦ ಇದ್ದು ಇದರಲ್ಲಿ ೧೨.೭೩೪ ಜನರು ಮತದಾರರಿದ್ದು

ಪ್ರತಿ ಚುನಾವಣೆಗೆ ಶೇ೮೦%ರಿಂದ ೯೦%ರಷ್ಟು ಸರಾಸರಿ ಮತದಾನ ನಡೆಯುತ್ತದೆ ಈ ಚುನಾವಣೆಯಲ್ಲಿ ಜನರು ತಮ್ಮ ಅಮೂಲ್ಯಮತ ನೀಡಿ ಒಬ್ಬ ಉತ್ತಮ ನಾಯಕನನ್ನು ಆರಿಸಿಕೊಳ್ಳುತ್ತಿದ್ದಾರೆ. ಈ ರೀತಿಯ ಚುನಾವಣೆಗಳಿಂದ ಈ ಹಿಂದೆ ಹಲವುಮಂದಿ ನಾಯಕರು ಆಯ್ಕೆಯಾಗಿದ್ದು, ಆಯ್ಕೆಗೊಂಡಂತಹ ವ್ಯಕ್ತಿಗಳು ಇಡೀ ಊರಿನ ಪ್ರಗತಿಗೆ ಶ್ರಮಿಸಿದ್ದಾರೆ. ಆದರೂ ಸಹ ಗ್ರಾಮದಲ್ಲಿ ಇನ್ನೂ ಅನೇಕ ಕಾರ್ಯಗಳು ಯೋಜನೆಯ ಹಂತದಲ್ಲಿಯೇ ಇವೆ. ಮುಂದೆ ಸಾಗುತ್ತಿಲ್ಲ. ಇದಕ್ಕೆಲ್ಲ ಕಾರಣ ರಾಜಕೀಯ.

ಪರಸ್ಪರ ರಾಜಕೀಯ ಗುದ್ದಾಟಗಳಿಂದ ಒಳಜಗಳಗಳಿಂದ ಅನೇಕ ಕಾರ್ಯಗಳು ಪ್ರಾರಂಭದ ಹಂತದಲ್ಲಿಯೇ ನಿಂತು, ಇನ್ನೂ ಕೆಲವು ಅರ್ಧದಲ್ಲಿಯೇ ಸಂಪೂರ್ಣನಿಂತು ಹೋಗಿವೆ. ಪ್ರತಿವಿಷಯದಲ್ಲಿ ರಾಜಕೀಯತೆ, ಜಾತಿವರ್ಗ, ಸಂಘಟನೆಗಳು ಹೀಗೆ ಒಂದೊಂದರಲ್ಲಿ ಒಂದೊಂದು ತೆರನಾದ ಘರ್ಷಣೆಗಳಿಂದ ಹಲವಾರು ಊರಿನ ಪ್ರಗತಿಪರ ಯೋಜನೆಗಳು ನೆನೆಗುದಿಗೆ ಬಿದ್ದಿದ್ದು ಇದರಿಂದ ಊರಿನ ಜನತೆ ಕಂಗಾಲಾದ ಸ್ಥಿತಿಯಲ್ಲಿ ಅತ್ತ ಬದುಕಲಾರದೆ ಇತ್ತ ಜೀವಿಸಲಾರದೆ ಎಂಬಂತಹ ನಡುವಿನ ಪರಿಸ್ಥಿತಿಯಲ್ಲಿ ಇಂದು ಗ್ರಾಮದ ಪರಿಸ್ಥಿತಿ ಬಂದಿದೆ.

ಗ್ರಾಮದಲ್ಲಿ ಆರೋಗ್ಯಕೇಂದ್ರ, ಶಾಲಾ, ಕಾಲೇಜುಗಳು, ವಿದ್ಯಾರ್ಥಿನಿಲಯ, ಆರಕ್ಷಕ ಠಾಣೆ, ಪಂಚಾಯತ್ ಕಛೇರಿ, ಲೋಕೋಪಯೋಗಿ ಕಛೇರಿ ಹತ್ತು ಹಲವು ಸರ್ಕಾರಿ ಕಛೇರಿಗಳಿವೆ ಎಲ್ಲಾ ಕಛೇರಿಗಳಲ್ಲೂ ಅಲ್ಲಿನ ಪರಿಸ್ಥಿತಿಗಳನ್ನು ನೋಡಿದಾಗ ಹಲವು ಸಮಸ್ಯೆಗಳಿಂದ ಕೂಡಿದ್ದು ಅವುಗಳ ಪರಿಹಾರೋಪಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕ್ರಮಬದ್ಧವಾದ ಯೋಜನೆಗಳು ಕಾರ್ಯರೂಪಕ್ಕೆ ತರಲಾಗಿಲ್ಲ, ಇವೆಲ್ಲವನ್ನು ಗಮನಿಸಿದಾಗ ಇನ್ನೂ ಮೊಳಕಾಲ್ಮುರು ಗ್ರಾಮ ಅಭಿವೃದ್ಧಿಯಾಗಬೇಕು. ನಾಗರೀಕತೆ ಬೆಳೆದಿದೆ. ಗ್ರಾಮ ಇಂದು ಆಧುನೀಕರಣದ ಮೆಟ್ಟಿಲನ್ನು ಏರಿ ತಕ್ಕಮಟ್ಟಿನ ನವೀನತೆ ಆದರೂ ಸಹ ಗ್ರಾಮದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದಾಗ ಇನ್ನೂ ಎಷ್ಟೋ ಕೆಲಸಗಳು ನಡೆಯಬೇಕಿದೆ. ಕಾರ್ಯರೂಪಕ್ಕೆ ತರಲಾಗುತ್ತಿಲ್ಲ, ಇದಕ್ಕೆಲ್ಲ ಹಲವು ಮೇಲಧಿಕಾರಿಗಳ ಒತ್ತಡ, ರಾಜಕಾರಣಿಗಳ ಒತ್ತಡಗಳು ಬಹಳವಾಗುತ್ತಿರುವುದರಿಂದ ಗ್ರಾಮದ ಸ್ಥಿತಿ ಒಂದು ತೆರನಲ್ಲಿ ಡೋಲಾಯಮಾನ ಸ್ಥಿತಿಯಲ್ಲಿದೆ ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಕೇವಲ ನಗರ ಪ್ರದೇಶಗಳಲ್ಲಿ, ದೊಡ್ಡ ದೊಡ್ಡ ಕಛೇರಿಗಳಲ್ಲಿ ಅಷ್ಟೇ ದುರಾಡಳಿತ, ಮೋಸ, ವಂಚನೆ, ದಬ್ಬಾಳಿಕೆ ನಡೆಯುತ್ತಿಲ್ಲ ಅದು ಸಾಮಾನ್ಯ ಹಳ್ಳಿ ಪ್ರದೇಶಗಳಲ್ಲಿ ನಡೆಯುತ್ತಿದೆ. ಮೇಲ್ವರ್ಗದ ಜನತೆ ಇಂದೂ ಸಹ ಹಳ್ಳಿಗಳಲ್ಲಿ ಕೆಳವರ್ಗದ ಜನತೆ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ.

ಎಷ್ಟೋ ಮೂಢನಂಬಿಕೆಗಳ ಅಡಿಯಲ್ಲಿ ದೇವದಾಸಿ ಪದ್ಧತಿಯ ಅಮೂರ್ತರೂಪವನ್ನು ಕಾಣಲಾಗುತ್ತದೆ. ಹಳ್ಳಿಯಲ್ಲಿನ ಕಿರಿಯರು ಹಿರಿಯರಿಗೆ ಗೌರವವನ್ನು ಕೊಡುವುದೇ ಇಲ್ಲ, ಮನೆಯಲ್ಲಿ ತಂದೆತಾಯಿಗಳ ಮಾತು ಕೇಳದೆ ತಮ್ಮ ಮನಸ್ಸಿಗೆ ತೋಚಿದಂತೆ ಕೇವಲ ಪುಂಡಾಟಿಕೆ, ಮಾಡಿಕೊಂಡು ಊರಿನ ರಾಜಕೀಯದಲ್ಲಿ ತಲೆಹಾಕಿ ಹಲವು ಕೆಟ್ಟಕೆಲಸಗಳಲ್ಲಿ ತೊಡಗುತ್ತಿದ್ದಾರೆ.

ಊರಿನಲ್ಲಿ ಅಲ್ಪಮಟ್ಟದಲ್ಲಿ ಓದಿಕೊಂಡಂತಹ ಜನ ಅಲ್ಲಿ–ಇಲ್ಲಿ ತಿರುಗಾಡಿಕೊಂಡು ಸೋಮಾರಿತನದಿಂದ ಬೇಜವಾಬ್ದಾರಿಗಳಾಗಿ ಊರಿಗೆ ಮಾರಕವಾಗಿ ಮಾರ್ಪಾಡಾಗುತ್ತಿದ್ದಾರೆ. ಈಗಿನ ಸಂವಹನ ಮಾಧ್ಯಮಗಳ ಪ್ರಭಾವವೂ ಇದಕ್ಕೆ ಪ್ರಬಲ ಕಾರಣವಾಗಿದೆ.

ಗ್ರಾಮದಲ್ಲಿ ಕೆಲವು ಸಂಘಸಂಸ್ಥೆಗಳು ಸ್ಥಾಪನೆಗೊಂಡಿದ್ದು ಈ ಸಂಘ ಸಂಸ್ಥೆಗಳು ಸ್ವಲ್ಪ ಮಟ್ಟಿಗೆ ತಮ್ಮ ಸಂಸ್ಥೆಯ ನಿಯಮಗಳನ್ನು ಪಾಲಿಸುವ ಉದ್ದೇಶದಿಂದ ಕೆಲವು ಉಪಯೋಗಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಪ್ರಯೋಗಿಸುವುದರ ಮೂಲಕ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿವೆ, ಇಂತಹ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತಹ ಸ್ತ್ರೀಶಕ್ತಿ ಕೇಂದ್ರಗಳು, ಮಹಿಳಾಸಹಕಾರಿ ಸಂಸ್ಥೆಗಳು ಊರಿನ ಜನರಲ್ಲಿ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ರೂಪಿಸುತ್ತಿವೆಯಾದರೂ ಅವುಗಳ ಯಶಸ್ವಿತನದಲ್ಲಿ ಹೆಚ್ಚಿನ ಮಟ್ಟದಲ್ಲಿ ಅಪಜಯಗಳೇ ಕಂಡುಬರುತ್ತವೆ. ಇದಕ್ಕೆಲ್ಲ ಕಾರಣ ಅವರಿಗೆ ಸಕಾಲಕ್ಕೆ ಸರಿಯಾಗಿ ಸರ್ಕಾರದಿಂದಾಗಲಿ, ರಾಜಕೀಯದಿಂದ ಚುನಾಯಿತರಾದ ಪ್ರತಿನಿಧಿಗಳಿಂದಾಗಲಿ, ಜನರಿಂದಾಗಲಿ ಸರಿಯಾದ ಸಮಯದಲ್ಲಿ ಸಹಕಾರ ಸಿಗದೇ ಇರುವುದೇ ಆಗಿದೆ ಇಷ್ಟೆಲ್ಲಾ ಕೇವಲ ಒಬ್ಬರಿಂದ ಆಗುವಂತವುಗಳಲ್ಲ ಒಬ್ಬರಿಗೊಬ್ಬರು ಸಹಕಾರ ಮನೋಭಾವದಿಂದ ಕೂಡಿ ಮಾಡುವಂತಹ ಕೆಲಸಗಳಾಗಿವೆ. ಗ್ರಾಮದ ಜಾತ್ರೆ–ಉತ್ಸವಗಳ ಸಂದರ್ಭದಲ್ಲಿ, ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ, ಸಾಮೂಹಿಕ ಕಾರ್ಯಗಳಲ್ಲಿ ಊರೊಟ್ಟಿನ ಕೆಲಸಗಳಲ್ಲಿ ಸಾಮೂಹಿಕವಾಗಿರದೆ ವ್ಯಕ್ತಿಗತ ಕೆಲಸಗಳನ್ನು ನಡೆಯುತ್ತಿರುವುದನ್ನು ಅವಲೋಕಿಸಲಾಗಿದೆ. ಇಲ್ಲಿ ಪ್ರಮುಖವಾಗಿ ನಾಯಕತ್ವದ ಕೊರತೆ ಎದ್ದುಕಾಣುತ್ತದೆ. ಕೆಲವು ಅರೆಬರೆ ವಿದ್ಯಾಭ್ಯಾಸ ಮಾಡಿಕೊಂಡು ಇದಂತಹ ವ್ಯಕ್ತಿಗಳು/ ಯುವಕರು ಹಠದ ಸ್ವಭಾವದವರಾಗಿದ್ದು ತಮ್ಮ ನಿಲುವೇ ಆಗಬೇಕೆಂದು ಜಗಳಗಳನ್ನು ಮಾಡುತ್ತಾರೆ. ಇದರಿಂದ ಊರಿನ–ಜನರ ಐಕ್ಯತೆಯಲ್ಲಿ ಬಿರುಕು ಒಂದು ಕಗ್ಗಂಟಾಗಿ ಸಾಮಾನ್ಯ ಜನರಿಗೆ ಇದರಿಂದ ಅಘಾತಕಾರಿಯಾದಂತಹ ತೊಂದರೆಗಳು ಕಾಡುತ್ತಿವೆ. ಹಲವು ಬ್ರಾಹ್ಮಣ ಶಾಹಿಗಳು ಬಂಡವಾಳಶಾಹಿಗಳಾಗಿ ರೂಪಾಂತರಗೊಂಡಿದ್ದಾರೆ. ಜಾತಿ ಪ್ರಭುತ್ವ ಜಮಿನ್ದಾರ ಪ್ರಭುತ್ವವಾಗಿ

[illegible]

ಮಾರ್ಪಾಡಾಗಿದೆ. ಜಾತಿ ಜಾತಿಗಳಲ್ಲಿ ಕೋಮುವಾದ ಸೃಷ್ಠಿಗೆ ಕಾರಣವಾಗಿದೆ. ಮತದ ಆಸೆಗಾಗಿ ರಾಜಕಾರಣಿಗಳು ಹಲವು ಆಸೆ ಆಮಿಶಗಳಿಂದ ಜನರನ್ನು ತಮ್ಮತ್ತ ಸೆಳೆದುಕೊಂಡು ಅವರ ಬದುಕಿನ ದಿಕ್ಕನ್ನೇ ಬದಲಾಯಿಸುತ್ತಿದ್ದಾರೆ. ವರ್ಗ/ ಸಮುದಾಯಗಳಲ್ಲಿ ಇದ್ದಂತಹ ಅನ್ಯೋನ್ಯ ಸಂಬಂಧಗಳು ಕಡಿಮೆಯಾಗುತ್ತಿವೆ. ದೈವದ ಬಗ್ಗೆ/ ದೇವರ ಬಗ್ಗೆ ನಂಬಿಕೆಗಳು ಕಡಿಮೆ ಆಗುತ್ತಿವೆ. ಕೆಳಜಾತಿಗಳಲ್ಲಿ ದುಡಿಯುವ ಮನೋಭಾವವೇ ಕುಂಠಿತಗೊಳ್ಳುತ್ತಿದೆ. ದಿನನಿತ್ಯದಂತೆ ಹೊಲಮನೆ ಕೆಲಸಗಳಿಗೆ ಹೋಗದೆ ಯಾವುದೋ ಒಂದು ಅರೆಕಾಲಿಕ ಕೆಲಸಗಳಿಗೆ ಹೋಗುತ್ತಾ ತಮ್ಮ ಕುಟುಂಬವನ್ನು ತಾವೇ ಮೃತ್ಯುಕೂಪಕ್ಕೆ ತಳ್ಳಿಕೊಳ್ಳುತ್ತಿದ್ದಾರೆ.

ರೈತರಿಗೆ ಸಕಾಲದಲ್ಲಿ ಸರ್ಕಾರ, ಸವಲತ್ತುಗಳನ್ನು ನೀಡದ ಕಾರಣ ರೈತರು ಸೌಲಭ್ಯವಂಚಿತರಾಗಿ ಆತ್ಮಹುತಿಯಂತಹ ಧಾರುಣ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಎಷ್ಟೋ ರೈತರು ತಾವು ಪಡೆದಂತಹ ಸಾಲ ತೀರಿಸಲಿಕ್ಕಾಗದೆ ಅಥವಾ ಮನೆಯ ಜೀವನ ನಿರ್ವಹಣೆಯಲ್ಲಿ ದುರ್ಭಲರಾಗಿದ್ದು ಅವಕಾಶವಂಚಿತರಾಗಿ, ಸಾವಿನ ಬಾಗಿಲನ್ನು ತಟ್ಟುತ್ತಿದ್ದಾರೆ. ಸಾಮಾಜಿಕ ಚಲನೆಯಲ್ಲಿ ಅಸ್ತವ್ಯಸ್ತತೆ ಎದ್ದು ತೋರುತ್ತಿದೆ. ಸಮುದಾಯದ/ಗ್ರಾಮದ ಮುಖಂಡರು ತೀರ್ಮಾನಿಸಬೇಕಾಗಿರುವಂತಹ ನ್ಯಾಯ ವಿಚಾರಣೆಗಳು ಇಂದು ಪ್ರತಿಯೊಂದು ಸಣ್ಣ ಪುಟ್ಟ ವಿವಾಧಗಳಿಗೂ ಕೋರ್ಟಿಗೆ ಹೋಗಿ ಬಗೆಹರಿಸಿಕೊಳ್ಳಬೇಕಾಗಿ ಬಂದಿದೆ ಮನೆಯ ಗಂಡ-ಹೆಂಡತಿ ಜಗಳ ಬಗೆಹರಿಸಲು ಆರಕ್ಷಕರು ಬರಬೇಕು. ದಾಯಾದಿಗಳ ವೈಷಮ್ಯ, ಜಗಳ, ಹೊಲ-ಮನೆಗಳ ಜಗಳ, ಜಾತಿ-ಘರ್ಷಣೆ ಈ ಎಲ್ಲ ಕ್ಷೇತ್ರಗಳಲ್ಲೂ ಇಂದು ಕೋರ್ಟು ಕಛೇರಿ ಎಂದು ಜನ ಅಲೆಯುತ್ತಿದ್ದಾರೆ. ಇದರಿಂದ ಅವರ ಮನಸ್ಸು ಸ್ಥಿತಿಮಿತಿಯಿಲ್ಲದೆ ಮನುಷ್ಯನ ಮನಸ್ಸು ಈ ಎಲ್ಲ ಜಂಜಾಟಗಳಿಂದ ಬೇಸತ್ತು ಜೀವನದಲ್ಲಿ ಜಿಗುಪ್ಸೆಗೊಂಡು ಎಷ್ಟೋ ಹಳ್ಳಿಗಳಲ್ಲಿ ಇಡೀ ಕುಟುಂಬ ಸಮೇತವಾಗಿ ಆತ್ಮಹತ್ಯೆಗಳಿಗೆ ಶರಣಾಗಿವೆ.

ಗ್ರಾಮದಲ್ಲಿ ಹಿಂದೆ ಇರುತ್ತಿದ್ದಂತಹ ಬಯಲಾಟ, ನಾಟಕ, ಜೋಗತಿಮನೆ ಗರಡಿಮನೆ, ಲಾವಣಿ, ಹಾಡು ಜನಪದ ಕಲೆಗಳು ಗ್ರಾಮವನ್ನು ತೊರೆದು ಮರೆಯಲ್ಲಿ ಅಡಗಿಕುಳಿತಿವೆ, ಅವುಗಳ ಸ್ಥಾನದಲ್ಲಿ ಇಂದು ಟಿ.ವಿ., ಸಿನೆಮಾ, ಕಂಪ್ಯೂಟರ್, ಆರ್ಕೆಸ್ಟ್ರಾ, ಮುಂತಾದ ಆಧುನಿಕ ಸಂವಹನ ಮಾಧ್ಯಮಗಳು ಅವುಗಳ ಸ್ಥಾನವನ್ನು ಆಕ್ರಮಿಸಿಕೊಂಡಿವೆ ಜನ ಈ ಮಾಧ್ಯಮಗಳಿಗೆ ಮರುಳಾಗಿ ಅದರಂತೆ ತಾವೂ ಇರಬೇಕೆಂದು ಬಯಸಿ ತಮ್ಮ ಮೂಲವನ್ನೇ ಮರೆಯುತ್ತಿದ್ದಾರೆ.

ಕ್ಷೇತ್ರದಿಂದ ಆಯ್ಕೆಯಾದಂತಹ ಶಾಸಕ ಮಹಿಮರು ಚುನಾವಣೆ ಸಂದರ್ಭದಲ್ಲಿ ಮಾತ್ರ ಜನಗಳ ಮನೆ ಮನೆಗಳಿಗೆ ಹೋಗಿ ಜನರ ಕೈ ಹಿಡಿದು ಅವರಿಗೆ ಇಲ್ಲ ಸಲ್ಲದ

ಆಸೆ ಆಕಾಂಕ್ಷೆಗಳನ್ನು ಹುಟ್ಟಿಸಿ ಅವರಿಂದ ಮತಹಾಕಿಸಿಕೊಂಡು ಚುನಾವಣೆಯಲ್ಲಿ ಗೆದ್ದು ನಂತರ ಊರಿನ ಜನತೆಗೆ ಮುಖ ತೋರಿಸದೆ ರಾಜಧಾನಿಗಳಲ್ಲಿ, ಸಭೆಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಾ ತಿರುಗಾಡಿಕೊಂಡಿರುತ್ತಾರೆ. ಸಾಮಾನ್ಯ ಒಬ್ಬ ಮನುಷ್ಯ ಆ ವ್ಯಕ್ತಿಯನ್ನು ತನ್ನ ಮುತ್ತಿನಂತ ಮತದಿಂದ ಮತಚಲಾಯಿಸಿ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿ ಕಳಿಸಿರುತ್ತಾರೆ. ಆ ಸಾಮಾನ್ಯ ವ್ಯಕ್ತಿಗೆ ಶಾಸಕನ ಮುಖ ನೋಡಲು ಅವರು ಸಿಗುವುದಿಲ್ಲ. ಮತಹಾಕಿದಂತಹ ಮನುಷ್ಯನನ್ನು ಅಸಹ್ಯವೆನ್ನುವಂತೆ, ತುಚ್ಚಮಟ್ಟದಲ್ಲಿ ಕಾಣುವಂತಹ ದುಷ್ಟ ರಾಜಕಾರಣಿಗಳಿರುವ ತನಕ ಕೇವಲ ಹಳ್ಳಿಗಳಷ್ಟೆ ಅಲ್ಲ ಇಡೀ ರಾಷ್ಟ್ರವೇ ಉದ್ದಾರವಾಗಲಾರದು ಅಷ್ಟೇ ಅಲ್ಲ ಇಂತಹ ಪ್ರತಿನಿಧಿಗಳನ್ನು ಆಯ್ಕೆ ಮಾಡುವಂತಹ ಕೆಲಸಕ್ಕೆ ಮತದಾರರು ಸಹ ಹೋಗಬಾರದು. ಯೋಗ್ಯತೆಗೆ ತಕ್ಕ ಹಾಗೆ ಯಾವುದೇ ಆಸೆ ಆಮಿಷಗಳಿಗೆ ತಲೆಬಾಗದೆ ತಮ್ಮ ದಿಟ್ಟ ನಿಲುವನ್ನು ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡುವಲ್ಲಿ ತೋರಿದಾಗ ಸಾಮಾನ್ಯ ಜನರ ಮತಕ್ಕೆ ಉತ್ತಮ ಮೌಲ್ಯ ಸಿಗುತ್ತದೆ. ಈ ಮೌಲ್ಯದಿಂದ ಊರಿನ, ನಾಡಿನ, ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗುವಂತಹ ಸನ್ನಿವೇಶ ಕಂಡುಬರುತ್ತದೆ. ಇಷ್ಟೆಲ್ಲ ಆಗುಹೋಗುಗಳನ್ನ ಜ್ವಲಂತ ಸ್ಥಿತಿಗಳಿಂದ ಕೂಡಿದ ಗ್ರಾಮ ಇಂದು ಯಾವ ಮಟ್ಟದಲ್ಲಿ ಸುಧಾರಣೆಯ ಸ್ಥಿತಿಯಲ್ಲಿದೆ. ತಮ್ಮ ಹೊಲಮನೆ ಗದ್ದೆ–ತೋಟ ಹೀಗೆ ಹತ್ತು ಹಲವು ಕೂಪಗಳ ಜೊತೆಯಲ್ಲಿ ಜಾತಿ–ಪಂಗಡ, ಒಳಜಾತಿ, ಆ ಪಕ್ಷ–ಈ ಪಕ್ಷ ಎಂಬ ಭಿನ್ನವಾದ ಭೇದಗಳಿಂದ ಕೂಡಿದ್ದು ಇವು ಈ ಮೃತ್ಯಕೂಪಗಳಾಗಿ ಪರಿವರ್ತನೆಗೊಳ್ಳುತ್ತಿದೆ. ಒಬ್ಬವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಅವನು ತನ್ನಂತಯೇ ಅವನಲ್ಲಿಯೂ ಸರಿ ಅನೇಕ ಕನಸುಗಳು ಭಾವನೆಗಳು ಇರುತ್ತವೆ ಎನ್ನುವುದನ್ನು ಅರಿಯುವುದೇ ಇಂದು ಕಷ್ಟಕರವಾಗಿದೆ ಬದಲಿಗೆ ಇನ್ನೊಬ್ಬನನ್ನ ನಾಶಮಾಡಿಯಾದರೂ ಸಹ ನಾನೊಬ್ಬನೇ ಮುಂದುವರಿಯಬೇಕೆಂಬ ಮನುಷ್ಯನ ದುರ್ಬುದ್ಧಿ ಪ್ರಾಣಿಗಳಿಗಿಂತಲೂ ಹೀನಾಯವಾದ ಬದುಕು ಸಾಗಿಸುತ್ತಿದ್ದಾರೆ. ಭಾವನೆಗಳಿಗೆ ಬೆಲೆಯೇ ಇಲ್ಲವಾಗಿ ಕೇವಲ ದೌರ್ಜನ್ಯ ಮನಸ್ಥಿತಿಯ ಮನುಷ್ಯರೇ ಪ್ರಪಂಚದಲ್ಲಿ ಹೆಚ್ಚಾಗುತ್ತಿದ್ದಾರೆ. ಮನುಷ್ಯನ ಆಸೆ–ಗಗನಕ್ಕಿಂತಲೂ ಎತ್ತರಕ್ಕೆ ಏರಿವೆ. ಇವುಗಳೆಲ್ಲವುಗಳಿಂದ ಜನರ ಮನಸ್ಸು ರೋಸಿಹೋಗಿದೆ. ಇದೇ ನಿಜವಾದಲ್ಲಿ ಮನುಷ್ಯ ಮತ್ತೊಮ್ಮೆ ಕಾಡಿನ ಸಂಸ್ಕೃತಿಯ ಮೂಕ ಪ್ರಾಣಿಗಳಂತೆ ಬದುಕಬೇಕಾಗಿ ಬರಬಹುದೇನೋ ಕಾದು ನೋಡಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಗ್ರಾಮೀಣ, ಡಾ.ಎಂ.ಚಿದಾನಂದ ಮೂರ್ತಿ, ಬಾಪ್ಕೊ ಪ್ರಕಾಶನ, ಬೆಂಗಳೂರು ೧೯೭೭

೨. ನಮ್ಮ ಗ್ರಾಮಗಳು ಅಂದು-ಇಂದು, ಡಾ.ಚಿನ್ನಸ್ವಾಮಿಸೋಸಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ-೮೦. ೨೦೦೪

೩. ನಮ್ಮ ಗ್ರಾಮಗಳು ಅಂದು-ಇಂದು, ಡಾ.ಚಿನ್ನಸ್ವಾಮಿಸೋಸಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ-೧೦. ೨೦೦೪

೪. ಕೃಪೆ ಪಟ್ಟಣ ಪಂಚಾಯ್ತಿ, ಮೊಳಕಾಲ್ಮುರು

* ವಸಂತ ಮಾಸ್ತರ, ನಿವೃತ್ತ ಶಿಕ್ಷಕರು
* ಪಾರ್ಥಸಾರಥಿ- ನಿವೃತ್ತ ಶಿಕ್ಷಕರು
* ಕೆ.ಜಿ.ವೆಂಕಟೇಶ, ಪತ್ರಕರ್ತರು
* ನಿಂಗಪ್ಪ, ವ್ಯವಸಾಯಗಾರ
* ಕೃಷ್ಣಪ್ಪ, ರೇಷ್ಮೆ ನೇಯ್ಗೆಕಾರರು
* ಪೂಜಾರಿ ಪಾಲಯ್ಯ ವ್ಯವಸಾಯಗಾರರು
* ಶ್ರೀನಿವಾಸಮೂರ್ತಿ ಸಮಾಜಸೇವಕರು

ಅಧ್ಯಾಯ-ನಾಲ್ಕು

ಮೊಳಕಾಲ್ಮುರು ಗ್ರಾಮದ ಕಲೆ, ಆಚರಣೆ, ಸಂಪ್ರದಾಯ, ಹಬ್ಬಹರಿದಿನಗಳು, ವಿದಿ, ಸಂಸ್ಕಾರಗಳು

ಅಧ್ಯಾಯ–ನಾಲ್ಕು

ಮೊಳಕಾಲ್ಮುರು ಗ್ರಾಮದ ಕಲೆ, ಆಚರಣೆ, ಸಂಪ್ರದಾಯ, ಹಬ್ಬಹರಿದಿನಗಳು, ವಿದಿ, ಸಂಸ್ಕಾರಗಳು

ಆದಿ ಮಾನವನ ಕಾಲದಿಂದಲೂ ಮನುಷ್ಯ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾನೆ. ತನ್ನ ಜೀವನ ಪದ್ದತಿಯಲ್ಲಿ, ಆಹಾರ ಪದ್ದತಿಯಲ್ಲಿ, ಉಡುಪುಗಳ ಪದ್ದತಿಯಲ್ಲಿ, ಕೌಟುಂಬಿಕ ಪದ್ದತಿಯಲ್ಲಿ, ಕೃಷಿ–ಕೃಷಿಯೇತರ ಚಟುವಟಿಕೆಗಳು, ಕಲೆಗಳು, ಸಂಪ್ರದಾಯ, ಆಚರಣೆಗಳು, ನಂಬಿಕೆಗಳು, ಧಾರ್ಮಿಕ ವಿಧಿವಿಧಾನಗಳು, ಹೀಗೆ ಮಾನವ ತನ್ನ ಹುಟ್ಟಿನಿಂದ ಸಾವಿನವರೆಗೂ ತನ್ನದೇ ಆದ ವಿಶೇಷವಾದ ಸಂಸ್ಕೃತಿಯನ್ನು ಅಳವಡಿಸಿಕೊಂಡು ತಾನೂ ಒಬ್ಬ ಸಂಸ್ಕೃತಿ ನಿಷ್ಠವಾದ ಬದುಕನ್ನು ಸಾಗಿಸುತ್ತಿದ್ದೇನೆ ಎಂಬುದನ್ನು ತೋರಿಸಿಕೊಡಲು ಅವನು ನಡೆಸಿಕೊಂಡು ಬಂದಿರುವಂತಹ, ರೂಡಿಸಿಕೊಂಡು ಬಂದಿರುವಂತಹ ನಡೆ–ನುಡಿಗಳೇ ಸಾಕ್ಷಿಯಾಗಿದೆ.

ಈ ಎಲ್ಲಾ ಪದ್ದತಿ–ಆಚರಣೆಗಳು ತಾನೇ ಸ್ವತಃ ಕಲಿತದ್ದೆ ಅಂದರೆ ಅಲ್ಲಿ ಉತ್ತರ ಇಲ್ಲವೆಂಬುದಾಗಿ ತಿಳಿದುಬರುತ್ತದೆ. ಏಕೆಂದರೆ ಮಾನವಮೊದಲು ಸೀಮಿತ ಚೌಕಟ್ಟಿನಲ್ಲೇ ಬದುಕುತ್ತಿದು ತನ್ನ ಸುತ್ತ ಮುತ್ತಲಿನ ಪರಿಸರದಲ್ಲಿ ಜರುಗುತ್ತಿರುವಂತಹ ಸಾಮಾಜಿಕ ಚಲನೆಗಳನ್ನು ಕಂಡು ತಾನೂ ಸಹ ಅದರಂತೆ ಒಂದೊಂದಾಗಿ ತನ್ನ ಜೀವನ ಪದ್ದತಿಯಲ್ಲಿ ಬದಲಾವಣೆ ಅಂಶಗಳನ್ನು ಅಳವಡಿಸಿಕೊಂಡು ಇದೇ ತನ್ನ ಜೀವನಕ್ಕೆ ಒಂದು ವಜ್ರಕಾಯವಾದ ಬುನಾದಿಯನ್ನು ಹಾಕಿಕೊಂಡ, ಈ ಬುನಾದಿಯಿಂದ ಮೇಲೆದ್ದ ಸಂಸ್ಕೃತಿ ಎಂಬ ಮನೆ ಬಹು ಎತ್ತರಕ್ಕೆ ಬೆಳೆದು ಇಂದು ಇಡೀ ಮಾನವ ಕುಲಕ್ಕೆ ಕಳಸ ಪ್ರಾಯವಂತಾಗಿದ್ದಾನೆ.

[illegible]

[illegible]

[illegible]

[illegible]

ನಿತ್ಯ ಹೊಲಗದ್ದೆಗಳಲ್ಲಿ, ತೋಟಮನೆಗಳಲ್ಲಿ ದುಡಿದು ಬರುತ್ತಿದ್ದ ವ್ಯಕ್ತಿಗೆ ಮನೆಗೆ ಬಂದ ನಂತರ ಬೇಸರವಾಗುತ್ತಿತ್ತು. ಅದಕ್ಕೆ ಅವನು ಮೊದಲು ತನ್ನ ಮನೆ ಮಂದಿಯಷ್ಟನ್ನೆ ಕೂರಿಸಿಕೊಂಡು ಅಂದಿನ ದಿನದಲ್ಲಿ ನಡೆದಂತಹ ಕೆಲವು ರೋಚಕ ಕ್ಷಣಗಳನ್ನು ಮನೆಮಂದಿಗೆ ಹೇಳುತ್ತಾ ಅವರೊಂದಿಗೆ ಆ ಸಂತಸ ಕ್ಷಣಗಳನ್ನ ಹಂಚಿಕೊಳ್ಳುತ್ತಿದ್ದ, ಕತೆಗಳ ಮೂಲಕ, ಹಾಡು-ಲಾವಣಿಗಳ ಮೂಲಕ, ಕುಣಿತಗಳ ಮುಖಾಂತರ ಕೇವಲ ಕುಟುಂಬವಷ್ಟೇ ಹಾಡಿ-ಕುಣಿದು ಸಂತಸ ಪಡುತ್ತಿದ್ದರು. ಇದನ್ನು ನೋಡಿದಂತಹ ನೆರೆಹೊರೆಯ ಜನತೆ ತಾವು ಸಹ ಅವನ ಜೊತೆಯಲ್ಲಿ ಬಂದು ಸೇರಿಕೊಂಡು ಅವನ ಸಂತಸವನ್ನು ಅಥವಾ ಅವನು ಹೇಳಿದಂತಹ ರೋಚಕ ಸಂಗತಿಗಳನ್ನು ತಾವೂ ಕೇಳಿ-ತಿಳಿದು ಕುಣಿದು ನಲಿದರು ಹಾಗೆಯೇ ಒಬ್ಬೊಬರು ಬಂದು ಅವರವರ ಅನುಭವಿಸಿದಂತಹ ಅನುಭವಗಳನ್ನು ಅಲ್ಲಿ ನೆರೆದಂತಹ ಎಲ್ಲರ ಮುಂದೆ ಮನಸ್ಸಿನ ತುಮಲಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರ ಮುಖಾಂತರ ಸಾಮೂಹಿಕ ಸಂತಸವನ್ನು ಅನುಭವಿಸುತ್ತಾ ಬಂದು. ಇದೇ ಮುಂದೆ ಅವರು ಅನುಭವಿಸಿ ಹಂಚಿಕೊಂಡ ಸಂಗತಿಗಳು ಮುಂದೆ ಕಲೆಗಳಾಗಿ ಮಾರ್ಪಾಡಾಯಿತು. ಆ ಕಲೆಗಳು ಕಾಲಾನಂತರದಲ್ಲಿ ಹೆಮ್ಮರವಾಗಿ ಬೆಳೆದು ಎಲ್ಲಾ ಜನರು ಎಲ್ಲಾ ರೀತಿಯಿಂದಲೂ ತಮ್ಮ ಅನುಭವದಸಾರವನ್ನು ಅಲ್ಲಿಸುರಿದು ಐಕ್ಯತೆಯಲ್ಲಿ ಆನಂದವನ್ನು ಕಂಡುಕೊಂಡರು.

ಇಂತಹ ಬಹಳ ಸುಧೀರ್ಘವಾದ ಬಹು ವಿಶಿಷ್ಟತೆಯಿಂದ ಕೂಡಿದ ಚರಿತ್ರೆಯಿಂದ ಪ್ರಾರಂಭವಾದ ಕಲೆ ಎಂಬ ಸಂಸ್ಕೃತಿ ಜನತೆ ಬೆಳೆದಂತೆಲ್ಲಾ ಆ ಕಲೆಯೂ ಸಹ ಬೆಳೆಯುತ್ತಾ ಬಂತು. ಜನರೂ ಸಹ ತಮ್ಮ ನಿತ್ಯ ಬದುಕಿನ ಜೊತೆ ಕಲೆಗಳನ್ನು ಸಹ ಅವರ ಜೀವನದ ಒಂದು ಭಾಗವೆಂಬಂತೆ ಕಲೆಯನ್ನು ಪೋಷಿಸಿಕೊಂಡು ಬೆಳೆಸಿ, ಉಳಿಸಿಕೊಂಡು ಬಂದು ಕಲೆಯ ಭವ್ಯತೆಯನ್ನು ಇಡೀ ಪ್ರಪಂಚಕ್ಕೆ ಸಾರಿದರು. ಹೀಗೆ ತನ್ನ ರೂಪವನ್ನು ತೋರಿಸುತ್ತಾ ಬಂದ ಕಲೆಗಳು ಮನುಷ್ಯ ಆ ಕಲೆಗಳನ್ನು ಕರಗತ ಮಾಡಿಕೊಂಡು ವ್ಯಕ್ತಿಯ ಜೊತೆಗೆ ಕಲೆಗೂ ವಿಶೇಷ ಗೌರವ ಸಿಗತೊಡಗಿತು.

ಹೀಗೆ ತನ್ನ ಪ್ರಾರಂಭವನ್ನು ಮಾಡಿದ ಕಲೆ ಜನರಿಂದಲೇ ಹುಟ್ಟಿ ಜನರ ಮಧ್ಯದಲ್ಲೇ ಬೆಳೆದು ಜನಪ್ರಿಯವಾಗಿವೆ. ಜನಪದರು ಪೋಷಿಸಿಕೊಂಡು ಬಂದ ಕಲೆಗಳು ನಾಗರೀಕತೆ ತಲೆ ದೂರಿದಂತೆಲ್ಲಾ ತನ್ನ ಸ್ವರೂಪಗಳಲ್ಲಿ ಬದಲಾವಣೆಯಾಗುತ್ತಬಂದವು. ಇನ್ನಷ್ಟು ವೈವಿಧ್ಯತೆಯಿಂದ ಪ್ರದರ್ಶನವಾಗತೊಡಗಿದವು. ಕೇವಲ ವ್ಯಕ್ತಿಗತ/ಕೌಟಿಂಬಿಕ ಅಥವಾ ಕುಟುಂಬ ಸಂತೋಷಕ್ಕಾಗಿ ಇದ್ದಂತಹ ಕಲೆಗಳು ಮುಂದೆ ತನ್ನ ಹಾದಿಯನ್ನು ಇನ್ನಷ್ಟು ವಿಸ್ತೃತ ಮಾಡಿಕೊಂಡು ಇತರರಿಗೂ ಸಂತೋಷವನ್ನುಂಟುಮಾಡತೊಡಗಿದವು. ಒಂದು

ರೀತಿಯ ಮನುಷ್ಯನನ್ನು ಸಂತೋಷವಾಗಿಡಲು ಬಳಸುವಂತಹ ಸಾಧನಗಳಾಗಿ ಮಾರ್ಪಾಟು ಗೊಂಡವು. ಮೊದಮೊದಲು ಸ್ವಚ್ಛಂದವಾಗಿ ಬೆಳೆದು ಬಂದಂತಹ ಕಲೆಗಳು ಕ್ರಮೇಣ ಒಂದೊಂದು ಕಲೆಗಳಿಗೂ ಅವುಗಳದೇ ಆದ ನಿರ್ದಿಷ್ಟ ರೂಪದ ನಿಯಮಚೌಕಟ್ಟನ್ನು ಹಾಕಿಕೊಂಡು ಆ ಚೌಕಟ್ಟಿನಲ್ಲೆ ಕಲೆಗಳ ಪ್ರದರ್ಶನಗೊಳ್ಳತೊಡಗಿದವು. ತನ್ನ ಆಕಾರ, ಗಾತ್ರ, ಸ್ವರೂಪಗಳಲ್ಲಿ ಪ್ರೌಢತೆಯನ್ನು ಸಾಧಿಸಿದವು.

ಈ ಪರಂಪರೆಯ ಹಾದಿಯಲ್ಲೆ ಮೊಳಕಾಲ್ಮೂರು ಗ್ರಾಮದಲ್ಲಿಯೂ ಸಹ ದಶಕಗಳ ಹಿಂದೆ ಕಲೆಗೆ ಜನರು ಹೆಚ್ಚು ಮಹತ್ವ ನೀಡುತ್ತಿದ್ದು ಊರಿನ ಜನತೆ ಪರಸ್ಪರ ಒಂದಾಗಿ ಕಲಾ ಪ್ರದರ್ಶನಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದುಂಟು ನಾಟಕ, ಬಯಲಾಟ, ಕೋಲಾಟ, ಡೊಳ್ಳುಕುಣಿತ, ಹಗಲುವೇಷ, ಜೋಗಯ್ಯನಪದ, ದಾಸರಾಟ, ಮುಂತಾದ ಕಲಾ ಪ್ರದರ್ಶನಗಳು ಅಂದು ವರ್ಷದುದ್ದಕ್ಕೂ ಒಂದಿಲ್ಲೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡು ಪ್ರದರ್ಶನ ನಡೆಯುತ್ತಿದ್ದವು. ಭಾರತೀಯ ಪಂಚಾಂಗದ ಪ್ರಕಾರ ಯುಗಾದಿ ಹಬ್ಬ ಭಾರತೀಯರಿಗೆ ಹೊಸ ದಿನ, ನವ ವಸಂತಋತುವಿನ ಕೋಗಿಲೆ ನಾದ ಎಲ್ಲೆಲ್ಲೊ ಕಿವಿಗಿಂಪು ನೀಡುತ್ತಿದ್ದು ಈ ಇಂಪಿನ ಸ್ವರವೇ ಇದರ ಜೀವನದ ಮುಂಜಾನೆಯ ಸುಪ್ರಭಾತವೆಂಬಂತೆ ನಿತ್ಯ ಚಟುವಟಿಕೆಗಳನ್ನು ಪ್ರಾರಂಭಿಸುತ್ತಿದ್ದ ಕಾಲದಲ್ಲಿ ಹಬ್ಬ ಹರಿದಿನಗಳಲ್ಲಿ, ಜಾತ್ರಾಮಹೋತ್ಸವಗಳಲ್ಲಿ ಸುಗ್ಗಿ ಮುಗಿದನಂತರದ ಬಿಡುವಿನ ಸಮಯದಲ್ಲಿ ಮತ್ತೆ ಕೆಲವು ವಿಶೇಷ ಸಂದರ್ಭಗಳಲ್ಲಿ ಈ ರೀತಿಯ ಈ ಪ್ರದರ್ಶನಗಳು ಸಹಜವಾಗಿ ಪ್ರದರ್ಶನಗೊಳ್ಳುತ್ತಿದ್ದವು. ಇದಕ್ಕೆ ಊರಿನ ಜನತೆ ತಮ್ಮ ತನುಮನದಿಂದ ತುಂಬು ಹೃದಯದಿಂದ ಬಂದು ವೀಕ್ಷಿಸುತ್ತಿದ್ದ ಕಾಲವದು.

ಆ ಪರಂಪರೆ ಇಂದು ವರ್ತಮಾನದ ದಿನಗಳಲ್ಲಿ ನಾಶದ ಅಂಚಿನಲ್ಲಿದೆ ಆಧುನಿಕ ಯುಗದ ಹೊಸದಿನಗಳ ಹೊಸ್ತಿಲಲ್ಲಿರುವ ಇಂದಿನ ಜನತೆಗೆ ಕಲೆಗಳ ಬಗೆಗಿನ ಆಸಕ್ತಿ ಸಂಪೂರ್ಣಕಡಿಮೆಯಾಗತೊಡಗಿದೆ. ಜನರು ಬದಲಾವಣೆಯನ್ನು ಬಯಸುತ್ತಿದ್ದು ಹೊಸತನಕ್ಕೆ ಹೊಂದುವಂತೆ ಕಲಾ ಪ್ರದರ್ಶನಗಳ ಸ್ಥಾನವನ್ನು ಸಿನಿಮಾ ಮಂದಿರಗಳು ಆಕ್ರಮಿಸಿಕೊಂಡು ಜನರನ್ನು ತನ್ನ ವರ್ಣರಂಜಿತ ಗರ್ಭದೊಳಗೆ ಗರ್ಭೀಕರಿಸಿಕೊಂಡಿವೆ ಜನತೆಯೂ ಸಹ ಈ ಗರ್ಭದಿಂದ ಹೊರ ಬರಲು ಇಷ್ಟ ಪಡುತ್ತಿಲ್ಲ. ನಾಟಕ, ಬಯಲಾಟ, ಕುಣಿತ ಮತ್ತಿತರ ಕಲೆಗಳಲ್ಲಿ ನಮ್ಮ ಮನೆಯ ಜನರೇ ಭಾಗವಹಿಸುತ್ತಿದ್ದು ಅವರನ್ನು ಒಬ್ಬ ಕಲಾ ಪ್ರದರ್ಶನಕಾರ ಅಥವಾ ಕಲಾವಿದ ಎಂಬ ಭಾವನೆಯಿಂದ ನೋಡುವುದಿಲ್ಲ. ದಿನಬೆಳಗಾದರೆ ಸಾಮಾನ್ಯರಂತಿರುವ ಜನ ಪ್ರದರ್ಶನದ ದಿನದಂದು ಮಾತ್ರ ಸ್ವಲ್ಪ ಬಣ್ಣ ಹಚ್ಚಿಕೊಂಡು ಬಣ್ಣವಾಗಿ ಕಾಣುತ್ತಿದ್ದಾರೆ ಎಂಬ ಅಲ್ಪಮಟ್ಟದ ಮನೋಭಾವನೆ ಅವರಲ್ಲಿ ಮೂಡಿ ಬರುತ್ತಿದೆ, ಅದೇ ಸಿನೆಮಾ

ಮಂದಿರಗಳಲ್ಲಿ ನಾವು ನೋಡಿರದ ಜನತೆ, ಅಲ್ಲಿನ ವೈಭೋಗ, ಬರುವಂತಹ ಪಾತ್ರಗಳು ಇವೆಲ್ಲ ಅವರಿಗೆ ಹೊಸತನವನ್ನು ಮೂಡಿಸುತ್ತಿದ್ದು ಪ್ರತಿಯೊಬ್ಬರೂ ಇಂತಹದ್ದನ್ನೇ ಆಸೆಪಡುತ್ತಿದ್ದಾರೆ. ಪರದೆ ಮೇಲಿನ ಚಿತ್ರಕ್ಕಾಗಿ ಹಂಬಲಿಸುತ್ತಿದ್ದಾರೆ. ಪರದೆ ಮೇಲೆ ಕಾಣುವ ಚಿತ್ರಗಳಂತೆ ನಾವು ಆ ರೀತಿಯಲ್ಲಿಯೇ ಜೀವನ ನಡೆಸಬೇಕು ಎಂಬ ಅತಿಯಾದ ಆಸೆಗಳಿಂದ ಜನತೆ ಇಂದು ಕನಲಿ ಹೋಗುತ್ತಿದ್ದಾರೆ. ಇದೆಲ್ಲಾ ಜನರ ಮೇಲೆ ಆಧುನಿಕತೆಯ ಪ್ರಭಾವ ಎಷ್ಟರಮಟ್ಟಿಗೆ ಇದೆ ಎಂಬುದನ್ನು ತೋರಿಸಿಕೊಡುತ್ತದೆ. ಈ ಕಲೆಗಳಲ್ಲಿಯೂ ಸಹ ಪ್ರಾದೇಶಿಕ ಭಿನ್ನತೆಗಳು ಹೆಚ್ಚು ಕಂಡುಬರುತ್ತಿರುವುದು ಒಂದು ವಿಶೇಷ ಸಂಗತಿಯಾಗಿದೆ.

ಪಾಶ್ಚಾತ್ಯೀಕರಣ, ಕೈಗಾರೀಕರಣ, ಜಾಗತೀಕರಣಗಳ ಪ್ರಭಾವದಿಂದ ಇಂದು ಕಲೆಗಳಿಗೆ ನೆಲೆಯಿಲ್ಲದಂತಾಗಿ ವಿನಾಶದ ಅಂಚಿನಲ್ಲಿರುವಂತಹ ಈ ಸಂದರ್ಭದಲ್ಲಿ ಮೊಳಕಾಲ್ಮೂರು ಗ್ರಾಮ ಪರಿಸರದಲ್ಲಿ ಇಂದು ಶಿಷ್ಟ ಸಂಸ್ಕೃತಿಯ ಕಲೆಗಳ ಅಬ್ಬರ ಹೆಚ್ಚಾಗತೊಡಗಿದೆ. ಬಯಲಾಟ, ಪೌರಾಣಿಕ ನಾಟಕಗಳ ಸ್ಥಾನದೆಲ್ಲಾ ಇಂದು ಸಾಮಾಜಿಕ ನಾಟಕಗಳು ತಲೆ ಎತ್ತಿವೆ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ವಿಶೇಷವಾಗಿ ಯುಗಾದಿ ಮತ್ತು ದಸರಾ ಹಾಗೂ ಮತ್ತಿತರ ವಿಶೇಷ ಸಂದರ್ಭಗಳಲ್ಲಿ ಈ ಸಾಮಾಜಿಕ ಶಿಷ್ಟ ಸಂಸ್ಕೃತಿಯ ನಾಟಕ ಪ್ರದರ್ಶನ ಕಂಡುಬರುತ್ತಿರುವುದು ಇಲ್ಲಿನ ಜನತೆ ಕಲೆಯ ಮೇಲಿರುವ ಆರಾಧನಾಭಾವವನ್ನು ಸೂಚಿಸುತ್ತಿದ್ದೆ. ಈಗಲು ಮೊಳಕಾಲ್ಮುರು ಪರಿಸರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೆಲವೊಮ್ಮೆ ವರ್ಷಕ್ಕೆ ಒಂದೆರೆಡು ಸಂದರ್ಭದಲ್ಲಾದರೂ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ಈ ಪ್ರದರ್ಶನವನ್ನು ಆ ಹಳ್ಳಿಯಲ್ಲಿನ ಯುವಕರು ತಾವೇ ಒಂದು ಗುಂಪನ್ನು ಕಟ್ಟಿಕೊಂಡು ಯಾವುದಾದರೂ ಸಾಮಾಜಿಕ ಕತೆಯನ್ನಾಧರಿಸಿದ ನಾಟಕವನ್ನು ಪ್ರದರ್ಶಿಸುತ್ತಿದ್ದಾರೆ. ಇದು ವ್ಯಾವಹಾರಿಕ ಪ್ರದರ್ಶನವೆಂದರೂ ತಪ್ಪಾಗಲಾರದು. ಏಕೆಂದರೆ ಇದರ ಹಿಂದಿನ ಉದ್ದೇಶ ಹಣ ಮಾಡುವುದೇ ಆಗಿರುತ್ತದೆ, ನಾಟಕ ವೀಕ್ಷಿಸಲು ಬರುವಂತಹ ಪ್ರೇಕ್ಷಕರು ಟಿಕೇಟ್ಟನ್ನು ತೆಗೆದುಕೊಂಡು ನಾಟಕ ರಂಗದೊಳಗೆ ಪ್ರವೇಶ ಪಡೆಯಬೇಕು. ಈ ಹಿಂದೆಯಾದರೆ ಒಂದು ಊರಲ್ಲಿ ನಾಟಕ ನಡೆಯುತ್ತದೆ ಎಂದರೆ ಅಲ್ಲಿ ಎಲ್ಲರಿಗೂ ಮುಕ್ತ ಅವಕಾಶವಿದ್ದು ಎಲ್ಲಾ ವರ್ಗದ ಜನತೆ ಹಾಗೂ ಅಕ್ಕಪಕ್ಕದ ಹಳ್ಳಿಗಳ ಜನರೂ ಸಹ ನಾಟಕಗಳನ್ನು ನೋಡಲು ಬರುತ್ತಿದ್ದರು, ಆದರೆ ಇಂದು ಕೇವಲ ಸೀಮಿತ ಚೌಕಟ್ಟಿನಲ್ಲಿ ಸೀಮಿತ ಆಸಕ್ತಿ ಉಳ್ಳವರು ಮಾತ್ರ ನಾಟಕ ನೋಡಲು ಬರುತ್ತಾರೆ, ಅವರಿಗೆ ಮನೋರಂಜನೆ ಬೇಕೆ ಹೊರತು ನಾಟಕದಲ್ಲಿನ ಉದ್ದೇಶ, ಸಾಮಾಜಿಕ ಕಳಕಳಿ ಬೇಕಾಗಲ್ಲ... ನಾಟಕದಲ್ಲಿ ಮಾಡುತ್ತಿರುವ ಹೆಣ್ಣು ಪಾತ್ರದವರ ಒನಪು, ಒಯ್ಯಾರಗಳನ್ನು ನೋಡಿ ಆನಂದಪಡುವಂತಹ ಉದ್ದೇಶ ಇಟ್ಟಿಕೊಂಡು ಕಿಚಾಯಿಸುವಂತಹ.

ಮಂಡರ ಗುಂಪೇ ಜಾಸ್ತಿ ಆಗಿರುತ್ತದೆ. ಈ ರೀತಿಯ ದುರ್ಬುದ್ಧಿ ದುರಾಲೋಚನೆಗಳು ಜನರ ಮನದಾಳದಲ್ಲಿ ತುಂಬಿತುಳುಕಾಡುತ್ತಿವೆ ಇಂತಹ ಪರಿಸ್ಥಿತಿಯಲ್ಲಿ ನಾಟಕ ಪ್ರದರ್ಶನಗಳಾದರೂ ಎಷ್ಟರಮಟ್ಟಿಗೆ ಫಲ ಪ್ರಧವಾಗುತ್ತವೆ. ಎಂಬುವನನ್ನು ನಾವು ಕಲ್ಪನೆ ಮಾಡಿಕೊಳ್ಳಬೇಕಾಗಿದೆ.

ಹಬ್ಬ ಹರಿದಿನ, ಜಾತ್ರಾ ಉತ್ಸವಗಳಲ್ಲಿ ಕಲೆಗಳ ಆಧುನಿಕರೂಪವಾದ ಆರ್ಕೆಸ್ಟ್ರಾ (ಸಂಗೀತ ವಾದ್ಯವೃಂದ)ಗಳ ಹಾವಳಿ ಹೆಚ್ಚಾಗಿದೆ, ಊರಿನಲ್ಲಿ ಯಾವುದೇ ಕಾರ್ಯಕ್ರಮನಡೆದರೂ ಅಲ್ಲಿ ಈ ಸಂಗೀತವಾದ್ಯವೃಂದವೇ ಇರಬೇಕು. ಇಲ್ಲವಾದರೆ ಆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಜನತೆ ಒಂದೆಡೆ ಸೆರುವುದಿಲ್ಲ. ಇಂತಹ ಪರಿಸ್ಥಿತಿಗಳು ವರ್ತಮಾನದ ಸಂದರ್ಭದಲ್ಲಿ ಹಳ್ಳಿಗಳಲ್ಲಿಯೂ ಸಹ ಕಾಣಬಹುದಾಗಿದೆ. ಗ್ರಾಮದಲ್ಲಿ ಇಂದು ಯಾವುದೇ ಒಂದು ಸಭೆ ಸಮಾರಂಭಗಳಾಗಲಿ, ಗಣೇಶ ಹಬ್ಬ, ಮದುವೆ, ಸಮಾರಂಭಗಳಲ್ಲಿ ಈ ರೀತಿಯ ಆಧುನಿಕ ಕಲೆಗಳ ಅಬ್ಬರವನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ.

'ಜೀವನವೇ ಒಂದು ಕಲೆ' ಎಂಬುದನ್ನು ಮರೆತ ಜನ ಕಲೆಗೂ ಮಾನವನಿಗೂ ಇರುವ ಸಂಬಂಧ, ಉತ್ತಮ ಮನೋಭಾವನೆ ಇಂದುಮರೆಯಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಪ್ರಾಚೀನಕಾಲದ ಜಾನಪದ ಕಲೆಗಳಾಗಲಿ ಹಾಡು-ಲಾವಣಿಗಳಾಗಲಿ, ಹೆಣ್ಣುಮಕ್ಕಳ ಹಾಡುಗಳಾಗಲಿ, ಬೀಸುಹಾಡು, ಕುಟ್ಟುವ ಹಾಡು ಇವೆಲ್ಲ ಈ ಯಂತ್ರಗಳ ಆಗಮನದಿಂದಾಗಿ ನೋಡಲಿಕ್ಕೂ ಸಿಗದೇ ಇರುವಂತಹ ಸಂದರ್ಭ ಬಂದೊಂದಾಗಿದೆ ಕೆಲವೊಂದು ಕಲೆಗಳು ಸಮಾಜದಲ್ಲಿ ಉತ್ತಮ ಮನ್ನಣೆ ಪಡೆದರೂ ಅವುಗಳ ಪ್ರದರ್ಶನಗಳು ಮಾತ್ರ ಕೆಲವೇ ಸಂದರ್ಭಗಳಲ್ಲಿ ಮಾತ್ರ ಕಾಣಸಿಗುತ್ತವೆ. ಇದಕ್ಕೆ ಜನರಲ್ಲಿನ ರಸಾನುಭವದ ಕೊರತೆ, ಅಂದಾನುಕರಣೆಗಳೇ ಕಾರಣವಾಗಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿದಂತಹ ನೃತ್ಯಗಳು ಆಯಾ ದೇವತೆಯ ಹೆಸರಿನಲ್ಲಿ ನಿರ್ದಿಷ್ಠ ಕಾಲದಲ್ಲಿ ಸಂಪ್ರದಾಯಬದ್ದವಾಗಿ ನಡೆಯುತ್ತಿವೆ ಮನೋರಂಜನೆಯ ಹಿನ್ನಲೆಯಲ್ಲಿ ಹುಟ್ಟಿ ಲೌಕಿಕ ಕಲೆಯಾಗಿ ಬೆಳೆದುಬಂದ ಲೌಕಿಕ ನೃತ್ಯಗಳಿಗೆ ಇಂತಹ ಕಟ್ಟುಪಾಡುಗಳು ಅನ್ವಯಿಸುವುದಿಲ್ಲ ವರ್ಷ ಪೂರ್ತಿ ನಡೆಯುವ ಹಬ್ಬಹರಿದಿನಗಳು, ಜಾತ್ರ-ಉತ್ಸವಗಳ ಆಚರಣೆಗಳಲ್ಲಿ ಪ್ರದರ್ಶಸಿಲ್ಪಡುವ ಕಲೆಗಳು ಮತ್ತು ಆಯಾ ಕಾಲಕ್ಕೆ ಗೌರವಾನ್ವಿತರು ಕುಳಿತು ಚರ್ಚಿಸಿ ನಿರ್ಧರಿಸುತ್ತಿದ್ದು, ಮೂರುವರ್ಷಗಳಿಗೊಮ್ಮೆ, ಐದು ವರ್ಷಗಳಿಗೊಮ್ಮೆ, ಒಂಬತ್ತುವರ್ಷಗಳಿಗೊಮ್ಮೆ ನಡೆಯುವ ದೇವತಾ ಕಾರ್ಯಗಳ ಸಂದರ್ಭಗಳಲ್ಲಿಯೂ ಸಹ ಈ ಪದ್ದತಿಯನ್ನು ಅಳವಡಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಹಬ್ಬ ಹರಿದಿನ ಆಚರಣೆ ಸಂಪ್ರದಾಯಗಳು

ಒಂದು ಸಮಾಜವನ್ನು, ಸಮುದಾಯವನ್ನು ಒಂದು ಗೂಡಿಸುವ ಶಕ್ತಿ ಆ ಸಮಾಜ ರೂಡಿಸಿಕೊಂಡು ಬಂದಿರುವ ಸಂಪ್ರದಾಯ ಮತ್ತು ಆಚರಣೆಗಳು ಮಾಡುತ್ತವೆ. ಆಚರಣೆ

ಎಂದರೆ "ಒಂದು ನಿರ್ದಿಷ್ಠ ಕಾಲದಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಡೆಯುವಂತಹ ಕ್ರಿಯೆಯಾಗಿದೆ." ಇದು ಕೇವಲ ಒಬ್ಬ ವ್ಯಕ್ತಿಯಿಂದ ಸೃಷ್ಟಿಯಾದುದಲ್ಲ ಅದು ಒಂದು ಜನಾಂಗದ ಸಮಾಜದ ಜೀವನ ವಿಧಾನ. ಆ ಸಮಾಜದ ಅಂಗವಾಗಿ ಹುಟ್ಟಿಕೊಂಡಿರುತ್ತದೆ. ಇಂತಹ ಆಚರಣೆಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿ ಅವನ ಬದುಕನ್ನ ರೂಡಿಸುವ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುತ್ತದೆ.

ಒಂದು ಆಚರಣೆಯ ಬೆನ್ನೆಲುಬು ಎಂದರೆ ಅದು ನಂಬಿಕೆಯೆ. ಮನುಷ್ಯನಿಗೆ ದೇವರ ಮೇಲೆ ಮತ್ತು ಪ್ರಕೃತಿಯ ಮೇಲೆ ಅಪಾರ ನಂಬಿಕೆಯಿದೆ. ಯಾರು ಕೈಬಿಟ್ಟರೂ ದೇವರು ಕೈ ಬಿಡುವುದಿಲ್ಲ ಎಂಬ ಮಾತಿದೆ ಈ ದೇವರ ಮೇಲಿನ ನಂಬಿಕೆಯೇ ಅವನ ಆಚರಣೆ ಮಾಡಲು ತೊಡಗುವುದು. ಹೀಗೆ ಆಚರಣೆಗಳನ್ನು ಮಾಡುವುದರಿಂದ ಮನುಷ್ಯನಿಗೆ ಬಂದಂತಹ ಕಷ್ಟಗಳು ತೊಲಗಿ ಸುಖ-ಸಂತೋಷಗಳು ಪ್ರಾಪ್ತಿಯಾಗುತ್ತವೆ ಎಂಬುದು ಮನುಷ್ಯನ ಬಲವಾದ ನಂಬಿಕೆ, ಇದರಿಂದ ಮಾನಸಿಕ ನೆಮ್ಮದಿಯೂ ದೊರೆಯುತ್ತದೆ. ಈ ತೆರನಾದ ನಂಬಿಕೆ ಇದರಿಂದ ಮಾನಸಿಕ ನೆಮ್ಮದಿಯೂ ದೊರೆಯುತ್ತದೆ. ಈ ತೆರನಾದ ನಂಬಿಕೆ ಆಚರಣೆಗಳಿರುವುದರಿಂದಲೇ ಇಂದಿಗೂ ಸಂಪ್ರದಾಯ ಪದ್ದತಿಗಳು, ಹಬ್ಬ ಹರಿದಿನಗಳು ವಿಧಿಸಂಸ್ಕಾರಗಳು ಜೀವಂತವಾಗಿವೆ. ಭೌಗೋಳಿಕ ಮತ್ತು ಸಾಂಸ್ಕೃತಿಕ ವಾತಾವರಣದ ಹಿನ್ನಲೆಯಲ್ಲಿ ಕಾಲಕ್ಕೆ ತಕ್ಕಂತೆ ಈ ಆಚರಣೆಗಳು ಬೇರೆರೂಪವನ್ನು ಪಡೆಯುತ್ತವೆಯಾದರೂ ಅವು ನಾಶವಾಗುವುದಿಲ್ಲ. ನಂತರ ಆಂತರಿಕ ಮತ್ತು ಬಾಹ್ಯ ಪ್ರೇರಣೆಗಳು ಒಂದು ಸಮಾಜದ ಆಹಾರಪದ್ದತಿ, ವೇಷಭೂಷಣಗಳನ್ನು ರೂಡಿ-ಪದ್ದತಿಗಳು ಬಹಳ ಮಟ್ಟಿಗೆ ಬದಲಾವಣೆಯ ರೂಪ ಪಡೆಯುತ್ತವೆಯೇ ಹೊರತು ಅವುಗಳನ್ನು ಸಂಪೂರ್ಣವಾಗಿ ತೊರೆಯುವುದಿಲ್ಲ ಜನತೆ, ಹುಟ್ಟಿನಿಂದ ಸಾವಿನವರೆಗೆ ಬರುವಂತಹ ಎಲ್ಲಾ ವಿಧಿವಿಧಾನಗಳನ್ನು ಮನುಷ್ಯ ಕೆಲವೊಂದನ್ನ ಪ್ರತ್ಯಕ್ಷವಾಗಿ, ಕೆಲವೊಂದನ್ನ ಪರೋಕ್ಷವಾಗಿ ಆಚರಿಸಿಕೊಳ್ಳುತ್ತಲೇ ಬಂದಿದ್ದಾನೆ. ಈ ಪದ್ದತಿ ಸಂಪ್ರದಾಯಗಳು ಬದುಕಿನ ಅತಿಮುಖ್ಯ ಘಟ್ಟಗಳಾಗಿದ್ದು ಯಾವುದೇ ಲೋಪವಾಗದಂತೆ ಜನರು ಅವುಗಳನ್ನು ಕಾಪಾಡಿಕೊಂಡು ಬರುತ್ತಾರೆ. ಆದ್ದರಿಂದಲೇ ಒಂದು ಸಮಾಜದ ಸಂಸ್ಕೃತಿಯ ಮೂಲ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಆ ಸಮಾಜದಲ್ಲಿನ ಹುಟ್ಟು, ಸಾವು, ಮದುವೆ, ಹಬ್ಬ, ಜಾತ್ರೆ, ದೇವರು, ಮುಂತಾದವುಗಳೆಲ್ಲ ಅತಿ ಮುಖ್ಯವಾಗಿವೆ. ಈ ನಿಟ್ಟಿನಲ್ಲಿ ಆಧುನೀಕರಣದ ಹಿನ್ನೆಲೆಯಲ್ಲಿ ಮೊಳಕಾಲ್ಮುರು ಗ್ರಾಮದ ಜನತೆಯ ಆಚರಣೆಗಳು ಆ ಗ್ರಾಮದ ಸಂಸ್ಕೃತಿಯ ಮೂಲಾಂಶಗಳನ್ನು ಉಳಿಸಿಕೊಂಡಿರಬಹುದಾದ ಸಾಧ್ಯತೆಯನ್ನು ಶೋಧಿಸುವ ಅಗತ್ಯ ಇದೆ.

ಹಬ್ಬ ಎಂಬ ಪದವು ಸಂಸ್ಕೃತದ 'ಪರ್ವನ್' ಶಬ್ದದ ರೂಪ. ಪರ್ವ ಅಂದರೆ ಒಂದು ಮತ್ತೊಂದರ ಜೊತೆಗೆ ಸಂಧಿಸುವುದು ಎಂದರ್ಥ. ಸೂರ್ಯ, ಚಂದ್ರ ದಿಕ್ಕು ಬದಲಾಗುವುದೇ ಪರ್ವ. ಅದನ್ನೆ ನಮ್ಮ ಪೂರ್ವಜರು ಅಮವಾಸ್ಯೆ ಹುಣ್ಣಿಮೆಗಳೆಂದು ಹೆಸರಿಸಿದಂತೆ ಕಾಣುತ್ತದೆ. ಮಾನವ ತನ್ನ ಬದುಕೆ ಇಲ್ಲವೆ ಸಂಕಲ್ಪ ಆ ಇಚ್ಚೆಯ ಈಡೇರಿಕೆಗಾಗಿ ಒಂದು ಸೀಮಿವಾದ ಅವಧಿಯಲ್ಲಿ ಕೈಗೊಳ್ಳುವ ಹರಕೆ, ರೂಡಿ, ಸಂಪ್ರದಾಯ, ಆಚರಣೆ ಉತ್ಸವಗಳೇ ಹಬ್ಬಗಳಾಗಿ ಬಂದಿವೆ. ಮಹಾಕವಿ ಕಾಳಿದಾಸ ತನ್ನ ವಿಕ್ರಮೋರ್ವಶಿಯ ಕೃತಿಯಲ್ಲಿ 'ಉತ್ಸವ ಪ್ರಮಾಣ ಮನುಷ್ಯ' ಎಂದು ಹೇಳಿದ್ದನ್ನು ನೋಡಿದರೆ ಮಾನವನ ದೈಹಿಕ ಸುಖ ಸಂತೋಷ ಹಾಗು ಮುಕ್ತಿ ಸಾಧನೆಗಾಗಿ 'ಹಬ್ಬ' ಆಚರಣೆಯಲ್ಲಿ ಬಂದಂತೆ ತೋರುತ್ತದೆ. ಸೃಷ್ಠಿ ಕರ್ತನಾದ ಶಿವನ ಪ್ರಪಂಚದ ಸ್ಥಿತಿಗೆ ಗ್ಲಾನಿಯುಂಟಾದಾಗ ನಾನಾ ರೂಪಗಳಿಂದ ಆವರಿಸಿ ಬಂದ ಸಮಯದಲ್ಲಿ ಅವನ ರೂಪವನ್ನು ಅವನಿಗೆ ಎಲ್ಲರೂ ಯಥಾ ಶಕ್ತಿ ಕೃತಜ್ಞತೆ ಅರ್ಪಿಸುವರು.[೧]

ಈ ರೀತಿಯ ಆಚರಣೆಗಳ ದಿನಗಳನ್ನು ಜನಸಾಮಾನ್ಯರು ಹಬ್ಬಹರಿದಿಗಳೆಂದು ಕರೆದುಕೊಂಡರು ಮನುಷ್ಯ ನಿತ್ಯ ಲೌಕಿಕವಾದ ಬದುಕಿನಿಂದ ಅಲೌಕಿಕ ಬದುಕಿನತ್ತ ಮುಂದುವರಿಯಲು ಪ್ರಾಚೀನದಿಂದಲೂ ರೂಡಿಸಿಕೊಂಡು ಬಂದಿದ್ದಾರೆ. ಹೀಗಾಗಿ ಹಬ್ಬ ಬಂತೆಂದರೆ ಇಡೀ ಕುಟುಂಬದ ವಾತಾವರಣವೇ ಬದಲಾಗುತ್ತದೆ. ಚಿಕ್ಕಮಕ್ಕಳಿಂದ ಹಿಡಿದು ಮುದುಕರವರೆಗೂ ಆ ದಿನ ಸಂಭ್ರಮ ತುಂಬಿ ತುಳುಕಾಡುತ್ತಿರುತ್ತದೆ. ಈ ದಿನ ಅವರ ಬಾಳಿನಲ್ಲಿ ಪವಿತ್ರವಾದ ದಿನವನ್ನಾಗಿ ಆಚರಿಸುತ್ತಾರೆ. ಮೇಲು ಕೀಳೆಂಬ ಭೇದ ಭಾವವಿಲ್ಲದೆ ಎಲ್ಲಾ ಜಾತಿ–ವರ್ಗಗಳ ಕುಟುಂಬಗಳಲ್ಲೂ ಹಬ್ಬದ ವಾತಾವರಣ ಎಲ್ಲೆಲ್ಲೋ ತುಂಬಿ ಹರಿಯುತ್ತಿರುತ್ತದೆ. ಈ ಮಾತಿಗೆ ಮೊಳಕಾಲ್ಮುರು ಗ್ರಾಮವೂ ಹೊರತಾಗಿಲ್ಲ. ಗ್ರಾಮದಲ್ಲಿ ಎಲ್ಲಾ ವರ್ಗದ ಜನತೆ ಇದ್ದು, ಹಿಂದೂ–ಮುಸ್ಲೀಂ ಜನಾಂಗಗಳ ಭಾವೈಕ್ಯತೆ ಇಂತಹ ಹಬ್ಬಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಮುಸ್ಲೀಂ ಜನಾಂಗದವರು ಸಹ ಅವರ ಧರ್ಮದ ಹಬ್ಬಗಳನ್ನು ಆ ಧರ್ಮದ ಚೌಕಟ್ಟಿನಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ ಹಾಗೆಯೇ ಹಿಂದೂಧರ್ಮದಲ್ಲಿ ಬರುವಂತಹ ಎಲ್ಲಾ ಹಬ್ಬಗಳನ್ನು ಹಿಂದೂ ಧರ್ಮದ ಜನ ಪರಂಪರೆಯಿಂದಲೂ ಆಚರಿಸಿಕೊಂಡು ಬರುತ್ತಲೇ ಇದ್ದಾರೆ, ಆಚರಣೆಗಳಲ್ಲಿ ಇಂದು ಸ್ವಲ್ಪಮಟ್ಟಿನ ರೂಪಬದಲಾವಣೆ ಮಾರ್ಪಾಡಾಗಿರುವುದನ್ನು ಕಾಣಬಹುದು. ಊರಿನ ಪ್ರಮುಖ ಹಬ್ಬಗಳೆಂದರೆ ಯುಗಾದಿಯ ಹೊಸ ಎಲೆ ಚಿಗುರಿನ ನವ ವಸಂತದಿಂದ ಪ್ರಾರಂಭವಾಗಿ ಮುಂಬರುವ ಮತ್ತದೇ ಯುಗಾದಿಯ ಅವಧಿಯವರೆಗೂ ಬರುವಂತಹ ಪ್ರತಿಯೊಂದು ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದು, ಅವುಗಳಲ್ಲಿ ಕೆಲವೊಂದು ವಿಶೇಷವಾಗಿ

ಮತ್ತು ಬಹಳ ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಯುಗಾದಿ, ಕಾರಹುಣ್ಣಿಮೆ, ನಾಗರಪಂಚಮಿ, ಗಣೇಶ ಚತುರ್ಥಿ, ದಸರಾ, ದಿಪಾವಳಿ, ಎಳ್ಳಿನ ಅಮಾವಾಸೆ, ಸಂಕ್ರಾಂತಿ, ಶಿವರಾತ್ರಿ, ಮೋಹರಂ, ಮಾರಮ್ಮ ದೇವಿಯ ಹಬ್ಬ/ಉತ್ಸವ, ನುಂಕೆ ಮಲೆ ಸಿದ್ದೇಶ್ವರನ ಜಾತ್ರೆ, ಹೋಳಿಹಬ್ಬ, ಗೌರಿಹಬ್ಬ, ಮುಂತಾದ ಹಿಂದೂ ಸಂಪ್ರದಾಯದಲ್ಲಿ ಕಂಡು ಬರುವ ಹಬ್ಬಗಳನ್ನು ಅತ್ಯಂತ ಸಂತೋಷದಿಂದ ಆಚರಿಸುತ್ತಾರೆ. ಹಾಗೆಯೇ ಮುಸ್ಲಿಂ ಧರ್ಮದ ಜನರು, ರಂಜಾನ್, ಮೊಹರಂ, ಬಕ್ರೀದ್, ಮುಂತಾದ ಅಧರ್ಮದ ಪವಿತ್ರ ಹಬ್ಬ-ಆಚರಣೆಗಳನ್ನು ಬಹಳ ಭಕ್ತಿಯಿಂದ ಗೌರವದಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಇನ್ನೊಂದು ವಿಶೇಷವೆಂದರೆ ಮೊಹರಂ ಹಬ್ಬ ಮೂಲತಃ ಮುಸ್ಲಿಂ ಜನಾಂಗದ ಹಬ್ಬವಾದರೂ ಈ ಹಬ್ಬದಲ್ಲಿ ಹಿಂದೂ-ಮುಸ್ಲಿಂ ಧರ್ಮದವರು ಕೂಡಿಯೇ ಹಬ್ಬದ ಸವಿಯನ್ನು ಸವಿಯುತ್ತಾರೆ, ಕ್ರಿಶ್ಚಿಯನ್ ಧರ್ಮದವರೂ ಗ್ರಾಮದಲ್ಲಿದ್ದು ಅವರು ವರ್ಷಕ್ಕೊಮ್ಮೆ ಬರುವಂತಹ 'ಕ್ರಿಸ್‌ಮಸ್' ಹಬ್ಬವನ್ನು ಅತ್ಯಂತ ವೈಭವಯುತವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ.

ಹಬ್ಬದ ದಿನ ಮನೆಯಲ್ಲಿ ವಿಶೇಷ ಅಡುಗೆ-ಉಡುಗೆ, ಪೂಜೆ-ಪುನಸ್ಕಾರಗಳು ನಡೆಯುತ್ತಿದ್ದು ಗ್ರಾಮದಲ್ಲಿನ ಆಯಾ ಜನಾಂಗದ ಜನತೆ ತಮ್ಮ ಮಿತಿಗೆ ತಕ್ಕಂತೆ ಅದ್ದೂರಿ ಯಿಂದ ಸಂತೋಷ ಸಡಗರದಿಂದ ನೆರೆ-ಹೊರೆಯೊಂದಿಗೆ, ನೆಂಟರಿಷ್ಟರೊಂದಿಗೆ ಕೂಡಿ, ಕಷ್ಟಸುಖಗಳನ್ನು ಪರಸ್ಪರ ವಿಲೇವಾರಿ ಮಾಡಿಕೊಳ್ಳುತ್ತಾ ಹಬ್ಬದ ಆಚರಣೆಯಲ್ಲಿ ತೊಡಗುತ್ತಾರೆ.

ಯುಗಾದಿ

'ನವವಸಂತದ ಗಾಳಿಬೀಸಲು ಮಾವು ಚಿಗುರಿತು ಆಗಲೇ' ಮುತ್ತಿನ ಸಾಲು ಇದು. ವರ್ಷ-ವರ್ಷಕ್ಕೂ ಯುಗಾದಿ ಬಂತೆಂದರೆ ಬನಸಿರಿಗಳೆಲ್ಲ ಚಿಗುರಸಿರು ಸೀರೆಯುಟ್ಟು ಪ್ರಕೃತಿ ತಾಯಿ ಹಸುಕಂದನ ನಗೆಯೊಂದಿಗೆ ನೋಡುಗರ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತಾಳೆ. ಇಂತಹ ಮನಮೋಹಕ ದೃಷ್ಯ ಕಂಡುಬರುವುದು 'ಯುಗಾದಿ'ಹಬ್ಬ ವರಕವಿ ಬೇಂದ್ರೆಯವರು

ಯುಗ ಯುಗಾದಿ ಕಳೆದರು
ಯುಗಾದಿ ಮತ್ತೆ ಬರುತಿದೆ
ಹೊಸ ವರುಷಕೆ ಹೊಸಹರುಷಕೆ
ಹೊಸತು ಹೊಸತು ತರುತಿದೆ

ಎಂಬಂತಹ ಸಾಹಿತ್ಯದ ನುಡಿ ನಿಜಕ್ಕೂ ಅದ್ಭುತವೆನಿಸುತ್ತದೆ. ಎಲ್ಲೆಲ್ಲೂ ಹಸಿರು, ಕೋಗಿಲೆಯ ನೀನಾದದಿಂದ ಕೂಡಿದವಾತಾವರಣ ಗ್ರಾಮೀಣ ಪ್ರದೇಶದಲ್ಲಿ ಇನ್ನಷ್ಟು

ಸುಂದರವಾಗಿ ಕಾಣುತ್ತದೆ. ಜನರೆಲ್ಲ ಸುಗ್ಗಿಯನ್ನು ಮುಗಿಸಿಕೊಂಡು, ಮನೆಯಲ್ಲಿ ದವಸ-ಧಾನ್ಯಗಳನ್ನೆಲ್ಲಾ ತುಂಬಿಟ್ಟುಕೊಂಡು ಕಾತರದಿಂದ ಹಬ್ಬದ ಬರುವಿಗಾಗಿ ಕಾಯುತ್ತಿರುತ್ತಾರೆ.

'ಯುಗಾದಿ'ಎಂಬ ಪದದ ಅರ್ಥವನ್ನು ಸಂಸ್ಕೃತದಲ್ಲಿ 'ಯುಗ' ಅಂದರೆ ವರ್ಷ ಎಂಬುದು ಕಂಡುಬರುತ್ತದೆ. ವರ್ಷ-ಆದಿ ಎಂದರೆ ಆರಂಭ. ಭಾರತೀಯ ಪಂಚಾಂಗದ ಪ್ರಕಾರ ಜನಪದರಿಗೆ ಹೊಸದಿನ ಯುಗಾದಿ ಹಬ್ಬ, ವರ್ಷದ ಆರಂಭದ ಹಬ್ಬ ಯುಗಾದಿಹಬ್ಬ, ಅದು ಇಂದು ಪಾಶ್ಚಾತ್ಯ ಕ್ಯಾಲೆಂಡರಿನಲ್ಲಿ ವರ್ಷದ ಮೂರನೆ ಅಥವಾ ನಾಲ್ಕನೇ ತಿಂಗಳಲ್ಲಿ ಹಬ್ಬವನ್ನ ಗುರುತಿಸಲಾಗಿದೆ. ಏನೇ ಇದ್ದರೂ ಜನಪದರ ನಂಬಿಕೆಯಲ್ಲಿ ಯುಗಾದಿಯೇ ಮೊದಲ ಹಬ್ಬ ಅಂದು ಮನೆಮಂದಿಯಲ್ಲಾ ಹೊಸ ಬಟ್ಟೆ, ಹೊಸತನದಿಂದ ಕೂಡಿದ ಹೊಸ ಬದುಕಿಗೆ ಪಾದಾರ್ಪಣೆ ಮಾಡುತ್ತಾರೆ.

ಇಡೀ ಗ್ರಾಮದಲ್ಲಿ ಪ್ರಮುಖವಾಗಿ ೯ ದೇವಸ್ಥಾನಗಳಿದ್ದು ಆದೇವಾಲಯಗಳು ಹೆಣ್ಣು ದೇವಾಲಯ ಮತ್ತು ಗಂಡು ದೇವಾಲಯಗಳು ಸಹ ಇವೆ ಈ ದೇವಾಲಯಗಳಿಗೆಲ್ಲ ಗ್ರಾಮದ ಜನತೆ ಅಥವಾ ಆಯಾ ದೇವತಾ ಆರಾಧನೆಯ ಪೂಜಾರಿವರ್ಗದವರು ದೇವಸ್ಥಾನಗಳಿಗೆಲ್ಲ ಸುಣ್ಣ-ಬಣ್ಣ ಬಳಿದು ದೇವಸ್ಥಾನದ ಸುತ್ತಮುತ್ತಲೂ ಸ್ವಚ್ಛಮಾಡಿ ಯುಗಾದಿ ಅಮವಾಸ್ಯೆ ದಿನದಂದು ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ದೀಪಾಲಂಕಾರಗಳಿಂದ ಕೂಡಿದ ದೇವಸ್ಥಾನಗಳು ಹಬ್ಬದ ದಿನದಂದು ವೈಭವವಾಗಿ ಕಂಗೊಳಿಸುತ್ತದೆ.

ಯುಗಾದಿ ಹಬ್ಬದ ಮತ್ತೊಂದು ವಿಶೇಷ ಸಂಗತಿಯೆಂದರೆ ಬೇವು ಬೆಲ್ಲ ತಿನ್ನುವುದು ಭಾರತೀಯ ಪರಂಪರೆಯಲ್ಲಿಯೇ ಒಂದು ಮಹತ್ವದ ಕಾರ್ಯ. ಹಬ್ಬದದಿನ ಬೆಳಗಿನಿಂದಲೂ ಕುಟುಂಬಗಳಲ್ಲಿ, ದೇವಸ್ಥಾನಗಳಲ್ಲಿ ನಿರಂತರ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದು ಜನತೆ ಪರಸ್ಪರ ಬೇವು-ಬೆಲ್ಲ ಹಂಚಿ ಶುಭಕೋರುತ್ತಾರೆ. ಅಮವಾಸ್ಯೆ ಪಾಡ್ಯದ ದಿನದಿಂದ ಮೊದಲುಗೊಂಡು ಪೂಜೆ ಪುನಸ್ಕಾರಗಳು ಎರಡನೇ ದಿನದವರೆಗು ಮುಂದುವರೆಯುತ್ತವೆ. ಪ್ರಮುಖವಾಗಿ ಎರಡುದಿನ ಧಾರ್ಮಿಕ ವಿಧಿ ವಿಧಾನಗಳಿಂದ ಊರಿನ ಆ ವರ್ಗದ ಜನತೆ ತಮ್ಮ ಸಂಪ್ರದಾಯದಂತೆ ಪೂಜೆಯನ್ನು ಮಾಡುತ್ತಾರೆ. ಸ್ನಾನದ ಸಂದರ್ಭದಲ್ಲಿ ನೀರಿನಲ್ಲಿ ಬೇವಿನ ಸೊಪ್ಪನ್ನು ಬೆರೆಸಿಕೊಂಡು ಸ್ನಾನ ಮಾಡುವುದು ಒಂದು ವಿಶೇಷವೆನಿಸುತ್ತದೆ. ಜನರ ಮನೆಯ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಹಬ್ಬವನ್ನ ಅವರವರ ಅನುಕೂಲತೆ ಅನುಗುಣವಾಗಿ ಆಚರಿಸಿಕೊಂಡು ಬರುವ ಪದ್ದತಿ ಇದೆ.

ಇಂದಿಗು ಸಹ ಊರಿನಲ್ಲಿ ಮೊಳಕಾಲ್ಮೂರು ಗ್ರಾಮದಲ್ಲಿ ಈ ಯುಗಾದಿ ಹಬ್ಬದ ಆಚರಣೆ ಆಚರಿಸಿಕೊಂಡು ಬರುತ್ತಿದ್ದಾರೆ ಜನರು. ವರ್ತಮಾನದಲ್ಲಿ ವಲಸೆ ಹೋಗಿರುವಂತಹ

ಜನರು, ಬೇರೆ ಕಡೆ ಕೆಲಸ ಮಾಡಿಕೊಂಡಿರುವಂತಹ ಜನರು ಈ ಹಬ್ಬಕ್ಕೆಂದೇ ತಮ್ಮ ಊರಿಗೆ ಬಂದು ಕುಟುಂಬದವರೊಡನೆ ಬೆರೆತು ಹಬ್ಬದ ಸಂತೋಷವನ್ನ ಸವಿಯುತ್ತಾರೆ. ಈ ಸಂದರ್ಭದಲ್ಲಿ ದೂರದ ಊರಿನಲ್ಲಿರುವ ಇತರೆ ಜನರು ಸಹ ತಮ್ಮಮನೆಗಳಿಗೆ ಹಿಂದುರಿಗಿ ಹಬ್ಬವನ್ನು ಮಾಡುತ್ತಾರೆ. ಜೊತೆಗೆ ನೆಂಟರಿಷ್ಟರು ಸಹ ಬಂದು ಹಬ್ಬ ಆಚರಿಸಿಕೊಂಡು ಹೋಗುತ್ತಾರೆ. ಊಟದ ಸವಿಯಂತೂ ಈ ಸಂದರ್ಭದಲ್ಲಿ ಪ್ರತಿಯೊಮದು ಮನೆಯಲ್ಲಿಯೂ ಸಿಹಿ ಊಟ ಇದ್ದೆ ಇರುತ್ತದೆ. ಹೋಳಿಗೆ, ಕರಿಗಡಬು, ಶ್ಯಾವಿಗೆ ಪಾಯಸ ಮುಂತಾದ ಸಿಹಿ ತಿನಿಸುಗಳನ್ನು ಮಾಡಿಕೊಂಡು ಮನೆಮಂದಿಯೆಲ್ಲಾ ಕುಳಿತು ಊಟಮಾಡುತ್ತಾರೆ ಇದು ಎಲ್ಲರ ಮನೆಯಲ್ಲಿಯೂ ಸರ್ವೆ ಸಾಮಾನ್ಯವಾಗಿದೆ.

ನುಂಕಪ್ಪನ ಜಾತ್ರೆ

ಈ ನುಂಕಪ್ಪನ ಜಾತ್ರೆಯೆಂದು ಮೊಳಕಾಲ್ಮುರು ಗ್ರಾಮದಲ್ಲಿ ವಿಶೇಷವಾಗಿ ಆಚರಿಸುವ ಒಂದು ಹಬ್ಬ. ಶ್ರೀ ನುಂಕೇಮಲೆಬೈರವೇಶ್ವರ ರಥೋತ್ಸವ /ಜಾತ್ರಾಮಹೋತ್ಸವವೆಂದು ವರ್ಷದ ಮೇ ತಿಂಗಳಲ್ಲಿ ನಡೆಯುವ ಊರಿನ ಪ್ರಮುಖ ಮತ್ತು ದೊಡ್ಡ ಜಾತ್ರೆ ಉತ್ಸವ, ಈ ಜಾತ್ರೆ ಇಡೀ ಪರಿಸರದ ಸುತ್ತಮುತ್ತಲೂ ಚಿರಪರಿಚಿತ, ಇದಕ್ಕೆಂದೇ ಬೇರೆ ದೂರದ ಊರಿನಲ್ಲಿರುವ ಅನೇಕ ಭಕ್ತಾದಿಗಳು ಈ ಸಂದರ್ಭದಲ್ಲಿ ಬಂದು ಸೇರುತ್ತಾರೆ. ಜಾತ್ರೆಯು ಮೇ ತಿಂಗಳ ಹುಣ್ಣಿಮೆಯ ದಿನದಂದು ನಡೆಯುತ್ತಿದ್ದು ಈ ದೈವಕ್ಕೆಂದೆ ಪ್ರತ್ಯೇಕ ಭಕ್ತಾದಿಗಳಿದ್ದಾರೆ. ಈ ದೈವವನ್ನು ತಮ್ಮ ಮನೆದೇವರನ್ನಾಗಿ ಪೂಜಿಸುವ ಜನರು ಪರಿಸರದಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ಬಹಳಷ್ಟು ಜನ ಕಂಡುಬರುತ್ತಾರೆ. ಈ ನುಂಕೆ ಮಲೆ ಭೈರವೇಶ್ವರನಿಗೆ ಪ್ರತ್ಯೇಕ ಭಕ್ತಾದಿಗಳಿದ್ದಾರೆ. ಅವರನ್ನು ಜೋಗಪ್ಪಗಳೆಂದು/ ಗೊರಪ್ಪಗಳೆಂದು ಕರೆಯುತ್ತಾರೆ. ಇವರು ಈ ದೇವರಿಗೆ ಮೀಸಲು ಜನಾಂಗದವರಾಗಿದ್ದು ಇಡೀ ಜಾತ್ರೆ ಸಂದರ್ಭದಲ್ಲಿ ಇವರ ಸೇವೆ ಪ್ರಮುಖವಾಗಿರುತ್ತದೆ. ಇವರು ಈಮೀಸಲನ್ನು ಹೊತ್ತುಕೊಂಡು ಊರೂರು ಅಲೆದು ದೇವರ ಬಗ್ಗೆ ಹೇಳುತ್ತಾ ಹೋಗುತ್ತಾರೆ. ಹೀಗಾಗಿ ಈ ಜನಾಂಗದವರಿಗೆ ವಿಶೇಷ ಪ್ರಾಧಾನ್ಯತೆ ಇದೆ.

ಈ ಭೈರವಾರಾಧನೆ ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳಲ್ಲಿಯೂ ಬಹುತೇಕ ಭಾರತದಾದ್ಯಂತ ಭೈರವಾರಾಧನೆಯ ಕುರುಹುಗಳು ದೊರೆಯುತ್ತವೆ. 'ಊರಿಗೊಂದು ಬೋರೆ ದೇವರ ಗುಡಿ' ಎಂಬ ಗಾದೆಯನ್ನು ನೋಡಿದರೆ ಕರ್ನಾಟಕದಲ್ಲಿ ಭೈರವ ದೇವಸ್ಥಾನದ ಬಾಹುಳ್ಯ ಗಮನಿಸಬಹುದು. ಗ್ರಾಮದ ನುಂಕೆಮಲೆ ಬೆಟ್ಟದಲ್ಲಿ ಇಂದಿಗೂ ನಾಥ ಪಂಥಕ್ಕೆ ಸೇರಿದ ಸ್ವಾಮಿಗಳಿರುವುದನ್ನು ಕಾಣಬಹುದು. ನಾಥ

ಪಂಥದ ಕೇಂದ್ರವಾದ ಮಂಗಳೂರಿನ ಕದ್ರಿಯಲ್ಲಿ ನಾಥಪಂಥದ ದೇವಸ್ಥಾನಗಳು ಪಟ್ಟಿಯಲ್ಲಿ ನುಂಕೆ ಮಲೆ ಬೆಟ್ಟವೂ ಸೇರಿದೆ. ಈ ಕಾರಣದಿಂದ ಈ ಕ್ಷೇತ್ರ ನಾಥ ಪಂಥದ ಆರಾಧನಾ ಕೇಂದ್ರವೂ ಆಗಿದೆ. ನುಂಕೇಮಲೆ ಸಿದ್ದೇಶ್ವರ ಮೌಖಿಕ ಚರಿತ್ರೆಯನ್ನು ಅವಲೋಕಿಸಿದಾಗ ಆತನೊಬ್ಬ ಸಾಂಸ್ಕೃತಿಕ ನಾಯಕನಾಗಿ ಕಂಡುಬರುತ್ತಾನೆ ಮಲೆಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗೇಶ್ವರದಂತೆಯೇ ಸಾಮಾನ್ಯ ಜನರ ನೋವು ನಲಿವಿಗೆ ಸ್ಪಂದಿಸಿದ ವ್ಯಕ್ತಿಯಾಗಿ ಮೊಳಕಾಲ್ಮೂರು ಪರಿಸರದ ಜನರ ಸಾಂಸ್ಕೃತಿಕ ನಾಯಕನಾಗಿದ್ದಾನೆ.[೨]

ಹೀಗೆ ನುಂಕೆಮಲೆ ಭೈರವೇಶ್ವರನ ಚರಿತ್ರೆ ಬಹಳ ಧೀರ್ಘವಾಗಿದ್ದು ಈತನ ಹುಟ್ಟು-ಸಾವಿನ ಬಗ್ಗೆ ಅನೇಕ ಮೌಖಿಕ ಕತೆಗಳು-ಕಾವ್ಯಗಳು ಇವೆ ಮೌಖಿಕ ಸಾಹಿತ್ಯದಲ್ಲಿ ನುಂಕಮಲೆ ಭೈರವೇಶ್ವರನ ಬಗ್ಗೆ ಹಲವು ಆಧಾರಗಳು ದೊರಕಿದ್ದು ಈತನ ಬಗೆಗಿನ ಜೀವನವನ್ನು ಅರಿಯಲು ತಿಳಿದುಕೊಳ್ಳಲು ಸಹಾಯಕವಾಗಿದೆ.[೩] ಇಂತಹ ಪವಾಡಪುರಷನೆನಿಸಿದ ಈ ಭೈರವನ ಬಗ್ಗೆ ಮೊಳಕಾಲ್ಮೂರು ಗ್ರಾಮದ ಜನರಲ್ಲಿ ಅತ್ಯಂತ ಭಯ-ಭಕ್ತಿ, ಗೌರವಗಳು ಹೆಚ್ಚಿವೆ ಜಾತ್ರೆ ಸಂದರ್ಭದಲ್ಲಿ ಅನೇಕ ಜನರು ಮುಡುಪುಗಳನ್ನು ಕಟ್ಟುತ್ತಾರೆ ನಾನಾ ರೀತಿಯ ಧಾರ್ಮಿಕ ಸೇವೆಗಳನ್ನ ಸಲ್ಲಿಸುತ್ತಾರೆ. ಕಾಣಿಕೆಗಳನ್ನು ನೀಡುತ್ತಿದ್ದಾರೆ. ಅವರು ಅಂದುಕೊಂಡ ಕಟ್ಟಿಕೊಂಡ ಮುಡುಪುಗಳೆಲ್ಲ ಫಲಪ್ರದವಾಗಿದ್ದು ಇದು ಈತನ ಮಹಿಮೆಯನ್ನು ಪ್ರಜ್ವಲ ಶಕ್ತಿಯನ್ನು ತೋರಿಸುತ್ತದೆ. ಜನಸಾಮಾನ್ಯರು ಈತನ ದಯೆಂದ ಕಷ್ಟಗಳಿಂದ ಪಾರಾಗಿದ್ದಾರೆ.

ಈ ರೀತಿಯೇ ಭಕ್ತಿ ಗೌರವಗಳಿಂದ ಪೂಜಿಸಲ್ಪಟಂತ ನುಂಕೆಮಲೆ ಭೈರವೇಶ್ವರ ಗ್ರಾಮದ ಜನತೆಗಷ್ಟೇ ಮೀಸಲಾಗಿಲ್ಲ ವಿವಿಧ ಪ್ರದೇಶಗಳಿಂದಲೂ ಈತನ ಭಕ್ತರ ಮಹಾಪೂರವೇ ಇದೆ. ಈತನ ಪೂಜೆಗೆಂದೆ ಮೀಸಲಾದ ಪೂಜಾರಿಮನೆತನದವರಿದ್ದಾರೆ. ಅವರು ಪ್ರತ್ಯೇಕವಾಗಿ ಒಂದು ಹಳ್ಳಿಯನ್ನೇ ನಿರ್ಮಿಸಿಕೊಂಡಿದ್ದಾರೆ. ಪೂಜಾರಿಹಳ್ಳಿ ಎಂಬ ಊರು ಈ ಪೂಜಾರಿಗಳ ವಂಶಸ್ಥರು ವಾಸಿಸುವಂತಹ ಊರಾಗಿದೆ. ಈ ಪೂಜಾರಿ ಮನೆತನದವರು ತಲೆಮಾರಿನಿಂದಲೂ ಅದೇ ವರ್ಗದ ಜನತೆಯೇ ಭೈರವನ ಪೂಜೆಗೆಂದು ಮೀಸಲಿಟ್ಟ ವರ್ಗವಾಗಿದೆ. ಪೂಜಾರಿಯು ಸಹ ಅತ್ಯಂತ ಭಯ ಭಕ್ತಿಯಿಂದ ಭೈರವ ಮೂರ್ತಿಯ ಸೇವೆ ಮಾಡುತ್ತಿದ್ದು ಯಾವುದೇ ಕಷ್ಟ ನಷ್ಟಗಳಿಲ್ಲದೆ ನೆಮ್ಮದಿಯಿಂದ ಬದುಕನ್ನು ಸಾಗಿಸುತ್ತಿದ್ದಾರೆ ಪೂಜಾರಿ ಮನೆತನದವರು. ಹೀಗೆ ನೆಲೆಗೊಂಡಿರುವ ಭೈರವೇಶ್ವರ/ ನುಂಕೇಮಲೆ ಸಿದ್ದೇಶ್ವರನಿಗೆ ಪೂಜೆ ಮಾಡುವಂತಹ ಪೂಜಾರಿಯು ಜಾತ್ರೆ ಸಂದರ್ಭದಲ್ಲಿ ಅಮವಾಸ್ಯೆಯನಂತರ ೯ ದಿನಗಳ ಕಾಲ ಉಪವಾಸವಿದ್ದು ಕೇವಲ ಹಾಲು-ಹಣ್ಣುಗಳನ್ನಷ್ಟೇ ಸೇವಿಸುತ್ತಾರೆ. ಯಾವುದೇ ದೋಷಗಳಿಂದ ಕೂಡಿರದೆ ಮೈಲಿಗೆ ಆಗದಂತೆ ಅತ್ಯಂತ ಕಟ್ಟು

ನಿಷ್ಠೆನಿಂದ ವ್ರತವನ್ನು ಕೈಗೊಳ್ಳಬೇಕಾಗುತ್ತದೆ. ಜಾತ್ರೆಯ ದಿನ 'ಸಿಡಿ' ಆಗುತ್ತಿದ್ದು ಆದಿನದವರೆಗೆ ಪೂಜಾರಿ ಉಪವಾಸ ವ್ರತದಿಂದ ಸಿಡಿಯ ಹಿಂದಿನ ದಿನ ಮನೆಯ ಮುತ್ತೈದೆಯರೊಂದಿಗೆ ಗಂಗೆ ಪೂಜೆ ಮಾಡಿಕೊಂಡು ಬೆಟ್ಟಕ್ಕೆ ಬಂದು ಪೂಜಾ ವಿಧಾನಗಳನ್ನ ಮುಗಿಸುತ್ತಾರೆ. ನುಂಕೆಮಲೆ ಬೆಟ್ಟದ ಮೇಲೆ ಇರುವ ದೇವಸ್ಥಾನದ ಹತ್ತಿರ ಸಿಡಿ ಆಡುವ ಸ್ಥಳವಿದ್ದು ದೇವಾಲಯದ ಎದುರಿಗೆ ಈದೈವ ಕಾರ್ಯ ನಡೆಯುತ್ತದೆ. ಊರಿನಿಂದ ಸುಮಾರು ೪ ಕಿ.ಮೀ. ದೂರದ ಬೆಟ್ಟದಲ್ಲಿರುವ ದೇವಾಲಯದವರೆಗೂ ವಾದ್ಯಮೇಳಗಳಿಂದ ಮುತ್ತೈದೆ ಹೆಣ್ಣುಮಕ್ಕಳು ದೀಪಕಳಸಗಳನ್ನು ಹೊತ್ತು ಪೂಜಾರಿಯೊಂದಿಗೆ ನಡೆದು ಬಂದು ನಂತರ ದೇವಾಸ್ಥಾನಕ್ಕೆ ಬಂದು ಅಲ್ಲಿ ಪೂಜೆಯನ್ನು ಮುಗಿಸಿ ಸಿಡಿಯ ಹಗ್ಗವನ್ನು ಕಟ್ಟಿಕೊಂಡು ಸಿಡಿ ಆಡುತ್ತಾರೆ. ಈ ಸಂದರ್ಭದಲ್ಲಿ ಸಾವಿರಾರು ಭಕ್ತಾದಿಗಳು ಸೇರಿರುತ್ತಾರೆ. ಈ ಸಿಡಿ ಉತ್ಸವವನ್ನು ನೋಡಲು ಜನರು ನೂಕು ನುಗ್ಗಲಿನಿಂದ ಸ್ವಾಮಿಯ ಭಕ್ತಿಗೆ ಪಾತ್ರರಾಗುತ್ತಾರೆ. ಕೆಲವೊಬ್ಬರು ಹರಕೆಯನ್ನು ಹೊತ್ತ ಜನ ಹರಕೆ ತೀರಿಸುತ್ತಾ, ಕುರಿಕೋಳಿಗಳನ್ನು ಬಲಿಕೊಟ್ಟ/ ಪೂಜೆ ಮಾಡಿಸಿಕೊಂಡು ಅಲ್ಲಿಯೇ ಅಡಿಗೆ ಮಾಡಿಕೊಂಡು ಊಟ ಮಾಡಿ ಉತ್ಸವ ನೋಡಿಕೊಂಡು ಮತ್ತೆ ಊರಿಗೆ ತೆರಳುತ್ತಾರೆ.

ಈ ದೇವರಿಗೆ ಬರುವ ಜನರು ಒಬ್ಬೊಬ್ಬರು ಒಂದೊಂದು ತೆರನಾದ ಹರಕೆಯನ್ನು ಹೊತ್ತಿರುತ್ತಾರೆ. ಬಾಯಿ ಬೀಗ ಹಾಕಿಕೊಳ್ಳುವ ಹರಕೆ ಅಂದರೆ ತಮ್ಮ ಬಾಯಿಗೆ ದಬ್ಬಳದಂತಹ ಚೂಪಾದ ಸೂಜಿಯಿಂದ ಒಂದು ಕಡೆಯ ಮುಖದ ಕಪಾಳದಿಂದ ಮತ್ತೊಂದೆಡೆ ಹೊರಗೆ ಬರುವಂತೆ ಚುಚ್ಚಿಕೊಂಡು ಊರಿನಿಂದ ಬೆಟ್ಟದ ದೇವಸ್ಥಾನದವರೆಗೆ ಹರಕೆ ತೀರಿಸಲು ಹೊರಡುತ್ತಾರೆ, ಮತ್ತೆಕೆಲವರು ಸಿಡಿ ಉತ್ಸವಕ್ಕೆ ಬಳಸಬಹುದಾದ ಹಗ್ಗವನ್ನು ಪೂಜೆ ಮಾಡಿಕೊಂಡು ದೇವಸ್ಥಾನಕ್ಕೆ ಕೊಡುವಂತಹ ಹರಕೆ, ಇಂತಹ ವಿಶಿಷ್ಠ ರೀತಿಯ ಹರಕೆಗಳನ್ನ ಹೊತ್ತ ಭಕ್ತಾದಿಗಳು ಉತ್ಸವದಂದು ತಮ್ಮ ನಿಷ್ಪಕ್ಷಪಾತ ಭಕ್ತಿಯಿಂದ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಈ ಸೇವೆಯಿಂದ ದೇವರು ತೃಪ್ತನಾಗಿ ಅವರ ಹರಕೆಯನ್ನು ತೀರಿಸುತ್ತಾನೆ. ಕಷ್ಟಗಳಿಂದ ಪಾರುಮಾಡುತ್ತಾನೆ ಜೀವನದಲ್ಲಿ ನೆಮ್ಮದಿಯ ಬದುಕನ್ನು ನೀಡುತ್ತಾನೆ ಎಂಬನಂಬಿಕೆ ಜನರಲ್ಲಿ ಅತಿಯಾಗಿ ಇದೆ. ಹಾಗೆಯೇ ಇಲ್ಲಿ ಈ ದೈವದ ಹೆಸರನ್ನು ತಮ್ಮ ನಾಮಗಳನ್ನು ಇಟ್ಟುಕೊಂಡಿದ್ದಾರೆ. ಹೆಣ್ಣು-ಗಂಡೆಂಬ ಭೇದವಿಲ್ಲದೆ ಜಾತಿ-ಭೇದಗಳಿಲ್ಲದೆ ಜನರು ದೇವರ ಮೇಲಿನ ಪ್ರೀತಿಗಾಗಿ-ಭಕ್ತಿಗಾಗಿ ಆ ದೇವರ ಹೆಸರನ್ನೇ ತಾವು ಮತ್ತು ತಮ್ಮ ಮಕ್ಕಳಿಗೆ ನಾಮಕರಣ ಮಾಡುತ್ತಿದ್ದಾರೆ. ನುಂಕಪ್ಪ, ನುಂಕಮ್ಮ, ನುಂಕವ್ವ, ಭೈರಣ್ಣ, ಸಿದ್ದೇಶ, ಸಿದ್ದಪ್ಪ, ಸಿದ್ದಮ್ಮ ಮುಂತಾದ ಈ ದೇವರ ಹೆಸರಿನ ನಾನಾ ರೀತಿಯಲ್ಲಿ ನಾಮಕರಣ

ಮಾಡುತ್ತಾರೆ. ವಿಶೇಷವಾಗಿ ಈ ನುಂಕೆಮಲೆ ಭೈರವೇಶ್ವರನ ಪೂಜಾರಿ ಮನೆತನದವರು ಲಿಂಗಾಯ್ತ ಧರ್ಮಕ್ಕೆ ಸೇರಿದವರಾಗಿದ್ದಾರೆ.

ಕಾರ ಹುಣಿಮೆ

ಗ್ರಾಮದ ಪ್ರಮುಖ ಹಬ್ಬಗಳಲ್ಲಿ ಕಾರಹುಣ್ಣಿಮೆ ಹಬ್ಬವೂ ಸಹ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಇದು ರೈತರ ಪ್ರಧಾನ ಹಬ್ಬವೆಂದರೂ ತಪ್ಪಾಗಲಾರದು. 'ರೈತನ ಗೆಳೆಯ ಎತ್ತು' ಈ ಎತ್ತುಗಳನ್ನು ವಿಶೇಷವಾಗಿ ಪೂಜಿಸುವಂತಹ ಈ ಹಬ್ಬದ ವಾತಾವರಣ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಮನಮೋಹಕವಾಗಿದೆ. ಮುಂಗಾರು ಪ್ರಾರಂಭವಾಗಿ ರೈತರೆಲ್ಲ ತಮ್ಮ ಹೊಲಗಳನ್ನು ಹಸನುಮಾಡುವ ಈ ಸಂದರ್ಭದಲ್ಲಿ ರೈತರ ಒಕ್ಕಲು ತನದ ಚಟುವಟಿಕೆಗಳು ಇಲ್ಲಿಂದಲೇ ಪ್ರಾರಂಭವಾಗುತ್ತವೆ. ಜೂನ್ ಅಥವಾ ಜುಲೈ ತಿಂಗಳಲ್ಲಿ ಬರುವ ಈ ಹಬ್ಬ ದನಕರುಗಳನ್ನು ಸಾಕಿದಂತಹ ಮನೆಗಳಲ್ಲಿ ಅಂದು ಯಾರೂ ಸಹ ಎತ್ತುಗಳನ್ನು ಹೊರಗೆ ಕಳಿಸುವುದಿಲ್ಲ. ಅವುಗಳಿಗೆ ಬೆಳಗಿನಿಂದಲೇ ಸ್ನಾನ ಮಾಡಿಸಿ, ಅವುಗಳ ಕೊಂಬುಗಳಿಗೆ ಬಣ್ಣ ಹಚ್ಚಿ, ಶುಭ್ರಮಾಡಿಸುತ್ತಾರೆ, ಮನೆಯಲ್ಲಿಯೂ ಸಹ ಸಂಭ್ರಮದ ಸಡಗರ ವಾತಾವರಣದಿಮದ ಕೂಡಿದ್ದು ಅಂದು ಮನೆ ಮಂದಿಯೆಲ್ಲಾ ಮನೆಯ ಸ್ವಚ್ಚತೆಯನ್ನು ಮಾಡಿ, ಸಿಹಿ ಅಡುಗೆಯನ್ನ ಮಾಡುತ್ತಾರೆ.

ಮತ್ತೊಂದೆಡೆ ಮನೆಯ ಪುರುಷರು ದನಕರುಗಳಿಗೆ ಸ್ವಚ್ಚ ಮಾಡಿ ಬಣ್ಣಬಳಿದು ಅವುಗಳನ್ನು ಶೃಂಗಾರ ಮಾಡುತ್ತಾರೆ. ಒಟ್ಟಾರೆ ಊರಿನಲ್ಲಿರುವ ಆಸಕ್ತ ರೈತರ ಎತ್ತುಗಳನ್ನೆಲ್ಲಾ ಒಂದೆಡೆ ಕೂಡಿಸಿಕೊಂಡು ಒಂದು ನಿಗದಿತ ಸ್ಥಳದಿಂದ ಮತ್ತೊಂದು ಕಡೆಯ ನಿಗದಿತ ಸ್ಥಳದವರೆಗೆ ಓಟದ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಈ ಎತ್ತುಗಳ ಓಟದ ಸ್ಪರ್ಧೆಯಲ್ಲಿ ಯಾವ ಎತ್ತು ಜಯಗಳಿಸುತ್ತದೆಯೋ ಅದಕ್ಕೆ ಊರಿನ ಜನರೆಲ್ಲ ಅಥವಾ ಊರಿನ ಪಂಚಾಯ್ತಿ ವತಿಯಿಂದ ಉಡುಗೊರೆ ನಿಡಿ ಆ ಎತ್ತನ್ನು ಇಡೀ ಊರಿನಲ್ಲಿ ಮೆರವಣಿಗೆ ಮಾಡುತ್ತಾರೆ ಇದರಿಂದ ಜಯಗಳಿಸಿದಂತಹ ಎತ್ತಿನ ಯಜಮಾನನ ಮನೆಯಲ್ಲಿ ಅಂದು ಹೆಚ್ಚಿನ ಸಂತೋಷ ಸಡಗರವನ್ನ ಕಾಣಬಹುದು. ಇದಕ್ಕೆ ಊರಿನ ಜನರೆಲ್ಲ ಸೇರಿ ತುಂಬು ಸಹಕಾರದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಮೊಳಕಾಲ್ಮೂರು ಗ್ರಾಮದ ಪಿ.ಟಿ.ಹಟ್ಟಿಯಲ್ಲಿ ಮಾತ್ರ ಈ ಹಬ್ಬದಲ್ಲಿ ಎತ್ತುಗಳ ಓಟದ ಸ್ಪರ್ಧೆ ಏರ್ಪಡಿಸುತ್ತಿದ್ದು ಉಳಿದಂತೆ ಸಾಮಾನ್ಯವಾಗಿ ಸಿಹಿ ಅಡುಗೆಯನ್ನು ಮಾಡಿಕೊಂಡು ಊಟಮಾಡುತ್ತಾರೆ.

ಇದಕ್ಕೆ ಪ್ರಮುಖ ಕಾರಣವೆಂದರೆ ಇಂದಿನ ಆಧುನೀಕರಣದಲ್ಲಿ ಜಾನುವಾರುಗಳನ್ನು/ ದನಕರುಗಳನ್ನು ಸಾಕುವ ಜನ ಕಡಿಮೆಯಿದ್ದು ಕೇವಲ ಕೆಲವು ರೈತರು ಮಾತ್ರ ಎತ್ತು-

ಕರುಗಳನ್ನು ಸಾಕುತ್ತಾರೆ. ಇದಕ್ಕೆ ದನಕರುಗಳಿಗೆ ಬೇಕಾಗುವಂತಹ ಆಹಾರದ ಕೊರತೆಯೂ ಸಹ ಮತ್ತೊಂದು ಕಾರಣವಾಗಿದೆ. ಬೆಂಗಾಡು ಪ್ರದೇಶವಾಗಿರುವಂತಹ ಮೊಳಕಾಲ್ಮೂರು ಪರಿಸರದಲ್ಲಿ ಹಸುರಿನ ನೋಟವೇ ಕೆಲವು ಕಾಲ ಮಾತ್ರ ಕಾಣಸಿಗುತ್ತದೆ. ಉಳಿದಂತೆ ದಿನಗಳಲ್ಲಿ ಬಯಲು ಪ್ರದೇಶದಿಂದ ಕೂಡಿದ್ದು ಈ ಪ್ರಕೃತಿಯ ವೈಪರಿತ್ಯದ ಕಾರಣದಿಂದಾಗಿ ರೈತರು ಜಾನುವಾರುಗಳ ಸಾಕಾಣಿಕೆಯನ್ನು ಕಡಿಮೆ ಮಾಡಿದ್ದಾರೆ.

ನಾಗರ ಪಂಚಮಿ

ಋತು ಸಂವತ್ಸರದ ಶ್ರಾವಣಮಾಸದಲ್ಲಿ ಆಚರಿಸುವಂತಹ ಹಬ್ಬ ಈ ನಾಗರ ಪಂಚಮಿ ಹಬ್ಬ. ಈ ಹಬ್ಬ ಸ್ತ್ರೀಯರಿಗೆ ವಿಶೇಷ ಪ್ರಾಧಾನ್ಯತೆಯನ್ನ ನೀಡುವಂತಹ ಹಬ್ಬವಾಗಿ ಆಚರಿಸಲಾಗುತ್ತದೆ. ಇದನ್ನು ನಾಗರ ಪಂಚಮಿ, ನಾಗರಅಮವಾಸೆ, ನಾಗಚೌತಿ, ಪಂಚಮಿಹಬ್ಬ ಎಂದೆಲ್ಲ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಹಬ್ಬದಲ್ಲಿ ವಿಶೇಷವಾಗಿ ಹೊಸದಾಗಿ ಮದುವೆಯಾದ ಹೆಣ್ಣುಮಗಳನ್ನು ಗಂಡನ ಮನೆಯಿಂದ ತವರಿಗೆ ಕರೆಸಿಕೊಂಡು ಅವಳಿಗೆ ಬಟ್ಟೆಯನ್ನು ಉಡುಗೊರೆಯಾಗಿ ನೀಡುತ್ತಾರೆ, ಹಾಗೆಯೇ ಮಕ್ಕಳನ್ನು ಹೊಂದಿದ ಹೆಣ್ಣುಮಕ್ಕಳನ್ನು ತವರಿಗೆ ಕರೆದುಕೊಂಡು ವಿಶೇಷ ಉಪಚಾರ ಮಾಡುತ್ತಾರೆ.

ಈ ಶುದ್ದ ಶ್ರಾವಣ ಪಂಚಮಿಯ ದಿನವೇ ನಾಗರಪಂಚಮಿ ಹಬ್ಬವನ್ನು ಆಚರಿಸಲಿಕ್ಕೆ ಜನಪದರಲ್ಲಿ ಒಂದು ಮೌಖಿಕ ಕತೆಯೇ ಇದೆ. ಆ ಕತೆಯೇ ಈ ಹಬ್ಬದ ಆಚರಣೆಗೆ ಪ್ರೇರಣೆಯಾಗಿದೆ ಎಂದು ಜನಪದರು ಹೇಳುತ್ತಾರೆ. ಆಷಾಡ ಮುಗಿದು ಶ್ರಾವಣ ಕಾಲಿರುಸುತ್ತಿದ್ದಂತೆ ಗಂಡನ ಮನೆಯಲ್ಲಿರುವ ಹೆಣ್ಣುಮಕ್ಕಳು ತವರಿನಿಂದ ಬರುವ ಕರೆಯೋಲೆಯನ್ನು ಎದುರು ನೋಡುತ್ತಿರುತ್ತಾರೆ.

ಪಂಚಮಿ ಹಬ್ಬಕ ಕರಿಯಾಕಂತ
ಅಣ್ಣ ಬರಲಿಲ್ಲ ಯಾಕಾ

ಎಂಬಂತಹ ಜನಪದ ಗೀತೆ ಈ ಹಬ್ಬಕ್ಕೆ ವಿಶೇಷವಾಗಿ ಹೊಂದುತ್ತದೆ. ಈ ಹಬ್ಬ ಸೋದರ-ಸೋದರಿಯರ, ಅಣ್ಣ-ತಂಗಿ, ಅಕ್ಕ-ತಮ್ಮ ಇವರ ನಡುವಿನ ಬಾಂಧವ್ಯವನ್ನು ಬೆಸೆಯುವ, ಪರಸ್ಪರ ಸೋದರಿಕೆ ಪ್ರೀತಿಯನ್ನು ಎತ್ತಿತೋರಿಸುವಂತಹ ಹಬ್ಬವಾಗಿದೆ. ಇಲ್ಲಿ ಹೆಣ್ಣು ಮಕ್ಕಳಿಗಿರುವ ತವರಿನ ಪ್ರೀತಿಯನ್ನು ಬಹಳಷ್ಟು ಮೌಲ್ಯಯುತವಾಗಿ ಕಾಣಿಸುವಂತಹ ಹಬ್ಬವೆಂದರೆ ಈ ನಾಗರಪಂಚಮಿ ಹಬ್ಬವಾಗಿದೆ.

ನಾಗರ ಪಂಚಮಿ ಹಬ್ಬದಲ್ಲಿ ಹೆಣ್ಣು ಮಕ್ಕಳು ಶ್ರಾವಣದ ಅಮವಾಸೆ ದಿನದಿಂದ ಪ್ರತಿ ಶನಿವಾರ-ಸೋಮವಾರಗಳಂದು ವಿಶೇಷ ಪೂಜೆಪುನಸ್ಕಾರಗಳನ್ನು ಮಾಡುತ್ತಿದ್ದು ಹತ್ತಿರದ

ಹುತ್ತದಲ್ಲಿಗೆ ಹೋಗಿ ಹಾಲನ್ನು ಹಾಕಿಬರುತ್ತಾರೆ. ಇಲ್ಲವೆ ಕಲ್ಲಿನ ಹಾವಿನ ಮೂರ್ತಿಗಳಿಗೆ ಹಾಲೆರೆದು ತಮ್ಮ ಭಕ್ತಿಯನ್ನು ಮೆರೆಸುತ್ತಾರೆ. ಮನೆಯಲ್ಲಿ ಸಿಹಿ ಊಟಮಾಡಿಕೊಂಡು, ನಕ್ಕು ನಲಿಯುತ್ತಾರೆ. ಮೊದಲನಾಗರ ಅಮವಾಸ್ಯೆ ದಿನ ಪಂಚಮಿಯೆಂದು, ಎರಡನೇ ದಿನ ನಾಗಚೌತಿ ಎಂದು, ಮೂರನೇ ದಿನ ನಾಗರ ಪಂಚಮಿಯೆಮದು ಪ್ರಥಮವಾಗಿ ಮೂರು ದಿನಗಳ ಕಾಲ ಈ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ.

ಇಂದು ಈ ಪಂಚಮಿ ಹಬ್ಬವನ್ನು ರಕ್ಷಾಬಂಧನದ ಹಬ್ಬವೆಂತಲೂ ಕರೆಯುತ್ತಾರೆ. ಬೇರೆ ಬೇರೆ ಊರುಗಳಲ್ಲಿರುವ ಅಣ್ಣಂದಿರು–ತಮ್ಮಂದಿರು, ತಮ್ಮ ಮನೆಯ ಅಕ್ಕ–ತಂಗಿಯರಿಂದ ರಕ್ಷಾ ಬಂಧನವನ್ನು ಕಟ್ಟಿಸಿಕೊಳ್ಳಲು ಮನೆಗೆ ಬರುತ್ತಾರೆ. ಇದರಿಂದ ಅವರ ನಡುವಿನ ಬಾಂಧವ್ಯ ಪ್ರೀತಿ, ಪ್ರೇಮ, ಗೌರವಗಳು ಇನ್ನಷ್ಟು ಗಟ್ಟಿಗೊಂಡು ಅದು ಚಿರಕಾಲ ಇರುವಂತೆ ಹಾರೈಸುತ್ತಾರೆ. ಹಾಗಾಗಿ ಈ ಹಬ್ಬಕ್ಕೆ ಸ್ತ್ರೀಯರಿಗೆ ವಿಶೇಷ ಮಹತ್ವ ನೀಡಲಾಗುತ್ತದೆ.

ದಸಾರ ಹಬ್ಬ

ನಾಡಿನ ಬಹುದೊಡ್ಡ ಹಬ್ಬ ದಸರಾಹಬ್ಬ. ನಮ್ಮ ಹಿಂದೂಧರ್ಮದಲ್ಲಿ ಬಹಳ ವಿಚಿತ್ರವಾದ ಹಬ್ಬಗಳನ್ನು ಆಚರಿಸಿಲಾಗುತ್ತದೆ. ಒಂದೊಂದು ಹಬ್ಬಕ್ಕೂ ಅವುಗಳದೇ ಆದ ಇತಿಹಾಸ, ಆಚರಣೆಯ ಪದ್ದತಿ ವಿಧಿ–ವಿಧಾನ, ರೂಢಿಸಿಕೊಂಡು ಬಂದಂತಹ ರೀತಿ ರಿವಾಜುಗಳು, ಕಟ್ಟಲೆಗಳು ಇವೆಲ್ಲಾ ಪ್ರತಿಯೊಂದು ಹಬ್ಬದಲ್ಲೂ ಕಂಡುಬರುತ್ತವೆ. ಸ್ತ್ರೀಯರಿಗೆ ವಿಶೇಷ ಗೌರವ ಮಹತ್ವವಿರುವ ಹಬ್ಬ, ದನಕರುಗಳನ್ನು ಪೂಜಿಸುವ ಅವುಗಳಿಗೆ ಮನುಷ್ಯ ಪ್ರಪಂಚದಲ್ಲಿ ಪ್ರಮುಖ ಸ್ಥಾನವನ್ನು ನೀಡಿ ಅವಗಳನ್ನು ಗೌರವಿಸುವ ಹಬ್ಬ, ಹೀಗೆ ತೆರ–ತೆರನಾದ ಧಾರ್ಮಿಕ ನೆಲೆಗಳಲ್ಲಿ, ಸಂಪ್ರದಾಯ ಬದ್ದವಾಗಿ ಪರಂಪರೆಯಿಂದಲೂ ಆಚರಿಸಿಕೊಂಡು ಬರುವುದು ನಮ್ಮ ಹಿಂದೂ ಸಂಪ್ರದಾಯದಲ್ಲಿ ಇಂದಿಗೂ ಮರೆಯಾಗಿಲ್ಲ.

ಈ ದಸರಾಹಬ್ಬಕ್ಕೆ ವಿಜಯದಶಮಿಹಬ್ಬ, ನವರಾತ್ರಿ, ಮಹಾನವಮಿ, ಎಂದೆಲ್ಲಾ ಕರೆಯುತ್ತಾರೆ. ವಿಶೇಷವಾಗಿ ನಮ್ಮ ಕನ್ನಡ ನಾಡಿನ ಪ್ರಸಿದ್ದ ನಾಡಹಬ್ಬ, ಇಂದು ಮೈಸೂರಿನಲ್ಲಿ ನಡೆಯುವ ದಸರಾ ಉತ್ಸವ ದೇಶ ವಿದೇಶಗಳಲ್ಲಿಯೂ ತನ್ನ ಪ್ರಖ್ಯಾತಿಯನ್ನು ಗಳಿಸಿದೆ ಈ ಹಬ್ಬವನ್ನು ವೀಕ್ಷಿಸಲು ನೂರಾರ, ಸಾವಿರಾರು ಜನರು ಹಲವಾರು ಪ್ರದೇಶಗಳಿಂದ ದಸಾರಾ ನೋಡಲು ಜಮಾಯಿಸುತ್ತಾರೆ. ಇಂತಹ ಹಬ್ಬ ನಮ್ಮ ಕರ್ನಾಟಕದಲ್ಲಿ ಅತ್ಯಂತ ಸಂಭ್ರಮ ಸಡಗರ, ವೈಭವ ಪೂರಿತವಾಗಿ ಆಚರಿಸಲಾಗುತ್ತದೆ.

ಕಲ್ಲು ಕಡಬವ ಮಾಡಿ, ಮುಳ್ಳು ಶ್ಯಾವಿಗೆ ಮಾಡಿ
ಬನ್ನೀ ಎಲಿಯಾಗ ಎಡಿ ಮಾಡಿ ಪಾಂಡವರು

ಉಂಡೋ ಹೋಗ್ಯಾರೋ ವನವಾಸ,
ಬನ್ನಿಯ ಗಿಡದಾಗ ಬಾಣ ಇಟ್ಟೇವಿ ತಾ
ಯಾರು ಬಂದರೂ ಕೊಡಬ್ಯಾಡ, ಹಡದವ್ವ
ಆರು ಜನ ಬಂದರ ಕೊಡಬೇಕ.[೪]

ಎಂಬ ಪ್ರಸಿದ್ಧ ಜನಪದ ಹಾಡುಗಳಿಂದ ಈ ದಸರಾಹಬ್ಬದ ಮೌಲ್ವಿಕ ಮಹತ್ವವನ್ನು ಸಾಮಾನ್ಯ ಜನಪದರು ಅತ್ಯಂತ ಸ್ಪಷ್ಟವಾಗಿ ಚಿಕ್ಕ ಚಿಕ್ಕ ಪದಗಳಲ್ಲಿ ತ್ರಿಪದಿಯ ರೂಪದಲ್ಲಿ ಹಿಡಿದಿಟ್ಟಿದ್ದಾರೆ. ಇದರ ಪ್ರಾಚೀನತೆಯನ್ನು ಗಮನಿಸಿದಾಗ ಇದು ನಮ್ಮನ್ನು ಮಹಾಭಾರತದ ಕಾಲಕ್ಕೆ ಕೊಂಡೊಯ್ಯುತ್ತದೆ.

ಬನ್ನಿ ಮಹಾಕಾಳಿಯಮ್ಮನ ಪೂಜೆ ಈ ಸಮಯದಲ್ಲಿ ಬಹಳ ಮಹತ್ವದ ಪೂಜೆ ಗ್ರಾಮೀಣ ಪ್ರದೇಶಗಳಲ್ಲಿ ಈ ಹಬ್ಬ ಬಂತೆಂದರೆ ಹಬ್ಬದ ಹಿಂದಿನ ಮೂರು-ನಾಲ್ಕು ದಿನಗಳಿಂದಲೂ ಮನೆಗಳಲ್ಲಿ ಸ್ವಚ್ಚತೆ, ಕೆಲಸಗಳ ನಡೆದಿರುತ್ತವೆ. ಮನೆಗಳಿಗೆ ಸುಣ್ಣ ಬಳಿಯುವುದು, ಬಟ್ಟೆ-ಬರೆಗಳನ್ನು ಸ್ವಚ್ಚಮಾಡುವುದು ಮುಂತಾದ ಕೆಲಸಗಳಲ್ಲಿ ಮನೆಮಂದಿಯೆಲ್ಲಾ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಮೊದಲದಿನ ಅಮವಾಸ್ಯೆ, ನಂತರ ಪ್ರತಿಪದ ದ್ವಿತೀಯ, ತೃತಿಯಾಗಳೆಂದರೆ ಮೂರುದಿನ-ರೋಗ-ರುಜನ, ದುಃಖ-ದುಮ್ಮಾನಗಳ ಪರಿಹಾರಕ್ಕಾಗಿ ದುರ್ಗಾ ಪೂಜೆಯನ್ನು ಕೈಗೊಳ್ಳುತ್ತಾರೆ. ಎರಡನೆಯದಾಗಿ ಚತುರ್ಥಿ, ಪಂಚಮಿ, ಷಷ್ಠಿ ಈ ಮೂರು ಸುಖ-ಸಂಪತ್ತು ಸಮೃದ್ಧಿಗೊಳ್ಳುವಂತೆ ಲಕ್ಷ್ಮಿಯನ್ನು ಆರಾಧಿಸುವರು, ಮೂರನೆಯದಾಗಿ ಸಪ್ತಮಿ, ಅಷ್ಟಮಿ, ನವಮಿ ಈ ಮೂರುದಿನ ವಿದ್ಯಾ, ಬುದ್ಧಿ ಜ್ಞಾನಗಳು ಹೆಚ್ಚಲೆಂದು ಸರಸ್ವತಿಯನ್ನು ಪೂಜಿಸುವರು, ಹೀಗೆ ಮೂರು ಹಂತಗಳಲ್ಲಿ ಶಕ್ತಿಪೂಜೆ ನಡೆಯುವುದರಿಂದ ಈ ಹಬ್ಬಕ್ಕೆ ನವರಾತ್ರಿ ಮಹಾನವಮಿ ಎಂದು ಕರೆಯುವರು, ನಾಲ್ಕನೆಯದಾಗಿ ಈ ಹಬ್ಬದ ಪರಿಸಮಾಪ್ತಿಯೆಂಬಂತೆ ಬರುವ ಹತ್ತನೆಯ ದಿನವೇ ದಶಮಿ, ಅದನ್ನೆ ವಿಜಯದಶಮಿ ಎನ್ನುತ್ತಾರೆ. 'ದಶಹರ' ಎಂದರೆ ಹತ್ತು ದಿನಗಳ ರಾತ್ರಿ ಹಬ್ಬವನ್ನು ಆಚರಿಸುವುದರಿಂದ 'ದಸರಾ' ಎಂಬ ಹೆಸರೂ ಬಂದಿದೆ.[೫]

ದಸರಾ ಹಬ್ಬದ ಅಮವಾಸೆ ದಿನದಂದು ಗ್ರಾಮೀಣ ಪ್ರದೇಶಗಳಲ್ಲಿನ ಜನರು ತಮ್ಮ ಮನೆಗಳಲ್ಲಿರುವ ವೃತ್ತಿ ಸಾಮಾಗ್ರಿಗಳಿಗೆ, ಮೊಚ್ಚು, ಕೊಡಲಿ, ಕುಡುಗೋಲು, ಕೃಷಿ ಸಾಮಾಗ್ರಿಗಳಾದ ಮಡಕೆ, ಕುಂಟೆ, ತಾವು ಉಪಯೋಗಿಸುವ ವಾಹನಗಳಿಗೆ- ಸೈಕಲ್, ಸ್ಕೂಟರ್, ಟ್ರಾಕ್ಟರ್, ಬಂಡಿ, ಮುಂತಾದವುಗಳಿಗೆ ಪೂಜೆಯನ್ನು ಮಾಡುತ್ತಾರೆ. ಇದು

ಮಹಾಭಾರತದಲ್ಲಿ ಪಾಂಡವರು ತಮ್ಮ ವನವಾಸ ಮುಗಿಸಿ ಯುದ್ದಕ್ಕೆ ಹೋಗುವಾಗ ತಮ್ಮ ಆಯುಧಗಳಿರುವ ಬನ್ನಿಮರದ ಹತ್ತಿರ ಹೋಗಿ ತಮ್ಮ ಆಯುಧಗಳನ್ನು ತೆಗೆದುಕೊಂಡು ಅವುಗಳಿಗೆ ಪೂಜೆ ಸಲ್ಲಿಸಿ ನಂತರ ಯುದ್ಧ ರಂಗಕ್ಕೆ ಹೊರಟು ಯುದ್ಧದಲ್ಲಿ ಜಯಗಳಿಸುತ್ತಾರೆ. ಇದರ ಪ್ರತೀತಿಯಾಗಿ ಜನರೂ ಸಹ ಇಂದಿಗೂ ಈ ಪೂಜೆಯನ್ನು ಖಡ್ಡಾಯವಾಗಿ ಪಾಲಿಸಿಕೊಂಡು ಬಂದಿದ್ದಾರೆ.

ಈ ಹಬ್ಬದ ಇನ್ನೊಂದು ವಿಶೇಷತೆಯೆಂದರೆ ಪ್ರಾರಂಭದ ಅನುವಾಸ್ಯದಿನದಿಂದ ಒಂಬತ್ತುದಿನಗಳವರೆಗೆ ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು, ಹದಿಹರೆಯದ ಹುಡುಗಿಯರು ಮತ್ತು ಮತ್ತಿತರ ಹೆಂಗಸರು ಬೆಳಗಿನ ಜಾವದಲ್ಲಿ ಅಂದರೆ ಬೆಳಗಿನ ಮೂರುಗಂಟೆಯಿಂದಲೇ ಬನ್ನಿ ಮಹಾಕಾಳಿ ಮರದ ಪೂಜೆಯಲ್ಲಿ ತೊಡಗುತ್ತಾರೆ. ಒಬ್ಬರು ಪೂಜೆ ಮಾಡುವುದನ್ನು ಬೇರೊಬ್ಬರು ನೋಡಬಾರದು ಎಂಬ ಉದ್ದೇಶದಿಂದ ನಾ ಮೊದಲು ತಾ. ಮೊದಲು ಎಂಬಂತೆ ಸ್ತ್ರೀಯರು ಯಾರಿಗೂ ಕಾಣದಂತೆ/ ಇತರೆ ಜನರಿಗೆ ತಿಳಿಯಬಾರದೆಂದು ಮಡಿಯಲ್ಲಿಯೇ ಪೂಜೆಯನ್ನು ಮಾಡುತ್ತಾರೆ. ಇದರಿಂದ ಮಕ್ಕಳ ಫಲಪ್ರಾಪ್ತಿ, ಉತ್ತಮ ವರ ಫಲ, ಸುಖ-ಸಂತೋಷದ ಬಾಳು, ಆರೋಗ್ಯ, ಒಟ್ಟಾರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿಂದ ಈ ಪೂಜೆ ಕೈಗೊಳ್ಳುತ್ತಾರೆ. ಇದು ಸ್ತ್ರೀಯರಷ್ಟೇ ಕೈಗೊಳ್ಳುವ ಒಂದು ವ್ರತ. ಒಂಬತ್ತು ದಿನಗಳ ಕಾಲವೂ ಹೀಗೆ ಪೂಜೆ ಮಾಡಲಾಗುತ್ತದೆ.

ದಶಮಿಯಂದು ಊರಿನ ಜನರೆಲ್ಲ ಸೇರಿಕೊಂಡು ವಾದ್ಯಗಳೊಂದಿಗೆ ಹೋಗಿ ಬನ್ನಿ ಮರಕ್ಕೆ ವಿಶೇಷ ಪೂಜೆ ಸಲ್ಲಿಸಿ ಅಲ್ಲಿಂದಲೇ ಬನ್ನಿಪತ್ರಿಯನ್ನು ವಿಲೇವಾರಿ ಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. 'ಬನ್ನಿ ತೊಗೊಂಡು ಬಂಗಾರದಂಗಿರು' ಎಂದು ಶುಭಕೋರುತ್ತಾರೆ. ಕಿರಿಯರೆಲ್ಲ ಹಿರಿಯರಿಗೆ ಮನೆಯ ತಂದೆ-ತಾಯಿ-ಅಣ್ಣ, ಅಕ್ಕ-ಅತ್ತೆ, ಮಾವ, ತಾತ, ಅಜ್ಜಿಯರಿಗೆ ಕಾಲಿಗೆ ಮುಗಿದು ಅವರ ಆರ್ಶಿವಾದವನ್ನು ಪಡೆಯುತ್ತಾರೆ. ಇದರಿಂದ ಕಿರಿಯರಿಗೆ ಶುಭವಾಗುತ್ತದೆ ಎಂಬ ಅಚಲ ನಂಬಿಕೆಯಿಂದ ಈ ಹಬ್ಬವನ್ನು ಭಕ್ತಿಯಿಂದ ಆಚರಿಸುತ್ತಾರೆ ಇದು ಇಡೀ ಆ ಊರಿನ ಸಹಬಾಳ್ವೆಯನ್ನು ತೋರಿಸುತ್ತದೆ.

ದೀಪಾವಳಿ

ಗ್ರಾಮದ ತುಂಬ ಎಲ್ಲೆಲ್ಲೂ ಝುಗಝುಗಿಸುವ ದೀಪಾಲಂಕಾರದಿಂದ ಕೂಡಿದ ಮನೆಗಳು, ದೇವಸ್ಥಾನಗಳು, ಇಡೀ ಊರೇ ದೀಪದ ಜ್ಯೋತಿ ಬೆಳಕಿನಲ್ಲಿ ಪ್ರಜ್ವಲಿಸುತ್ತಿರುತ್ತದೆ. ಈ ದೀಪಾವಳಿ ಹಬ್ಬದಲ್ಲಿ. ಇದು ಸಹ ನಮ್ಮ ನಾಡಿನ ಹಬ್ಬಗಳಲ್ಲಿ ಪ್ರಮುಖವಾದುದು. ನಗರ ಪ್ರದೇಶಗಳಲ್ಲಿ ಪಟಾಕಿಗಳನ್ನು ಸುಡುವುದರ ಮೂಲಕ ಬಹಳ ವಿಜೃಂಭಣೆಯಿಂದ

ಆಚರಿಸಲಾಗುತ್ತದೆ. ಮೊಳಕಾಲ್ಮೂರು ಗ್ರಾಮದಲ್ಲಿ ಸಹ ಅಷ್ಟೊಂದು ವಿಜೃಂಭಣೆಯಿಂದ ಇಲ್ಲವಾದರೂ ಜನರ ಯೋಗ್ಯತಾನುಸಾರ ಈ ಹಬ್ಬವನ್ನು ಅತ್ಯಂತ ಸಡಗರದಿಂದಲೇ ಆಚರಿಸುತ್ತಾರೆ. ಊರಿನ ಶ್ರೀಮಂತರ ಮನೆಗಳಲ್ಲಿ ವಿಶೇಷ ಲಕ್ಷ್ಮಿ ಪೂಜೆಯಿರುತ್ತದೆ. ಅಂಗಡಿ-ಹೋಟೆಲ್‌ಗಳಲ್ಲಿಯೂ ಲಕ್ಷ್ಮಿ ಪೂಜೆ ಮಾಡುತ್ತಾರೆ. ಇದರಿಂದ ಮನೆಯ-ಅಂಗಡಿ ಹೋಟೆಲ್‌ಗಳ ಅಭಿವೃದ್ದಿ ಇನ್ನೂ ಹೆಚ್ಚಿನ ಮಟ್ಟದ್ದಾಗುತ್ತದೆ. ಇನ್ನಷ್ಟು ಉತ್ತಮ ಸ್ಥಿತಿಯನ್ನು ಹೊಂದಬಹುದೆಂಬ ಆಕಾಂಕ್ಷೆಯಿಂದ ಈ ದೀಪಾವಳಿ ಹಬ್ಬದಂದು ಲಕ್ಷ್ಮಿ ಪೂಜೆಯನ್ನು ಮಾಡುತ್ತಾರೆ.

ಚಿಕ್ಕವರು, ದೊಡ್ಡವರು, ಮಕ್ಕಳು, ಮುದುಕರು ಎನ್ನದೆ ಎಲ್ಲರೂ ಸಡಗರದಲ್ಲಿ ಪಾಲ್ಗೊಂಡು ವಿಧವಿಧದ ಪಟಾಕಿಗಳನ್ನು ಸಿಡಿಸಿ ಸಂಭ್ರಮದಿಮದ ನಲಿಯುತ್ತಾರೆ. ಮನೆ ಮಠಗಳಲ್ಲಿ ಅಂದು ಬೆಳಕಿನ ಮಹಾಪೂರವೇ ಇರುತ್ತದೆ. ಕುಟುಂಬಗಳಲ್ಲಿ ಅಕ್ಕ, ತಂಗಿ, ಸೊಸೆಯಂದಿರಿಗೆ ಉಡುಗೊರೆಯಾಗಿ ಅವರವರ ಆರ್ಥಿಕತೆಗೆ ಹೊಂದಿದಂತೆ ಬಟ್ಟೆ, ಬಂಗಾರ, ಹಣವನ್ನು ನೀಡಿ ಸತ್ಕರಿಸುತ್ತಾರೆ. ಹೀಗೆ ನೀಡಿ ಸತ್ಕರಿಸುವುದರಿಂದ ಮನೆಯಲ್ಲಿ ಯಾವುದೇ ತೊಂದರೆಗಳು ಸಂಭವಿಸದೆ ಅಭಿವೃದ್ದಿ, ಐಶ್ವರ್ಯ ಇನ್ನಷ್ಟು ವೃದ್ಧಿಸುತ್ತದೆ.

ಸಂಕ್ರಾಂತಿ

ಸಂಕ್ರಾಂತಿ ಹಬ್ಬ ಜನವರಿ ತಿಂಗಳ ಮಧ್ಯದಲ್ಲಿ ಆಚರಿಸಲಾಗುತ್ತಿದ್ದು ಇಡೀ ಗ್ರಾಮವೆಲ್ಲಾ ಚೆಲುವಿನ, ರಂಗುರಂಗಿನ, ವರ್ಣರಂಜಿತ ಚಿತ್ತಾರಗಳಿಂದ ಕೂಡಿರುತ್ತದೆ. ಇದೇ ಈ ಹಬ್ಬದ ವಿಶೇಷತೆ ಮನೆಗಳ ಮುಂದಿನ ಅಂಗಳದಲ್ಲಿ ಹಬ್ಬದಂದು ಸಣ್ಣ-ದೊಡ್ಡ ರಂಗೋಲಿಗಳನ್ನು ಹಾಕುತ್ತಿದ್ದು, ಅವುಗಳಿಗೆ ಹಲವು ಬಣ್ಣಗಳಿಂದ ಅಲಂಕರಿಸುತ್ತಾರೆ ಶೃಂಗರಿಸುತ್ತಾರೆ.

ಈ ಸಂಕ್ರಾಂತಿ ಹಬ್ಬದ ವಿಶೇಷತೆಯೆಂದರೆ ಹಬ್ಬದ ದಿನ ಯಾರೇ ಭಿಕ್ಷೆ ಬೇಡಲು ಬಂದರೂ ಇಲ್ಲ ಎನ್ನದೆ ಕಾಳು-ದುಡ್ಡು-ಬಟ್ಟೆಗಳನ್ನು ನಿಡುತ್ತಾರೆ. ಜೋಗತಿಯರು, ದಾಸಯ್ಯರುಗಳು, ಸ್ವಾಮಿಜಿಗಳು, ಜಂಗಮರು ಮುಂತಾದ ಯಾರೇ ಕೇಳಲು ಬಂದರು ಯಾರ ಮನೆಯಲ್ಲೂ ಕೋಡುವುದಿಲ್ಲವೆನ್ನದೆ ತಮ್ಮ ಕೈಲಾದಷ್ಟು ದಾನಕೊಟ್ಟು ಕಳಿಸುತ್ತಾರೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ರೂಡಿ ಸಂಪ್ರದಾಯಗಳಲ್ಲಿ ಶ್ರೇಷ್ಠವಾದುದಾಗಿದೆ.

ಶಿವರಾತ್ರಿ

ಶಿವ ಶಿವ ಎಂದರೆ ಭಯವಿಲ್ಲ
ಶಿವ ನಾಮಕೆ ಸಾಟಿ ಬೇರಿಲ್ಲ

ಎಂಬ ಭಕ್ತಿವಾಣಿ ಎಷ್ಟು ಮಧುರವಾಗಿದೆ, ಜನರಲ್ಲಿ ಶಿವನ ಮೇಲಿರುವ ಭಕ್ತಿ ಅಚಲವಾದುದು. ಅಗಾದವಾದುದು. ಈ ನಂಬಿಕೆಯನ್ನು ಹೋಗಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಶಿವರಾತ್ರಿಯಂದು ಗ್ರಾಮದಲ್ಲಿರುವ ಎಲ್ಲಾ ದೇವಾಲಯಗಳಿಗೂ ವಿಶೇಷ ಪೂಜೆ ಅದರಲ್ಲಿ ಶಿವದೇವಾಲಯ ಅಥವಾ ಈಶ್ವರ ದೇವಾಲಕ್ಕೆ ಮುಂಜಾನೆಯಿಂದ ರಾತ್ರಿಯೆಲ್ಲಾ ಪೂಜೆ-ಪುನಸ್ಕಾರಗಳು ನಡೆಯುತ್ತಲೇ ಇರುತ್ತವೆ.

ರಾತ್ರಿಯಲ್ಲಿ ದೇವಸ್ಥಾನವದ ಬಳಿ ಭಜನೆ, ಹಾಡುಗಳನ್ನು ಹಾಡುವುದು, ಜನಪದ ಗೀತೆ, ಲಾವಣಿಗಳನ್ನು ಹಾಡುತ್ತ ಈ ಹಾಡುಗಳಲ್ಲಿ ಶಿವನನ್ನು ವರ್ಣಿಸುತ್ತಾ, ಅವನ ಬಗ್ಗೆ ಕೊಂಡಾಡುವ ಹಾಡುಗಳೇ ಹೆಚ್ಚಾಗಿ ಹಾಡುತ್ತಾರೆ. ಭಕ್ತಾದಿಗಳು, ರಾತ್ರಿಯೆಲ್ಲ. ಸಂಪೂರ್ಣಜಾಗರಣೆ ಮಾಡುತ್ತಿದ್ದು ಅವರ ಅಚಲ ಭಕ್ತಿಯನ್ನು ತೋರಿಸುತ್ತದೆ. ಹೀಗೆ ರಾತ್ರಿಯೆಲ್ಲಾ ನಿದ್ದೆಮಾಡದೇ ಕೆಲಜನ ಭಕ್ತಿ ಕಾರ್ಯಗಳನ್ನು ಮಾಡಿದರೆ, ಕೆಲಜನ ನಿದ್ದೆಯನ್ನು ಹೋಗಲಾಡಿಸಲೋಸುಗ ಸಿನೆಮಾ, ಟಿ.ವಿ (ಪುರುಷರು ಇಸ್ಪೀಟ್ ಆಟ ಆಡುವುದು) ನೋಡುವುದನ್ನು ಮಾಡುತ್ತಾರೆ. ಹೀಗೆ ಈಶಿವರಾತ್ರಿ ಹಬ್ಬದಂದು ಭಕ್ತಾದಿಗಳು ತಮ್ಮ ವಿವಿಧ ಧಾರ್ಮಿಕ ಚಟುವಟಿಕೆಗಳನ್ನು ಆಚರಿಸುವುದರ ಮುಖಾಂತರ ಹಬ್ಬದ ವಾತಾವರಣವನ್ನು ಸವಿಯುತ್ತಾರೆ.

ಮೋಹರಂ ಹಬ್ಬ

ಮೋಹರಂ ಹಬ್ಬವನ್ನು ಹಿಂದೂ-ಮುಸ್ಲಿಂ ಧರ್ಮದವರಿಬ್ಬರೂ ಆಚರಿಸುವಂತಹ ಪರಸ್ಪರ ಭಾವೈಕ್ಯತೆಯ ಹಬ್ಬವಾಗಿದೆ. ಈ ಹಬ್ಬದಲ್ಲಿ ಮೊಹರಂ ದೇವರ ಪೂಜಾರಿಗಳು ಮುಸ್ಲೀಂರೇ ಆಗಿದ್ದರೂ ಇತರೆ ಧಾರ್ಮಿಕ ಚಟುವಟಿಕೆಗಳಲ್ಲಿ ಹಿಂದುಗಳು ಸಹ ಸೇರಿಕೊಂಡು ಹಬ್ಬವನ್ನಾಚರಿಸುತ್ತಾರೆ.

ಹೋಳಿಹಬ್ಬ

ಮೊಳಕಾಲ್ಮೂರು ಗ್ರಾಮದಲ್ಲಿ ಹೋಳಿಹುಣ್ಣಿಮೆ ದಿನ ಹಿಂದೂ ಸಂಪ್ರದಾಯದಂತೆ ಈ ಹಬ್ಬವನ್ನು ಆಚರಿಸುಲಾಗುತ್ತಿದ್ದು ಹುಣ್ಣಿಮೆಯ ದಿನ ಊರಿನ ಹೆಂಗೆಳೆಯರೆಲ್ಲ, ಯುವಕ, ಯುವತಿಯರೆನ್ನದೆ ಎಲ್ಲಿರೂ ಕೂಡಿ ಬಣ್ಣವನ್ನು ಚೆಲ್ಲಾಡಿ ಹಬ್ಬದ ಪರಿಸರವನ್ನು ಕಲ್ಪಿಸುತ್ತಾರೆ. ಗ್ರಾಮದ ದೊಡ್ಡ ಪೇಟೆಬೀದಿ, ಪದ್ಮಸಾಲಿ ಜನಾಂಗ ಮತ್ತಿತರ ಮೇಲ್ಜಾತಿ ವರ್ಗದವರು ಹಾಗೂ ಇತರೆ ಶಿಕ್ಷಣ ಪಡೆದ ಯುವಕ ಜನಾಂಗದವರು ಮಾತ್ರ ಈ ಹಬ್ಬವನ್ನು ಆಚರಿಸಲಾಗುತ್ತಿದ್ದು ಇದನ್ನು ಕಂಡು ಕೆಲವ ವಯಸ್ಸಾದ ಮುದುಕ ಮುದುಕಿಯರು ಇದನ್ನು ವಿರೋಧ ಮಾಡುತ್ತಾರೆ. ಹಾಗೆಲ್ಲಾ ಚೆಲ್ಲುಚೆಲ್ಲಾಗಿ ವರ್ತಿಸಲಾರದೆಂದು ಹಿತವಚನ ಹೇಳುತ್ತಾರೆ. ಆದರೆ ಕೇಳುವವರಾರು, ಯೌವ್ವನಸ್ಥರಿಗೆ ಮಕ್ಕಳಿಗೆ ಈ ಹಬ್ಬ ಬಹಳಮುಜುಗರವನ್ನು

ನೀಡುತ್ತಿದ್ದು ಸ್ನೇಹಿತರೆನ್ನದೆ. ಕಿರಿಯ, ಹಿರಿಯರೆನ್ನದೆ ಎಲ್ಲರೂ ಬಣ್ಣದ ಓಕುಳಿಯನ್ನು ಮಾಡಿಕೊಂಡು, ಬಣ್ಣಗಳನ್ನು ತೆಗೆದುಕೊಂಡು ಕಾಮಣ್ಣನ ಮೂರ್ತಿಯನ್ನು ಸುಟ್ಟು ಊರಿನಲ್ಲೆಲ್ಲಾ ಸುತ್ತಾಡುತ್ತಾ ದಾರಿಯಲ್ಲಿ ಸಿಕ್ಕವರಿಗೆಲ್ಲ ಬಣ್ಣ ಎರಚುತ್ತಾ, ಹಾಡುತ್ತ, ಕುಣಿಯುತ್ತಾ ಮನೋರಂಜನೆಯನ್ನು ಪಡೆಯುತ್ತಾರೆ. ಇದರಿಂದ ಕೆಲವೊಮ್ಮೆ ಸಮಸ್ಯೆಗಳುಂಟಾದರೂ ಯಾವುದನ್ನು ಲೆಕ್ಕಿಸದೆ. ಮೂಗುದಾರ ಹಾಕದ ಹೋರಿಗಳಂತೆ ನುಗ್ಗಿ ರಂಗಿನ ಓಕುಳಿ ಎರಚುತ್ತಾರೆ. ಇದು ಸಂಪ್ರದಾಯದಂತೆ ಮೊಳಕಾಲ್ಮೂರು ಗ್ರಾಮದಲ್ಲಿಯೂ ಆಚರಿಸುತ್ತಾರೆ. ಅತೀ ಹೆಚ್ಚಿನದಾಗಿ ಮೇಲ್ವರ್ಗದವರೇ ಈ ಹಬ್ಬ ಆಚರಿಸುತ್ತಾರೆ. ಕೆಳವರ್ಗದ ಜನತೆಯಲ್ಲಿ ಇದು ಸಾಮಾನ್ಯವೆಬಂತೆ ಇರುತ್ತಾರೆ. ಏಕೆಂದರೆ ಅವರು ಯಾವುದೇ ವಿಷಯದಲ್ಲೂ ಪಾಲ್ಗೊಳ್ಳಲು ದುರ್ಬಲ ಸ್ಥಿತಿಯಿರುವುದರಿಂದ ಇದನ್ನು ಅಷ್ಟಾಗಿ ಪರಿಗಣಿಸಲಾಗುವುದಿಲ್ಲ.

ಮಾರಮ್ಮನ ಜಾತ್ರೆ

ಮೊಳಕಾಲ್ಮೂರುವಿನಿಂದ ಮೂರು ಕಿ.ಮೀ. ಅಂತರದಲ್ಲಿರುವ ಗಾಳಿಮಾರಮ್ಮನ ಗುಡಿ/ದೇವಸ್ಥಾನ ಇಡೀ ಗ್ರಾಮದ ಹೆಣ್ಣುದೇವತೆಯಾಗಿದೆ ಇಲ್ಲಿ ಜಾತ್ರೆ–ಉತ್ಸವವೂ ನಡೆಯುತ್ತಿದ್ದು ಮೂರು ವರ್ಷಕ್ಕೊಮ್ಮೆ ವಿಶೇಷ ಜಾತ್ರಾ ಮಹೋತ್ಸವ ನಡೆಯುತ್ತದೆ. ಹೀಗಾಗಿ ಈ ಮಾರಮ್ಮದೇವಿಯ ಭಕ್ತರು ಜಾಸ್ತಿ ಇದ್ದಾರೆ. ಇದೇ ಮೊಳಕಾಲ್ಮೂರುವಿನಿಂದ ೩೫ಕಿ.ಮೀ ದೂರದಲ್ಲಿರುವ ಗೌರಸಮುದ್ರ ಮಾರಮ್ಮ ಜಾತ್ರೆ ಇಡೀ ಸುತ್ತಮುತ್ತಲೂ ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ದೇವತೆಯಾಗಿದೆ. ಈ ಜಾತ್ರೆಗೆ ದೂರದ ಊರುಗಳಿಂದಲೂ ಭಕ್ತಾದಿಗಳು ತಂಡೋಪತಂಡವಾಗಿ ಬಂದು ದೇವಿಯ ಭಕ್ತಿಗೆ ಪಾತ್ರರಾಗುತ್ತಾರೆ. ಇದರ ಪ್ರೇರಣೆಯಿಂದಲೇ ಮೊಳಕಾಲ್ಮೂರು ಗ್ರಾಮದ ಜನತೆ ತಮ್ಮ ಗ್ರಾಮದಲ್ಲಿ ಮಾರಮ್ಮನ ಪ್ರತಿರೂಪವಾದ ಗಾಳಿಮಾರಮ್ಮನನ್ನು ಊರಿನ ರಕ್ಷಣೆಗಾಗಿ, ಊರಿನ ಒಳ್ಳೆಯದಕ್ಕಾಗಿ ಪ್ರತಿಷ್ಠಾಪಿಸಿದ್ದು ಇದನ್ನು ಮೂರುವರ್ಷಗಳಿಗೊಮ್ಮೆ ವಿಶೇಷ ಕಾಳಜಿಯಿಂದ ಪೂಜಿಸುತ್ತಾರೆ. ವಿಶೇಷವಾಗಿ ಕೆಳ ವರ್ಗದ ಜನರೇ ಹೆಚ್ಚಿನ ಭಕ್ತಾದಿಗಳಿರುವುದು ಈದೇವಿಯ ಒಂದು ವಿಶೇಷತೆ. ಇದಕ್ಕೆ ಜನಪದಿಯವಾಗಿ ಒಂದು ಕತೆ ಇದೆ. ಈ ಹಬ್ಬದ ಸಂದರ್ಭದಲ್ಲಿ ಪ್ರಾಣಿ ಬಲಿ ಹೆಚ್ಚಿನದಾಗಿ ಕಂಡುಬರುತ್ತದೆ.

ಗ್ರಾಮದಲ್ಲಿ ಮೂರುವರ್ಷಗಳಿಗೊಮ್ಮೆ ನಡೆಯುವ ಈ ಹಬ್ಬದಲ್ಲಿ ಸಾವಿರಾರು ಭಕ್ತಾದಿಗಳು ಸೇರಿರುತ್ತಾರೆ. ಜಾತ್ರೆಯ ಹಿಂದಿನ ದಿನ ದೇವಿ ಮೂರ್ತಿಯನ್ನು ಮುತ್ತೈದೆಯರು ಕಳಸ ದೀಪಗಳೊಂದಿಗೆ ಗಂಗೆ ಪೂಜೆ ಮಾಡಿ ರಾತ್ರಿಯೆಲ್ಲ ಮೆರವಣಿಗೆ ಮಾಡುತ್ತಾರೆ. ಊರಲ್ಲಿ, ಹಲವು ವಾದ್ಯ ವೃಂದಗಳಿಂದ ದೇವಿಯನ್ನು ಸಂತುಷ್ಟಗೊಳಿಸುತ್ತಾರೆ. ದೇವಿಗೆ ಹಲವಾರು ಭಕ್ತರು ವಿವಿಧ ರೀತಿಯ ಬೇಡಿಕೆಗಳ ಹರಕೆ ಹೊತ್ತು ಕೋಳಿ–ಕುರಿಗಳಂತಹ ಪ್ರಾಣಿಗಳನ್ನು ಬಲಿಕೊಡುವುದರ ಮುಖಾಂತರ ತಮ್ಮ ಮುಡುಪನ್ನು ತೀರಿಸಿಕೊಳ್ಳುತ್ತಾರೆ.

ದೇವಿಗೆ ಕೆಲ ಜನರು ಬೇವಿನ ಸೀರೆ (ಬೇವಿನಸೊಪ್ಪಿನಿಂದ ಮೈಯನ್ನುದೇಹಕ್ಕೆ ಕಟ್ಟಿಕೊಂಡು ದೇವಸ್ಥಾನದ ಸುತ್ತ ಮೂರು ಸುತ್ತು ತಿರುಗಿ ತಲೆಯ ಮೇಲೆ ಮಣ್ಣಿನ ಬಿಂದಿಗೆಹೊತ್ತು ಪೂಜೆಯಮಾಡಿಕೊಂಡು ಹೋಗುವ ಪದ್ಧತಿ) ತೊಟ್ಟು ಮುಡುಪನ್ನು ತೀರಿಸುತ್ತಾರೆ. ಮಕ್ಕಳಿಂದ ಹಿಡಿದು ಮುದುಕರವರೆಗೂ, ಗಂಡು, ಹೆಣ್ಣೆಂಬ ಭೇದವಿಲ್ಲದೆ ಈ ಹರಕೆಯನ್ನು ಹೋರುತ್ತಾರೆ. ಈ ಹರಕೆಯಿಂದ ಜನರಿಗೆ ಬಂದಂತಹ ಕಷ್ಟ ತೊಂದರೆಗಳು ನಿವಾರಣೆಯಾಗುತ್ತದೆ. ತಾವು ಅಂದುಕೊಂಡಂತಹ ಬೇಡಿಕೆಗಳು ಈಡೇರುತ್ತವೆ ಎಂಬ ಅಚಲ ಸದ್ಭಕ್ತಿ ಜನ ಸಾಮಾನ್ಯರಿಗಿದೆ ಈವೊಂದು ಕಾರಣದಿಂದ ಮಾರಮ್ಮದೇವಿಗೆ ಭಕ್ತರ ಸಂಖ್ಯೆ ಸಾಕಷ್ಟು ಎಂಬ ಮಾತನ್ನು ಹೇಳಬಹುದು.

ದೇವಿಯ ಪ್ರೀತಿ ಪಾತ್ರವಾಹನ ಕೋಣ. ಈ ಕೋಣ ಬಲಿ ಈ ದೇವಿಗೆ ಅತ್ಯಂತ ಪ್ರಿಯವಾದುದು. ದೇವಿಯ ಈ ಕೋಣದ ರಕ್ತವನ್ನು ಕಂಡಾಗಲೇ ಸಮಾಧಾನವಾಗುವುದು. ಆದ್ದರಿಂದ ಗ್ರಾಮದ ಜನತೆ ಈ ಮಾರಮ್ಮದೇವಿಗೆಂದೇ ಊರಿನಲ್ಲಿ ಒಂದು ಕೋಣವನ್ನು ಬಿಡುತ್ತಾರೆ. ಅದನ್ನು ಯಾರು ಹೊಡೆಯುವುದು, ಬಡಿಯುವುದು ಅಥವಾ ಇತರೆ ತೊಂದರೆಗೆ ಒಳಪಡಿಸುವುದಿಲ್ಲ. ಅದನ್ನು ಸ್ವತಂತ್ರವಾಗಿ ತಿರುಗಾಡಲು ಬಿಡುತ್ತಾರೆ. ಆ ಕೋಣ ತನ್ನಿಚ್ಚೆ ಬಂದಂತೆ ಎಲ್ಲಿ ಬೇಕಾದರೂ ತಿರುಗಾಡಬಹುದು. ಯಾರ ಹೊಲಗದ್ದೆಗಳಿಗೆ ಹೋಗಿ ಆಹಾರ ಸೇವಿಸಬಹುದು. ಯಾರೂ ತಡೆಯುವುದಿಲ್ಲ. ಅದನ್ನು ಭಯಭಕ್ತಿಯಿಂದ ಕಾಣುತ್ತಾರೆ. ಅದು ಅಮ್ಮನ (ದೇವಿಯ) ಕೋಣ ಅದನ್ನು ಹೊಡೆದರೆ ನಮಗೆ ಪಾಪ ಬರುತ್ತದೆ ಅಥವಾ ನಾವು ಕಷ್ಟ ತೊಂದರೆಗೆ ಈಡಾಗಬಹುದೆಮಬ ಭಯದಿಂದ ಯಾರೂ ಅದನ್ನು ಮುಟ್ಟಲು ಹೋಗುವುದಿಲ್ಲ. ಹೀಗಾಗಿ ಅದು ಸರ್ವಸ್ವತಂತ್ರ.

ಜಾತ್ರೆಯ ದಿನದಂದು ಅದನ್ನು ಸ್ವಚ್ಛಮಾಡಿ ಶೃಂಗಾರ ಮಾಡಿ ಅದಕ್ಕೆ ವಿಶೇಷ ಬೋಜನ ನೀಡಿ ದೇವಸ್ಥಾನದ ಮುಂದೆ ಕಟ್ಟುತ್ತಾರೆ. ದೇವಿಯ ಪೂಜೆ-ಮೆರವಣಿಗೆ ಎಲ್ಲ ಮುಗಿದ ನಂತರ ದೇವಿಯ ಎದುರಿನಲ್ಲಿ ಆ ಕೋಣವನ್ನು ಸಂಹರಿಸುತ್ತಾರೆ. ಈ ಪದ್ದತಿಯನ್ನು ಸರ್ಕಾರ ನಿಶೇದಿಸುತ್ತಿದ್ದು. ಇದರ ಬಗ್ಗೆ ಕಠಿಣ ಕ್ರಮಕೈಗೊಂಡಿದ್ದರೂ ಸಹ ಇಂದಿಗೂ ಈ ಪದ್ಧತಿ ಜಾರಿಯಲ್ಲಿದೆ. ಯಾರಾದರೂ ಸರ್ಕಾರದ ಅಧಿಕಾರಿಗಳು ಇದಕ್ಕೆ ವಿರೋಧಿಸಿದರೆ ಇಡೀ ಊರಿನ ಜನತೆ ಅಧಿಕಾರಿಗಳ ವಿರುದ್ಧ ದಂಗೆ ಹೇಳುತ್ತಾರೆ. ಜನರ ಧಾರ್ಮಿಕ ಆಚರಣೆಗೆ ತೊಂದರೆ/ ಭಂಗ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳ ವಿರುದ್ದವೇ ದಾವೆಯನ್ನು ಹೂಡುತ್ತಾರೆ. ಇದರಿಂದ ಅಧಿಕಾರಿಗಳು ಕೆಲವೊಂದು ವಿಷಯಗಳಲ್ಲಿ ಕಂಡು ಕಾಣದಂತೆ, ಗೊತ್ತಿದ್ದು ಗೊತ್ತಿಲ್ಲದವರಂತೆ ಸುಮ್ಮನಿದ್ದುಬಿಡುತ್ತಾರೆ. ಜನರ ಹಿತಾಸಕ್ತಿಗೆ ತೊಂದರೆಯನ್ನು

ಉಂಟುಮಾಡದೆ ಊರಿನ ಶಾಂತಿ–ಸುಭೀಕ್ಷೆಗಾಗಿ ಶಾಂತವಾತಾವರಣ ಕಲ್ಪಿಸಲು ತೊಡಗುತ್ತಾರೆ. ಹೀಗಾಗಿ ಈಮಾರಮ್ಮದೇವಿ ಅತ್ಯಂತ ಕ್ರೂರವಷ್ಟೆ ಅಲ್ಲ, ಬೇಡಿದ ಭಕ್ತರಿಗೆ ಬೇಡಿದವರನ್ನು ನೀಡಿ ಜನರ ಭಕ್ತಿಯನ್ನು ಸಂತೋಷದಿಂದ ಸ್ವೀಕರಿಸುತ್ತ ದಿನ ದಿನಕ್ಕೂ ಪೂಜೆ ಸ್ವೀಕರಿಸುತ್ತಾ ಊರನ್ನು ಕಾಯುತ್ತಾ ನಿಂತಿದ್ದಾಳೆ.

ವಿಧಿ–ಸಂಸ್ಕಾರಗಳು

ಮಾನವ ಜೀವನದಲ್ಲಿ ಹುಟ್ಟು ಸಹಜ, ಸಾವುಖಚಿತ, ಇದು ಪ್ರಕೃತಿಯ ನಿಯಮ, ಕೇವಲ ಮಾನವನಿಗಷ್ಟೇ ಅಲ್ಲ ಇಡೀ ಪ್ರಕೃತಿಯ ಪ್ರಾಣಿ ಸಂಕುಲಗಳಿಗೆಲ್ಲ ಈ ಕಟ್ಟಳೆ ಇದ್ದೇ ಇರುತ್ತದೆ. ಮರ, ಗಿಡ, ಪ್ರಾಣಿ, ಪಕ್ಷಿ ಭೂಮಂಡಲದಲ್ಲಿರುವ ಗ್ರಹಗಳು, ನಕ್ಷತ್ರಗಳು, ಎಲ್ಲವಕ್ಕೂ ಅವುಗಳದೇ ಆದ ಆಯಷ್ಯವನ್ನು ಹೊಂದಿರುತ್ತವೆ. ಆ ಆಯುಷ್ಯ ಮುಗಿದ ನಂತರ ಅವು ಸಹ ಮರೆಯಾಗಲೇಬೇಕು, ಇದನ್ನು ವಿಜ್ಞಾನಿಗಳು ಪ್ರಕೃತಿಯ ಸಹಜ ಕ್ರಿಯೆ ಎಂದು ಹೇಳಿದರೆ ಜನಪದರು ಇದನ್ನು ವಿಧಿಬರಹ, ಬ್ರಹ್ಮಬರಹ, ಹಣೆಬರಹ ಎಂದೆಲ್ಲಾ ಕರೆಯುತ್ತಾರೆ.

ಬದುಕು ಜಟಕಾ ಬಂಡಿ
ವಿಧಿ ಅದರ ಸಾಹೇಬ

ಕನ್ನಡದ ಕವಿಶ್ರೇಷ್ಠರೊಬ್ಬರು ಹೇಳಿದ ನುಡಿಮುತ್ತು, ಈ ಎರಡು ಸಾಲಿನಲ್ಲಿ ಇಡೀ ಬದುಕಿನ ಸಾರಸತ್ವವನ್ನೇ ಹಿಡಿದಿಡಲಾಗಿದೆ. ಪ್ರಕೃತಿಯಲ್ಲಿ ಪ್ರಾಣಿಸಂಕುಲಕ್ಕೆ ಸೇರಿದ ಮಾನವ ವಿಶೇಷವಾಗಿ ಕಂಡುಬರುವ ಪ್ರಾಣಿ, ಏಕೆಂದರೆ ಮನುಷ್ಯನನ್ನು ಬಿಟ್ಟರೆ ಉಳಿದ ಯಾವ ಪ್ರಾಣಿಗಳಿಗೂ ಮಾತುಬಾರದು, ಅವು ಅವುಗಳದೇ ಆದ ಸಂಜ್ಞೆಗಳ ಮೂಲಕ ವಿಚಿತ್ರ ಕೂಗಿನ ಮುಖಾಂತರ ತಮ್ಮ ಸಂಭಾಷಣೆಯನ್ನು ನಡೆಸುತ್ತವೆ. ಆದರೆ ಮಾನವ ತನ್ನ ಸ್ವಪ್ರಯತ್ನದಿಂದ ಪೀಳಿಗೆಯಿಂದ ಪೀಳಿಗೆಗೆ ಕ್ರಮೇಣ ಪ್ರಗತಿಯ ಪಥದಲ್ಲಿ ಸಾಗುತ್ತ ಭಾಷೆಯನ್ನು ಕಲಿತುಕೊಂಡು ಮಾತನಾಡತೊಡಗಿದ. ಇದೇ ಕಾರಣಕ್ಕೆ ಮನುಷ್ಯ ಎಂಬುವ ಪ್ರಾಣಿ ಉಳಿದ ಪ್ರಾಣಿಸಂಕುಲಗಳಿಗಿಂತ ಭಿನ್ನ ಎಂಬುದನ್ನು ತೋರಿಸಿಕೊಂಡು ಅತಿ ದೊಡ್ಡ ಸೂಚನೆಯಾಗಿದೆ.

ಹೀಗೆ ಮನುಷ್ಯ ಹುಟ್ಟಿ ಬೆಳೆದು ಬಂದ ಹಿನ್ನಲೆಯನ್ನು ಗಮನಿಸಿದಾಗ ಅವನ ಬೆನ್ನ ಹಿಂದೆ ಅನೇಕ ಏಳು–ಬೀಳುಗಳು, ಪ್ರಯತ್ನಗಳು, ಸೋಲು–ಗೆಲುವುಗಳು ಅನೇಕ ಇವೆ. ಅವುಗಳನ್ನೆಲ್ಲ ಅಧ್ಯಯನ ಮಾಡುತ್ತಾ ಹೋದರೆ ಒಂದು ದೊಡ್ಡ ಗ್ರಂಥವೇ ಆಗುತ್ತದೆ. ಪ್ರಸ್ತುತ ಮಾನವ ತನ್ನ ರಕ್ಷಣೆಗಾಗಿ, ತನ್ನ ಜೀವನಕ್ಕೆ ಅವಶ್ಯಕವಾದಂತಹ, ನಿಯಮಿತ

ಚೌಕಟ್ಟಿನೊಳಗೆ ತನಗೆ ಬೇಕು–ಬೇಡಗಳನ್ನು ತೀರಿಸಿಕೊಳ್ಳಲು ಒಂದು ಕ್ರಮವನ್ನು ರೂಢಿಸಿಕೊಂಡು ಬಂದ, ಈ ಕ್ರಮಗಳಲ್ಲಿ, ರೂಢಿ, ಸಂಪ್ರದಾಯ, ಆಚರಣೆ, ಮದುವೆ, ನಾಮಕರಣ, ಸಂಸ್ಕೃತಿ, ಧಾರ್ಮಿಕ ವಿಧಾನಗಳು, ಸಾಮಾಜಿಕ ವಿಧಿಗಳು, ಹೀಗೆ ಏನೆಲ್ಲಾ ರೂಢಿಸಿಕೊಂಡು ಬಂದಿದ್ದಾನೆಯೇ ಅವುಗಳಿಗೆಲ್ಲ ತನ್ನದೇ ಆದ ಒಂದೊಂದು ಹೆಸರುಗಳನಿಟ್ಟು ತನ್ನಹಾಗೂ ತನ್ನ ಹಿರಿಯ ತಲೆಮಾರುಗಳು ಆಚರಿಸಿಕೊಂಡು ಬಂದಂತಹ ಆಚರಣೆಗಳನ್ನು ತಪ್ಪದೆ, ಯಾವುದೇ ದೋಷಗಳಲ್ಲದೆ, ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾನೆ.

ಮೊಳಕಾಲ್ಮೂರು ಗ್ರಾಮದಲ್ಲಿ ವಿವಿಧ ರೀತಿಯ ವರ್ಗ, ಧರ್ಮಗಳಿಂದ ಕೂಡಿದ ಜನರಿದ್ದು ಆ ಜನಾಂಗದ ಕಟ್ಟಳೆಗಳೇನು ಇರುತ್ತವೆಯೋ ಆ ನಿಟ್ಟಿನಲ್ಲೇ ಸಂಪ್ರದಾಯ ಬದ್ಧವಾಗಿ ಆಚರಿಸಿಕೊಂಡು ಬಂದಿದ್ದಾರೆ. ಲಿಂಗಾಯಿತ, ರೆಡ್ಡಿ, ಕುರುಬ, ಕೊರಚ, ಹೊಲೆಯ, ಮುಸ್ಲೀಂ, ಕ್ರೈಸ್ತ, ಜಂಗಮ, ಬ್ರಾಹ್ಮಣ, ಕುಂಬಾರ, ಒಕ್ಕಲಿಗ, ಆಚಾರಿ, ಹೀಗೆ ಇಡೀ ಗ್ರಾಮದಲ್ಲಿರುವ ಪಂಗಡಗಳ ಜನರು ಅವರ ಹಿಂದಿನ ತಲೆಮಾರಿನ ಜನರು ಉಳಿಸಿಕೊಂಡು ಬೆಳೆಸಿಕೊಂಡು ಬಂದಂತಹ ಪದ್ದತಿಗಳನ್ನೆ ರೀತಿ ನೀತಿಗಳನ್ನೆ ಇಂದಿಗೂ ಆಚರಿಸುತ್ತಲೇ ಬಂದಿದ್ದಾರೆ.

ಪ್ರಥಮವಾಗಿ ವ್ಯಕ್ತಿ ಹುಟ್ಟಿನಿಂದ, ನಾಮಕರಣ, ಉಪನಯನ, ಶಿಕ್ಷಣ, ಮದುವೆ, ಶೋಭನ, ಹಬ್ಬ, ಹರಿದಿನ, ಜಾತ್ರೆ–ಉತ್ಸವಗಳು, ಸಾವು–ನೋವುಗಳು ಹೀಗಿರುವಂತಹ ಅನೇಕ ಆಚರಣೆಗಳನ್ನು ಅವರವರ ಧರ್ಮ–ಸಂಪ್ರದಾಯಕ್ಕೆ ಹೊಂದುವಂತೆ ಅಥವಾ ಉಪದೇಶಿಸಿದ ಉಪದೇಶದಂತೆ ಪ್ರಸ್ತುತ ದಿನಮಾನಗಳಲ್ಲೂ ನಡೆಸಿಕೊಂಡು ಬರುತ್ತಿರುವುದು ಇಲ್ಲಿನ ಜನರ ನಂಬಿಕೆಯ ಮಟ್ಟವನ್ನು ಹೇಳುತ್ತದೆ.

ಇಂದಿನ ಆಧುನಿಕ–ತಂತ್ರಜ್ಞಾನದ ಅವಿಷ್ಕಾರಗಳು ಎಲ್ಲೆಂದರಲ್ಲಿ ತಾಂಡವಾಡುತ್ತಿರುವ ಸಂದರ್ಭದಲ್ಲಿ ಯಾಕೆ ಜನರು ಇನ್ನು ಈ ಹಳೆ ಸಂಪ್ರದಾಯಗಳನ್ನು ಆಚರಿಸುತ್ತಾರೆ ಎಂಬ ಪ್ರಶ್ನೆ ಕಾಡಿದರೂ ಅದಕ್ಕೆ ಉತ್ತರವಾಗಿ ಜನರು ಹೇಳುವಂತಹ ಉತ್ತರ ಇಂದು ಕುಟುಂಬ, ಆಹಾರ, ಬಟ್ಟೆ, ಶಿಕ್ಷಣ, ಸಾಮಾಜಿಕ ಸ್ಥಿತಿ–ಗತಿಗಳಲ್ಲಿ, ಆಚರಣೆಗಳಲ್ಲಿ ವೈಭವತೆ ಕಂಡುಬಂದರೂ, ವಿಧಿಗಳಲ್ಲಿ ಸಂಪ್ರದಾಯಗಳಲ್ಲಿ ಅವರಲ್ಲಿರುವ ನಂಬಿಕೆ ಇನ್ನೂ ಹೋಗಿಲ್ಲ, ಅಕಸ್ಮಾತ್ ಯಾವುದೇ ಒಂದು ಸಂದರ್ಭದಲ್ಲಿ ಒಂದು ಆಚರಣೆಯನ್ನು ಬಿಟ್ಟು ಬಿಟ್ಟರೆ ಅವರಲ್ಲಿ ತಪ್ಪು ಮಾಡಿದ್ದೇವೆ ಎಂಬ ಪ್ರಜ್ಞೆ ಕಾಡುತ್ತದೆ. ಇದಕ್ಕೆಲ್ಲ ಅವರು ಪೂರ್ವಗ್ರಹ ಪೀಡಿತರಾಗಿದ್ದು ಏನೇ ಬದಲಾವಣೆಯಾದರೂ ಈ ಸಂಪ್ರದಾಯಗಳು ಮಾತ್ರ ಬದಲಾವಣೆ ಮಾಡಲು ಸಾಧ್ಯವಿಲ್ಲ. ಅವುಗಳನ್ನು ಇನ್ನೂ ವಿಜೃಂಭಣೆಯಿಂದ ಸಂಭ್ರಮದಿಂದ ಬೇರೆ

ಬೇರೆ ಆಯಾಮಗಳನ್ನಿಟ್ಟುಕೊಂಡು ಆಚರಿಸುತ್ತಿರುವರೇ ವಿನಃ ಅವುಗಳನ್ನು ಸಂಪೂರ್ಣವಾಗಿ ತೊರೆಯುವುದಿಲ್ಲ. ಇದಕ್ಕೆಲ್ಲ ಕಾರಣ ಇಂದಿಗೂ ಅವರು ನಂಬಿಕೊಂಡು ಬಂದಂತಹ ನಂಬಿಕೆ, ಹಿರಿಯರ ಮೇಲಿನ ಭಕ್ತಿ, ದೇವರ ಮೇಲಿನ ಗೌರವ ಇವೆಲ್ಲ ಕಾರಣವೆನ್ನಬಹುದು. ಹೀಗಾಗಿ ಮನೆಯ ಸಂಪ್ರದಾಯಗಳನ್ನು, ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬುದು ಅವರ ವಾದವಾಗಿದೆ.

ಊರಿನಲ್ಲಿ ಎಲ್ಲಾ ಜಾತಿ–ವರ್ಣದ ಜನರಿದ್ದರೂ ಅವರಿಗೆ ಅವರದೇ ಆದ, ಹಿಂದಿನಿಂದಲೂ ರೂಡಿಸಿಕೊಂಡು ಆಚರಿಸಿಕೊಂಡು ಬಂದಿರುವಂತಹ ನಿಯಮಗಳಿವೆ, ಆ ನಿಯಮದಡಿಯಲ್ಲಿಯೇ ಅವರ ಬದುಕಬೇಕು, ಇಲ್ಲವಾದರೆ ಜಾತಿಯಿಂದಲೇ ಹೊರಗಿಡುವಂತಹ ಕಾನೂನು ಅವರ ಪಂಗಡಗಳಲ್ಲಿದೆ ಕೆಲವೊಂದು ಆಚರಣೆಗಳು ಅವುಗಳ ಸ್ವರೂಪದಲ್ಲಿ ಮಾತ್ರ ಬದಲಾವಣೆಗೊಂಡಿವೆ. ಮೂಲದಲ್ಲಿ ಅವು ತಲೆಮಾರಿನಿಂದ ಆಚರಿಸಿಕೊಳ್ಳುತ್ತಲೇ ಬಂದಿರುವಂತಹ ಆಚರಣೆಗಳು. ಕೆಲವೊಂದು ಸಣ್ಣದಾಗಿ ಆಚರಣೆಗೊಂಡರೆ, ಕೆಲವೊಂದು ದೊಡ್ಡ ಪ್ರಮಾಣದಲ್ಲಿ ಆಚರಣೆಗೊಳ್ಳುತ್ತದೆ. ಮತ್ತೆ ಕೆಲವು ಸ್ವರೂಪದಲ್ಲಿ ಅಲ್ಪಸ್ವಲ್ಪ ಬದಲಾವಣೆಮಾಡಿಕೊಂಡು ಆಚರಿಸಿಕೊಂಡು ಬರಲಾಗುತ್ತದೆ. ಹಾಗಾಗಿ ಯಾವುದೇ ಪ್ರದೇಶದಲ್ಲಿ ಯಾದರೂ ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಂತಹ ವಿಧಿಗಳನ್ನು ಬಿಟ್ಟು ಬಿಡುವುದಿಲ್ಲ. ಬಿಟ್ಟರೆ ಆ ಕುಟುಂಬಕ್ಕೆ, ಆ ಮನೆಗೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂಬುದು ಅವರಿಗೆ ಖಚಿತವಾಗಿದೆ. ಆದ್ದರಿಂದ ಈ ನಿಯಮ ಪಾಲನೆಗಳನ್ನು ತಪ್ಪದೇ ಆಚರಿಸಿಕೊಂಡು ಬರುತ್ತಿದ್ದಾರೆ. ಅವರ ಬಾಹ್ಯ ಜಗತ್ತಿನಲ್ಲಿ ಬದಲಾವಣೆಯ ಮಹಾ ಪೂರವೇ ಇದ್ದರೂ ಆಂತರಿಕವಾಗಿ ಬಹಳ ಕಟ್ಟುನಿಟ್ಟಾಗಿ ತಮ್ಮ ಮನೆ ಸಂಪ್ರದಾಯವನ್ನು ತಪ್ಪಿಸುವುದಿಲ್ಲ. ಹಾಗೆ ಹಿರಿಯರು ಕಿರಿಯರಿಗೆ ಯಾವುದೇ ಕಾರಣಕ್ಕೂ ಈ ಸಂಪ್ರದಾಯಗಳನ್ನು ತಪ್ಪಿಸಬಾರದು ಎಂಬ ಕಟ್ಟಾಜ್ಞೆ ಮಾಡುತ್ತಾರೆ, ತಪ್ಪಿದರೆ ನಮಗೆ ಒಳ್ಳೆಯದಾಗುವುದಿಲ್ಲ ಎಂದು ಅವರನ್ನು ತಮ್ಮ ದಾರಿಗೆ ತೆಗೆದುಕೊಂಡು ಜಾಣ ಮಾತಿನಿಂದ ತಿಳಿಹೇಳುತ್ತಾರೆ. ಇದು ಮೊಳಕಾಲ್ಮುರು ಗ್ರಾಮದ ಜನರ ಸಂಸ್ಕಾರ ಪದ್ದತಿಗಳಿಗೆ ಸಂಬಂಧಿಸಿದ ಮಾಹಿತಿಯಾಗಿದೆ.

ಅಡಿ ಟಿಪ್ಪಣಿಗಳು

೧. ಉಜ್ಜಿನಿ ಗ್ರಾಮಾಧ್ಯಯನ, ರಮೇಶ ಕೆ., ಪುಟಸಂಖ್ಯೆ-೭೬, ೨೦೦೨.

೨ ಸುಂಕಮಲೆ ಭೈರವೇಶ್ವರನ ಹೊಳಲು, ಸಿದ್ಧಣ್ಣ ಎ., ಪುಟಸಂಖ್ಯೆ -೨.

೩. ಅದೇ ಪುಟ ಸಂಖ್ಯೆ-೨.

೪. ಉಜ್ಜಿನಿ ಗ್ರಾಮಾಧ್ಯಯನ, ರಮೇಶ ಕೆ., ಪುಟಸಂಖ್ಯೆ-೮೧, ೨೦೦೨.

೫ ಅದೇ ಪುಟ ಸಂಖ್ಯೆ-೮೧.

* ಮಾರಣ್ಣ
* ಚಂದ್ರಹಾಸ, ಶಿಕ್ಷಕರು
* ರಾಜಶೇಖರ, ಪದವೀಧರ
* ಶ್ರೀನಿವಾಸಮೂರ್ತಿ, ಸಮಾಜಸೇವಕರು.
* ಗುಡ್ಡದ ಸಿದ್ಧಣ್ಣ, ಅರ್ಚಕರು.
* ಪೂಜಾರಿ ಪಾಲಯ್ಯ ಕೃಷಿಕರು
* ದೊಡ್ಡ ಪಾಪಯ್ಯ, ವಯಸ್ಕರು ಮತ್ತು ಕೃಷೀಕರು

ಅಧ್ಯಾಯ-ಐದು

ಸಮಕಾಲೀನತೆಯ ಸಂದರ್ಭದಲ್ಲಿ ಮೊಳಕಾಲ್ಮುರು ಗ್ರಾಮದ ಸ್ಥಿತ್ಯಂತರಗಳು

[illegible]

[illegible]

[illegible]

ಅಧ್ಯಾಯ-ಐದು

ಸಮಕಾಲೀನತೆಯ ಸಂದರ್ಭದಲ್ಲಿ ಮೊಳಕಾಲ್ಮುರು ಗ್ರಾಮದ ಸ್ಥಿತ್ಯಂತರಗಳು

ನಮ್ಮ ಸಮಾಜ ನಿಂತ ನೀರಿನಂತಿರದೆ ಅದು ಯಾವಾಗಲೂ ಚಲಿಸುತ್ತಿರುವ ಪರಿವರ್ತನಾ ಶೀಲವಾದ ನಿತ್ಯನೂತನವಾದ ಸಮಾಜವಾಗಿದೆ. ಇಂದು ಸಮಾಜದಲ್ಲಿ ಏನೆಲ್ಲಾ ಪರಿವರ್ತನೆಯಾಗಿದೆ. ಇಡೀ ಸಮಾಜದ ಗಾತ್ರ, ಸ್ವರೂಪವೇ ಬದಲಾವಣೆ ಹೊಂದುತ್ತಿದೆ. ಆಧುನಿಕ ಯುಗದ ವೈಜ್ಞಾನಿಕರಣ ಕೈಗಾರೀಕರಣ, ನಗರೀಕರಣದಂತಹ ಆಧುನಿಕ ಪರಿಸರದ ಪ್ರಭಾವದಿಂದಾಗಿ ಇಂದು ಗ್ರಾಮೀಣ ಪ್ರದೇಶಗಳು ನಗರಗಳಾಗಿ ಮಾರ್ಪಾಡಾಗುತ್ತಿದ್ದಾವೆ. ಪ್ರಾರಂಭದ ಹಂತದಲ್ಲಿ ತನ್ನ ವಿಜಯೋತ್ಸವವನ್ನು ಸಾಧಿಸಿವೆ ಗ್ರಾಮಗಳಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಜನರ ಬದುಕೇ ಗಮನಾರ್ಹ ರೀತಿಯಲ್ಲಿ ಮುಂದಿನ ದಿನಗಳಿಗೆ ಹೆಜ್ಜೆಯಿಡುತ್ತಿವೆ. ಇದು ಅನಿವಾರ್ಯವೆಂದರೂ ತಪ್ಪಾಗಲಾರದು. ಗ್ರಾಮೀಣ ಪ್ರದೇಶಗಳಲ್ಲಿನ ಜನರಜೀವನ ಪದ್ದತಿಗಳಲ್ಲಿ, ಆರ್ಥಿಕ, ಸಾಂಸ್ಕೃತಿಕ ಜೀವನ ಪದ್ದತಿಗಳಲ್ಲಿ ಪರಿವರ್ತನಾ ಶೀಲವಾದ ಹಂತಗಳು ಕಂಡುಬರುತ್ತಿದ್ದು, ಈ ಹಂತಗಳಿಂದ ಗ್ರಾಮೀಣ ಪ್ರದೇಶಗಳು ಕ್ರಮೇಣ ತನ್ನ ಮಹತ್ವವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿವೆ.

ಬಂಡವಾಳಶಾಹಿಗಳಿಂದ, ಆಡಳಿತಶಾಹಿಗಳಿಂದ ಉಂಟಾಗುವ ಪ್ರಭಾವ ವಾಸ್ತವದಲ್ಲಿ ಸಾಮಾನ್ಯ ಜನರ ಮೇಲೆ ಅತ್ಯಂತ ಪರಿಣಾಮಕಾರಿಯಾಗಿದೆ. ಇದಕ್ಕೆ ಬಂಡವಾಳಶಾಹಿಗಳು, ಆಡಳಿತಶಾಹಿಗಳು ಹಲವಾರು ಆಸೆ ಆಕಾಂಕ್ಷೆಗಳನ್ನು ತೋರಿಸಿ ಜನರನ್ನು ತಮ್ಮೆಡೆಗೆ ಸೆಳೆದುಕೊಂಡು ಅವರಿಗೆ ಉದ್ಯೋಗ ಭರವಸೆ ನೀಡಿ ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು

[illegible]

[illegible]

[illegible]

[illegible]

[illegible]

ಅವರ ಹಿತಾಸಕ್ತಿಗಳಿಗೆ ಸಾಮಾನ್ಯ ಜನರನ್ನು ಬಲಿತೆಗೆದುಕೊಳ್ಳುತ್ತಿದ್ದಾರೆ. ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ಹಳ್ಳಿಯ ಸಾಮಾನ್ಯ ರೈತನಿಗಿಂತ ಹಿನಾಯ ಬದುಕನ್ನು ಸಾಗಿಸುತ್ತಿರುವಂತಹ ಸನ್ನಿವೇಶ ಇಂದು ಸೃಷ್ಠಿಯಾಗಿದೆ. ಈ ಕೈಗಾರಿಕೀರಣದಿಂದ ಜಲಮಾಲಿನ್ಯ, ವಾಯುಮಾಲಿನ್ಯ, ಸಂಸ್ಕೃತಿ ಮಾಲಿನ್ಯದಂತಹ ವಿನಾಶಕಾರಿ ಪರಿಸ್ಥಿತಿಗಳನ್ನ ಜನರು ಎದುರಿಸುತ್ತಿದ್ದಾರೆ. ರೈತರು ಬಳಸುವಂತಹ ಗೊಬ್ಬರ, ಕೀಟನಾಶಕಗಳು ಕಳಪೆಮಟ್ಟದಿಂದ ಕೂಡಿದ್ದು ದಿನನಿತ್ಯ ರೈತರು ಒಂದಲ್ಲೊಂದು ತೊಂದರೆಗಳಿಂದ ಪರದಾಡುವಂತಾಗಿದೆ ಹಾಕಿದ ಗೊಬ್ಬರ–ಔಷಧಿಗಳಿಗೆ ಜಮೀನಿನಲ್ಲಿರುವ ಬೆಳೆಯಲ್ಲಾ ನಾಶ ಹೊಂದುತ್ತಿದ್ದು ರೈತ ಇದನ್ನು ತಾಳಲಾರದೆ ಆತ್ಮಹತ್ಯೆಯಂತಹ ಅಮಾನವೀಯ ಕೃತ್ಯಕ್ಕೆ ಕೈ ಹಾಕುತ್ತಿರುವುದು ಪಿಪರ್ಯಾಸದ ಸಂಗತಿಯಾಗಿದೆ.

ಮೊಳಕಾಲ್ಮುರು ಗ್ರಾಮವೂ ಸಹ ಈ ಆಧುನಿಕತೆಯ ಪ್ರಭಾವದಿಂದಾಗಿ ಅನೇಕ ಗುರು ತರವಾದ ಬದಲಾವಣೆಯನ್ನು ಪಡೆದಿದೆ ಗ್ರಾಮವನ್ನ ವಿವಿಧ ಆಯಾಮಗಳ ಮುಖಾಂತರ ಅವಲೋಕಿಸಿದಾಗ ಈ ಅಂಶಗಳು ಕಂಡುಬಂದಿವೆ ಯಾವುದೇ ಕೋನಗಳಿಂದ ಅಧ್ಯಯನ ಮಾಡಿದರೂ ಗ್ರಾಮದಲ್ಲಿ ಬದಲಾವಣೆ ಹಂತಗಳನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಗ್ರಾಮದ ಜನರು ವಾಸಿಸುವಂತಹ ಮನೆಗಳಿಂದ ಹಿಡಿದು ಇಡೀ ಊರಿನ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮುಂತಾದ ಕ್ಷೇತ್ರದಲ್ಲಿ ಕಂಡುಬರುವ ಅನೇಕ ಪ್ರಗತಿಪರ ಅಂಶಗಳಿಂದ ಗ್ರಾಮವು ಇಂದು ಹೊಸದಿಕ್ಕಿನೆಡೆಗೆ ಹೋಗುತ್ತಿರುವ ದೃಷ್ಯ ವೀಕ್ಷಿಸಬಹುದು.

ಗ್ರಾಮದಲ್ಲಿ ಈಗಾಗಲೇ ಜನ ಜೀವನ ಪದ್ದತಿಯಲ್ಲಿ ಮಹತ್ವದ ಬದಲಾವಣೆ ಕಂಡುಬಂದಿದ್ದು ಇಡೀ ಕೌಟುಂಬಿಕ ವಾತಾವರಣದ ಸ್ವರೂಪವೇ ಬೇರೆ ರೂಪ ಪಡೆದಿದೆ ಈ ಹಿಂದೆ ಇದ್ದಂತಹ ಅವಿಭಕ್ತ ಕುಟುಂಬ ಪದ್ದತಿ ಮಾಯವಾಗಿ ಅಲ್ಲಿ ವಿಭಕ್ತಕುಟುಂಬ ಪದ್ದತಿಯೇ ರಾರಾಜಿಸುತ್ತಿದೆ. ಗೃಹ ನಿರ್ಮಾಣದ ಸ್ವರೂಪವೂ ಬೇರೆಯಾಗಿದೆ. ಅತೀ ದುರ್ಬಲ ವರ್ಗದವರು ಮಾತ್ರ ಕೇವಲ ಬೆರಳಣಿಕೆಯಷ್ಟು ಗುಡಿಸಲು ಮನೆಗಳಿದ್ದು ಗ್ರಾಮದಲ್ಲಿ ಹಂಚಿನಮನೆ, ಮಾಳಿಗೆಮನೆ, ಬಿಲ್ಡಿಂಗ್‌ಗಳೇ ಕಾಣುತ್ತಿವೆ. ಊರಿನ ಪಂಚಾಯ್ತಿಯವತಿಯಿಂದ ಮಂಜೂರಾಗಿರುವ ಅಂಬೇಡ್ಕರ್ ಯೋಜನೆ, ಆಶ್ರಯಯೋಜನೆ, ಇಂದಿರಾಆವಾಜ್ ಯೋಜನೆಗಳಡಿಯಲ್ಲಿ ಸರ್ಕಾರದಿಂದ ಆದೇಶವಾಗಿರುವ ಮನೆಗಳು ಎದ್ದುನಿಂತಿದ್ದು ಊರಿನ ಹಲವಾರು ಜಾತಿ/ವರ್ಗದ ಜನತೆಗೆ, ದಲಿತರಿಗೆ ಇದರಿಂದ ಗುಡಿಸಲು ಸೂರಿನಡಿ ವಾಸಿಸುತ್ತಿದ್ದ ಜನರು ತಮ್ಮದು ಎಂಬಂತೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇದಕ್ಕೆ ಪಂಚಾಯ್ತಿಯು ಅತ್ಯಂತ ಉಪಯೋಗಕಾರಿ ಯೋಜನೆಗಳನ್ನು ಹಾಕಿಕೊಂಡು ಜನರಿಗೆ ಉಪಯುಕ್ತ ಕಾರ್ಯಗಳನ್ನು ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗ್ರಾಮದ ಜನರಲ್ಲಿ ಜಾಗ್ರತೆಯಜ್ಞಾನ ಹೆಚ್ಚಾಗಿ ಪ್ರತಿಯೊಂದು ವಿಷಯವನ್ನು ಪರೀಶಿಲನಾ ದೃಷ್ಟಿಯಿಂದ ನೋಡುತ್ತಿದ್ದಾರೆ. ಮೇಲ್ವರ್ಗ ಕೆಳವರ್ಗವೆನ್ನದೆ ಸಮಾನತೆಯ ಭಾವದಿಂದ ಬದುಕುತ್ತಿದ್ದಾರೆ. ಜಾತ್ಯಾತೀತ ಸಮಾಜದಲ್ಲಿ ಜಾತಿ–ಮತಗಳೆನ್ನದೆ ಎಲ್ಲಾಜನಾಂಗದ ಜನತೆ ಸಹಬಾಳ್ವೆಯಿಂದ ಇದ್ದಾರೆ, ಗ್ರಾಮದಲ್ಲಿ ಯಾವುದೇ ಕಾರ್ಯವಾದರೂ ಎಲ್ಲರೂ, ಒಮ್ಮತದ ಅಭಿಪ್ರಾಯದೊಂದಿಗೆ ಆ ಕಾರ್ಯವನ್ನು ಯಶಸ್ವಿಗೊಳಿಸುತ್ತಿದ್ದಾರೆ. ಇಂದು ಪ್ರತಿಯೊಂದು ಮನೆಯಲ್ಲಿಯೂ ಶಿಕ್ಷಣ ಪಡೆದವರು ಇದ್ದರೆ. ಕನಿಷ್ಟ ಪ್ರೌಢಶಾಲೆಯಿಂದ ಉನ್ನತ ಶಿಕ್ಷಣವನ್ನು ಪಡೆದ ಅನೇಕ ಯುವಕ–ಯುವತಿಯರಿದ್ದಾರೆ. ಹಾಗೆ ಕೇರಿ ಮನೆಗಳಲ್ಲಿ ಸರ್ಕಾರಿ ಕೆಲಸಗಳಲ್ಲಿ ಸೇರಿಕೊಂಡ ಅವರ ಜೀವನವನ್ನು ಇನ್ನೂ ಉತ್ತಮಗೊಳಿಸಿಕೊಂಡಿದ್ದಾರೆ. ಸ್ತ್ರೀ–ಪುರಷರೆನ್ನದೆ ಎಲ್ಲರಿಗೂ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಗ್ರಾಮದಲ್ಲಿ ಸರ್ಕಾರಿ ಶಾಲೆಗಳು ಇರುವುದರಿಂದ ಶಿಕ್ಷಣ ಪಡೆಯಲು ಯಾವುದೇ ತೊಂದರೆಯಿಲ್ಲದಂತಾಗಿದೆ. ಈ ಅಂಶ ಇಡೀ ಊರಿನ ಮೇಲ್ಮುಖ ಚಲನೆಯನ್ನು ಹೇಳುತ್ತದೆ.

ಕೇವಲ ಕೃಷಿಯನ್ನಷ್ಟೇ ನಂಬದೆ ಇಂದು ಹಲವು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡು ಆರ್ಥಿಕ ದೃಷ್ಟಿಯಿಂದ ಸಬಲರಾಗಿದ್ದಾರೆ. ವೃತ್ತಿಪರ ಕೆಲಸಗಳಿಂದ ಬಹುತೇಕ ಸ್ಥಿತಿವಂತರಾಗಿದ್ದು ಇದರಿಂದ ಕೌಟುಂಬಿಕ ನಿರ್ವಹಣೆಯಲ್ಲಿ ಉತ್ತಮ ಸ್ಥಿತಿಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಹೋಟೆಲ್ ಉದ್ಯಮ, ವ್ಯಾಪಾರ, ಮರದಕಟ್ಟಿಗೆ ವ್ಯಾಪಾರ, ದೂರವಾಣಿಕೇಂದ್ರಗಳ ಸ್ಥಾಪನೆ. (STD) ರೇಷ್ಮೆ ನೇಯುವಿಕೆ, ಹೀಗೆ ಹತ್ತಾರು ವೃತ್ತಿಗಳಲ್ಲಿ ಪರಿಣಿತರಾಗಿದ್ದು ಕೇವಲ ಮನೆಯಷ್ಟೇ ಅಲ್ಲ ಗ್ರಾಮದ ಅಭಿವೃದ್ಧಿಗೂ ಸಹಕಾರಿಯೆನಿಸಿದೆ. ಹಿಂದೆ ಆಯಾ ಸಮುದಾಯಗಳು ಕೈಗೊಳ್ಳುತ್ತಿದ್ದು ವೃತ್ತಿಗಳನ್ನು ಸ್ವಲ್ಪಮಟ್ಟಿಗೆ ತಡೆಮಾಡಿ ಜಾತಿ ವೃತ್ತಿಯ ಜೊತೆಗೆ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಾ, ಸುವ್ಯವಸ್ಥೆಯಿಂದ ತಮ್ಮ ತಮ್ಮ ಜೀವನ ನಡೆಸುತ್ತಿದ್ದಾರೆ.

ಈಗಾಗಲೇ ಬೆಂಗಾಡು ಎಂದು ಕರೆಸಿಕೊಂಡಿರುವ ಮೊಳಕಾಲ್ಮೂರು ಪರಿಸರದಲ್ಲಿ ಮಳೆಯ ಪ್ರಮಾಣ ಕಡಿಮೆ, ಆದ್ದರಿಂದ ಕೆಲವು ಜನರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಅಲ್ಲಿ ಕೈಗಾರಿಕೆಗಳಲ್ಲಿ, ವ್ಯಾಪಾರಗಳನ್ನು, ಮಾಡುತ್ತ ತಮ್ಮ ಆದಾಯವನ್ನು ವೃದ್ಧಿಸಿಕೊಂಡು ಪ್ರಮುಖ ಹಬ್ಬ ಹರಿದಿನಗಳಲ್ಲಿ ಮಾತ್ರ ಗ್ರಾಮಕ್ಕೆ ಬಂದು ದುಡಿದು ಉಳಿಸಿರುವಂತಹ ಹಣದಿಂದ ಸಂಭ್ರಮದಿಂದ ಹಬ್ಬಗಳನ್ನು ಆಚರಿಸಿಕೊಂಡು ಮತ್ತೆ ದುಡಿಯಲು ನಗರಗಳಿಗೆ ಹೋಗುತ್ತಾರೆ. ಹೀಗಾಗಿ ಜನ ಸಾಮಾನ್ಯರ ಬದುಕು ಆತಂಕದ ಸ್ಥಿತಿಯಿಂದ ಸ್ವಲ್ಪಮಟ್ಟಿಗೆ ದೂರ ಇದ್ದಾರೆ. ಮೊಳಕಾಲ್ಮೂರು ಕ್ಷೇತ್ರದಿಂದ ಆಯ್ಕೆಯಾದ

ಶಾಸಕರೊಬ್ಬರು ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಿರ್ವಹಿಸಿದ ಹೆಗ್ಗಳಿಕೆಯಿದೆ. ಇದು ಇಡೀ ಊರಿನ ರಾಜಕೀಯ ಪ್ರಗತಿಯನ್ನು ಹೇಳುತ್ತದೆ. ರಾಜಕೀಯದಲ್ಲಿ ಮಹಿಳೆಯರು ಪ್ರವೇಶಿಸಿ ಪಂಚಾಯ್ತಿ ಚನಾವಣೆಯಲ್ಲಿ ಜಯಗಳಿಸಿ ಸದಸ್ಯರು, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಸ್ಥಾನವನ್ನು ಸಹ ಅಲಂಕರಿಸಿದ ಉದಾಹರಣೆಗಳಿವೆ ರಾಜಕೀಯ ಅವಕಾಶಗಳನ್ನು ಜನರು ಅತ್ಯಂತ ಯಶಸ್ವಿಯಾಗಿ ಬಳಸಿಕೊಂಡು ಬರಬೇಕಾದ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಕೆಳಜಾತಿಯ ಜನರೂ ಸಹ ರಾಜಕೀಯ ರಂಗಕ್ಕೆ ಪ್ರವೇಶಿಸಿ ಅಲ್ಲಿ ತಮ್ಮ ನಿಷ್ಪಕ್ಷಪಾತ ಸೇವೆಯನ್ನು ಸಲ್ಲಿಸಿದ್ದಾರೆ.

ಧಾರ್ಮಿಕ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡುವುದರೆ ಗ್ರಾಮದ ಜನತೆ ವರ್ಷದಾದ್ಯಂತ ಆಚರಿಸಿಕೊಂಡು ಬರುವಂತಹ ಹಬ್ಬ-ಆಚರಣೆಗಳಲ್ಲಿ ಬದಲಾವಣೆ ತೋರುತ್ತಿದ್ದು, ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಊರಿನ ದೇವಾಲಯಗಳ ಅಭಿವೃದ್ಧಿ, ಜೀರ್ಣೋದ್ಧಾರ ಕಾರ್ಯಗಳು, ದೇವಾಲಯಗಳ ನಿರ್ಮಾಣದ ಶೈಲಿಯಲ್ಲಿ ಆಧುನಿಕತೆ ಕಂಡುಬರುತ್ತದೆ. ವಿಶೇಷ ಉತ್ಸವಗಳ ಸಂದರ್ಭದಲ್ಲಿ ಸಂಪ್ರದಾಯಕ್ಕೆ ಬಳಸುವ ವಾದ್ಯ, ವಸ್ತುಗಳು ಆಧುನಿಕವಾಗಿದ್ದು ಈ ಹಿಂದೆ ಮಡಿಕೆ, ತಾಮ್ರದ ವಸ್ತುಗಳಿಂದ ಇಂದು ಬಂಗಾರದ ವಸ್ತುಗಳ ಮೂರ್ತಿಯು ಸಹ ಬಂಗಾರ ಅಥವಾ ಬೆಳ್ಳಿಯ ಆಭರಣದಿಂದ ಕೂಡಿದ ಮೂರ್ತಿಗಳು ಕಂಡುಬರುತ್ತದೆ. ಇದು ಜನತೆಯ ಹಲವು ಹರಕೆ ಮುಡಿಪುಗಳನ್ನು ಹೊತ್ತುಕೊಂಡು ಆ ದೇವರಿಗೆ ಪ್ರೀತಿಯಿಂದ ಕೊಡುವಂತ ಕಾಣಿಕೆಗಳಾಗಿವೆ.

ಗ್ರಾಮಕ್ಕೆ ಸಿನೆಮಾಮಂದಿರಗಳು ಲಗ್ಗೆ ಹಾಕಿವೆ. ದೂರದರ್ಶನ (ಟಿ.ವಿ) ಪೆಟ್ಟಿಗೆಗಳು ಇಂದು ಪ್ರತಿಮನೆಗಳಲ್ಲಿ ಬೆಂಕಿಪೊಟ್ಟಣಗಳಂತೆ ಕಂಡುಬರುತ್ತಿದ್ದು ಹಲವಾರು ಚಾನೆಲ್‌ಗಳು ಸಹ ಮೂಡಿ ಬರುತ್ತಿವೆ. ಇದರಿಂದ ಜನರಲ್ಲ ಜಾಗೃತಿಯ ಪ್ರಜ್ಞೆ ಹೆಚ್ಚಾಗುತ್ತಿದೆ. ಜಾಹಿರಾತುಗಳಿಂದು ವಾರ್ತೆಗಳ ಮುಖಾಂತರ ಜಗತ್ತಿನೆಲ್ಲೆಡೆ ನಡೆಯುವಂತಹ ಕಾರ್ಯಕ್ರಮಗಳು ಇಂದು ಅವರ ಮನೆಯ ಟಿ.ವಿ. ಪರದೆ ಮೇಲೆ ಇಲ್ಲಿಯೇ ಕಾಣುತ್ತಿದ್ದಾರೆ, ಹಾಗೆಯೇ ಇದೊಂದು ಮನೋರಂಜನೆಯ ಪೆಟ್ಟಿಗೆಯೂ ಸಹ ಆಗಿದೆ ಜೊತೆಗೆ ಹಿಂದೆ ಇದ್ದಂತಹ ಜಾನಪದ ಹಾಡು-ಕುಣಿತ, ಲಾವಣಿ, ಕೋಲಾಟ ಮುಂತಾದ ಕಲೆಗಳು ನಾಶದ ಅಂಚಿನಲ್ಲಿದ್ದು ಜನರಿಗೆ ಅವುಗಳ ಮೇಲಿನ ಆಸಕ್ತಿಯೇ ಕಡಿಮೆಯಾಗಿದೆ. ಗ್ರಾಮದ ಪ್ರತಿಯೊಂದು ಕೇರಿಗಳಲ್ಲಿ ನೀರಿನ ಸೌಲಭ್ಯ, ವಿದ್ಯುತ್ ಸೌಲಭ್ಯ, ಚರಂಡಿ ವ್ಯವಸ್ಥೆ ರಸ್ತೆ, ಮುಂತಾದ ಕೆಲವು ಭೌತಿಕ ವ್ಯವಸ್ಥೆಯಿದೆ, ಊರಿನಲ್ಲಿ ಬಸ್‌ಸ್ಟಾಂಡ್, ಆರೋಗ್ಯಕೇಂದ್ರ ಸರ್ಕಾರಿ ಕಛೇರಿಗಳು, ಮುಂತಾದ ಅವಶ್ಯಕವಾದಂತಹ ವಾತಾವರಣ ಇಂದು ನಿರ್ಮಾಣಗೊಂಡಿದೆ ಜನರು ಆಡುವಂತಹ

ಭಾಷೆಯಲ್ಲಿಯೂ ಸಹ ಗಮನಾರ್ಹವಾದ ಬದಲಾವಣೆ ಇದೆ ಮೂಢನಂಬಿಕೆಗಳಿಂದ ದೂರ ಹೋಗಿ ವೈಜ್ಞಾನಿಕ- ಆಧುನಿಕ ಪ್ರಜ್ಞೆಯಿಂದ ಜನರಲ್ಲಿ ಹೊಸ ಜೀವನ ಭರವಸೆಯು ಎದ್ದು ಕಾಣುತ್ತಿದೆ.

ಹೀಗೆ ಕೇವಲ ಮೊಳಕಾಲ್ಮುರು ಗ್ರಾಮವಷ್ಟೇ ಅಲ್ಲ ಬಹುತೇಕ ಗ್ರಾಮೀಣ ಪ್ರದೇಶಗಳು ಇಂದು ಜಾಗತೀಕರಣದ ಪ್ರಭಾವದಿಂದಾಗಿ, ನಗರೀಕರಣ, ಕೈಗಾರಿಕೀಕರಣದ ಪ್ರಭಾವದಿಂದಾಗಿ ತಮ್ಮ ಮೂಲತತ್ವವನ್ನು ಕಳಚಿಕೊಳ್ಳುವಂತಹ ದುಸ್ಥಿತಿಯಲ್ಲಿವೆ. ಇದಕ್ಕೆ ಪೂರಕವಾಗಿ ಜನರಲ್ಲಿ ಆಧುನಿಕ ಪ್ರಜ್ಞೆ ಬಲವಾಗಿ ಪಾಶ್ಚಾತ್ಯೀಕರಣದ ಸೋಗಿಗೆ ಬಲಿಯಾಗುತ್ತಿದ್ದಾರೆ. ಅರೆ-ಬರೆ ಶಿಕ್ಷಣ ಪಡೆದ ಯುವಕ ಜನಾಂಗ ಇಂದು ಇಡೀ ಗ್ರಾಮಕ್ಕೆ ಮಾರಕವಾದಂತಹ ವಾತಾವರಣವನ್ನು ಸೃಷ್ಟಿಸಿ, ಆ ಜೇಡರ ಬಲೆಯಲ್ಲಿ ತಾವು ಸಿಲುಕಿ ಇತರರನ್ನು ಸಿಲುಕಿಸಿ ಆ ವಾತಾವರಣದಿಂದ ಹೊರ ಬರಲು ಆಗದೆ ಮುಂದುವರಿಯಲೂ ಆಗದೆ ಜೀವಂತ ಬೊಂಬೆಗಳಾಗಿದ್ದಾರೆ, ಕೆಲ ಜನ ಪ್ರಜ್ಞಾವಂತರಾಗಿದ್ದು ಬಹುತೇಕ ಮೊಳಕಾಲ್ಮುರುಗ್ರಾಮದಲ್ಲಿ ಅನಾರೋಗ್ಯದಿಂದ ಕೂಡಿದ ವಾತಾವರಣ ಎದ್ದು ಕಾಣುತ್ತಿದೆ. ಇದಕ್ಕೆ ರಾಜಕೀಯ ಸಹ ಒಂದು ಪರೋಕ್ಷವಾದ ಕಾರಣವಾಗಿದೆ.

ಅಧ್ಯಾಯ-ಆರು

ಸಮಾರೋಪ

ಅಧ್ಯಾಯ-ಆರು

ಸಮಾರೋಪ

ಮಾನವ ಮಾನಸಿಕ ಹಾಗೂ ಬೌದ್ಧಿಕವಾಗಿ ಬೆಳೆದಂತೆಲ್ಲಾ ಅವನಲ್ಲಿರುವ ಬದಲಾವಣೆಗಳಿಗೆ ಅನೇಕ ಕಾರಣಗಳಿರುತ್ತವೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಹಿಗೆ ಅನೇಕ ಬದಲಾವಣೆಗಳು ಅವನ ಜೀವನದ ಶೈಲಿಯನ್ನು ಬೇರೆ ದಿಕ್ಕಿನೆಡೆಗೆ ಕೊಂಡೊಯ್ಯುವಂತಹ ಪರಿಚಲನೆಗಳು ಸದಾ ಹರಿಯುವ ನೀರಿನಂತೆ ಚಲಿಸುತ್ತಲೇ ಇರುತ್ತವೆ. ಮನುಷ್ಯನಲ್ಲಿನ ಆತ್ಮವಿಶ್ವಾಸದ ಗುಣ ಗೌಣತೆಯಿಂದ ಕೂಡಿದೆ. ಈ ಮಧ್ಯೆ ಗ್ರಾಮಗಳ ಹಿನ್ನಲೆಯಲ್ಲಿ ಜಾನಪದ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ನಡೆಯುತ್ತಲೇ ಇವೆ ಇದು ಕೇವಲ ಗ್ರಾಮದ ಸ್ವರೂಪ-ರಚನೆಯಲ್ಲಿ ಅಷ್ಟೇ ಅಲ್ಲ ಗ್ರಾಮದಲ್ಲಿ ವಾಸಿಸುತ್ತಿರುವ ಜನರ ಬದುಕನ್ನ ನಿರ್ದೇಶಿಸುವಂತಹ ಪ್ರಮುಖ ಅಂಶಗಳಾಗಿವೆ. ಹೀಗೆ ಬದಲಾಗುತ್ತಿರುವ ಹವಣಿಕೆಯಲ್ಲಿರುವ ಮೊಳಕಾಲ್ಮೂರು ಗ್ರಾಮದ ಬಗೆಗೆ, ಅಲ್ಲಿನ ಜನಸಾಮಾನ್ಯರ ಬದುಕು ಬವಣೆಗಳನ್ನು, ಕೊರತೆಗಳನ್ನು ಈ ನಿಬಂಧದಲ್ಲಿ ಅಕ್ಷರಗಳ ರೂಪದಲ್ಲಿ ಹಿಡಿದಿಡುವ ಅಲ್ಪ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ನಿಬಂಧದ ಅಧ್ಯಯನ ವಿಷಯವಾದ 'ಮೊಳಕಾಲ್ಮೂರು ಗ್ರಾಮ ಅಧ್ಯಯನ ಮತ್ತು ಸ್ಥಿತ್ಯಂತರಗಳು' ಎಂಬ ವಿಷಯದ ಸಂಶೋಧನಾ ವ್ಯಾಪ್ತಿಯು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಎಂಬ ಗ್ರಾಮದ ಒಟ್ಟಾರೆ ಸ್ಥಿತಿಗತಿಗಳನ್ನು ಹೇಳಲಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿ- ಸಮೂಹ ಮಾಧ್ಯಮಗಳ ಪ್ರಭಾವದಿಂದ ರಾಷ್ಟ್ರ-ರಾಜ್ಯ ಯಾವ ರೀತಿ ತೀವ್ರಗತಿಯಲ್ಲಿ ತನ್ನ ರೂಪವನ್ನು ಬದಲಾಯಿಸುತ್ತಿದೆ ಎಂಬುದರ ಅಡಿಯಲ್ಲಿ ಹಳ್ಳಿಗಳ ಸ್ವರೂಪವೂ ಅಷ್ಟೇ ತೀವ್ರಗತಿಯಲ್ಲಿ ಪರಿವರ್ತನೆಗೆ ಒಳಪಡುತ್ತಿವೆ.

ಪರಂಪರೆಯಿಂದ ಕಾಪಾಡಿಕೊಂಡು, ಉಳಿಸಿಕೊಂಡು, ಬೆಳೆಸಿಕೊಂಡು ಬಂದ ಸಂಸ್ಕೃತಿ ಇಂದು ಪರಕೀಯ ಸಂಸ್ಕೃತಿಗೆ ಬಲಿಯಾಗಿ ತಾಯ್ನಾಡಿನ ಮಣ್ಣಿನ ವಾಸನೆಯನ್ನು ಮರೆಯುತ್ತಿದೆ. ಪ್ರಪಂಚದಲ್ಲಿಯೇ ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು, ಭವ್ಯತೆಯಿಂದ ಮೆರೆದು ಇತರರಿಗೆ ಮಾದರಿಯಂತಿದ್ದ ಸಂಸ್ಕೃತಿ ಇಂದು ಅಧೋಗತಿಯಲ್ಲಿ ಸಾಗುತ್ತಿರುವುದು ಒಂದು ವಿಪರ್ಯಾಸ ಸಂಗತಿ ಇಂತಹ ದಾರಿಯಲ್ಲಿಯೇ ಹಳ್ಳಿಗಳ ವಾತಾವರಣವೂ ಕುಲಶಿತಗೊಂಡು ಇದೇ ಗ್ರಾಮಗಳಲ್ಲಿ ನಾನಿನ್ಯತೆ ಎದ್ದು ಕಾಣುತ್ತಿದೆ. ಈ ಹಿನ್ನಲೆಯಲ್ಲಿ ಮೊಳಕಾಲ್ಮುರು ಗ್ರಾಮದ ಪರಿಸರವನ್ನು ಅಭ್ಯಸಿಸುವಾಗ ಕಂಡುಕೊಂಡಂತಹ ಹೊಸತನವನ್ನು ಈ ಪ್ರಬಂಧದಲ್ಲಿ ವ್ಯಕ್ತಪಡಿಸಲಾಗಿದೆ.

ಮೊಳಕಾಲ್ಮುರು ಗ್ರಾಮದ ಜನರು ತಮ್ಮ ತಲೆಮಾರಿನಿಂದಲೂ ಆಚರಿಸಿಕೊಂಡು ಬರುತ್ತಿದ್ದ ಜೀವನ ಪದ್ಧತಿಗಳನ್ನು ಕೆಲವೇ ವರ್ಷಗಳಲ್ಲಿ ಹೊಸರೂಪದೊಂದಿಗೆ ಬದುಕುತ್ತಿರುವುದನ್ನು ಕಂಡಾಗ ಎಷ್ಟರಮಟ್ಟಿಗೆ ಗ್ರಾಮ ಪರಿವರ್ತನೆಯಾಗುತ್ತಿದೆ ಎಂಬುದನ್ನು ಊಹಿಸಬಹುದು. ಈ ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಯದಲ್ಲಿ ಸತ್ಯಕ್ಕೆ ಹತ್ತಿರವಾದ ವಿಷಯವನ್ನೆ ಸಂಗ್ರಹಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವ ವ್ಯಾಪ್ತಿಯನ್ನು ಸಾದರ ಪಡಿಸಿದ್ದು, ಅಧ್ಯಾಯ ಎರಡರಲ್ಲಿ ಮೊಳಕಾಲ್ಮೂರು ಮತ್ತು ಸುತ್ತಲಿನ ಪರಿಸರದಲ್ಲಿ ದೊರೆಯುವಂತಹ ಸಂಪತ್ತನ್ನು ವಿಶ್ಲೇಷಿಸಲಾಗಿದೆ. ಮೂಲತಃ ಗ್ರಾಮದ ಪರಿಸರ ಬಯಲುಸೀಮೆ, ಬೆಟ್ಟ, ಗುಡ್ಡ ಪ್ರದೇಶದಿಂದ ಆವರಿಸಿದ್ದು ಇಲ್ಲಿ ಕಲ್ಲುಗಳು, ಬಂಡೆಗಳು, ಗುಡ್ಡಗಳೇ ಬಹಳವಾಗಿ ಕಂಡುಬರುತ್ತಿದ್ದು ಕಾಡಿನ ಭಾಗ ಹೆಚ್ಚಿಲ್ಲ. ಇದರಿಂದ ನಮಗೆ ತಿಳಿಯುವುದೇನೆಂದರೆ ಗ್ರಾಮದ ಸಂಪತ್ತು ಯಾವ ಪ್ರಮಾಣದಲ್ಲಿದೆ ಎಂಬುದು ಗೊತ್ತಾಗುತ್ತದೆ.

ಈ ಪ್ರದೇಶದಲ್ಲಿ ಮಳೆಯ ಪ್ರಮಾಣವೂ ಸಹ ಕಡಿಮೆದೆ. ಬಿಸಿಲಿನ ಪ್ರಮಾಣ ಹೆಚ್ಚಿದ್ದು ಸದಾ ಕಾಲ ಸೂರ್ಯನ ವಕ್ರ ದೃಷ್ಟಿಗೆ ತುತ್ತಾಗಿದೆ. ಮುಂಗಾರು ಸಂದರ್ಭದಲ್ಲಿ ಮಾತ್ರ ಮಳೆಯನ್ನು ನಿರೀಕ್ಷಿಸಬಹುದೇ ಹೊರತು ಉಳಿದಂತೆಲ್ಲ ಮಳೆಯನ್ನಾಗಲಿ, ಜಲ ಸಂಪತ್ತನ್ನಾಗಲಿ ಅಪೇಕ್ಷಿಸುವಂತಯೇ ಇಲ್ಲ ಮೂರನೇ ಅಧ್ಯಾಯದಲ್ಲಿ ಮೊಳಕಾಲ್ಮೂರು ಗ್ರಾಮದ ಮತ್ತು ಸುತ್ತಲಿನ ಪರಿಸರದ ಒಟ್ಟಾರೆ ಬದುಕನ್ನು ವಿಶ್ಲೇಷಿಸಲಾಗಿದೆ. ನಾನು ಸಹ ಇದೇ ಪರಿಸರದಲ್ಲಿ ಹುಟ್ಟಿ ಬೆಳೆದಿದ್ದು ಇಲ್ಲಿನ ಸ್ಥಿತಿಯನ್ನು ಸ್ವತಃ ಅನುಭವಿಸಿ ಪ್ರತ್ಯಕ್ಷ ಕಂಡುಕೊಂಡ ಸತ್ಯಗಳನ್ನು ಮುಚ್ಚುಮರೆಯಿಲ್ಲದೆ. ವ್ಯಕ್ತಪಡಿಸಲಾಗಿದೆ. ಇಲ್ಲಿನ ಜನರು ಬದುಕುತ್ತಿರುವ ಬದುಕು ಅತ್ಯಂತ ಕಠಿಣ ಪರಿಸ್ಥಿತಿ, ತೊಂದರೆಗಳನ್ನು ಎದುರಿಸುತ್ತಿರುವ

ಸದಾ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ನರಳುತ್ತಿದ್ದಾರೆ. ಸಾಮಾಜಿಕ ಜೀವನವಂತೂ ಪೂರಾ ದುಸ್ಥಿತಿಯಲ್ಲಿ ಮುಳುಗಿದೆ. ಎಷ್ಟೋ ಜನರು ತಮ್ಮ ಊರುಗಳನ್ನು ತೊರೆದು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಜೀವಿಸುತ್ತಿದ್ದಾರೆ. ಮಕ್ಕಳು, ಮರಿ, ಮನೆ ಮಠವನ್ನೆಲ್ಲ ತೊರೆದು ತುತ್ತಿನ ಚೀಲಕ್ಕಾಗಿ ಬೇರೆಯವರ ಅಡಿಯಾಳಾಗಿ ಬದುಕುತ್ತಿರುವ ದೃಷ್ಯ ನಿಜಕ್ಕೂ ಅಮಾನುಷ. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ವ್ಯಕ್ತಿಗಳಿಂದಲೂ ದೌರ್ಜನ್ಯ-ಶೋಷಣೆಗಳನ್ನು ಎದುರಿಸುತ್ತಿದ್ದಾರೆ. ಬಡಜನತೆ ಏನಾದರೂ ತಮ್ಮ ತೊಂದರೆಯನ್ನು ತೋಡಿಕೊಳ್ಳಲು ಹೋದಾಗ ಪ್ರತಿನಿಧಿಗಳ ಉತ್ತರ ಅಸೂಯೆ, ಅಸಡ್ಡೆಯಿಂದ ಶೂನ್ಯ ಉತ್ತರವನ್ನಿತ್ತು ಕಳಿಸುತ್ತಾರೆ, ಒಬ್ಬ ವ್ಯಕ್ತಿಯೇ ಸತತ ಮೂರನೇ ಬಾರಿ ಕ್ಷೇತ್ರಕ್ಕೆ ಎಂ.ಎಲ್.ಎ ಆಯ್ಕೆಯಾದರೂ ಇಡೀ ತಾಲ್ಲೂಕಿಗೆ ಪ್ರಗತಿಪರ ಸಾಧನೆಯೇನೂ ಮಾಡಿಲ್ಲ. ಕೇವಲ ಸಭೆ ಸಮಾರಂಭಗಳಿಗೆ ಆಗಮಿಸಿ ಹಾರ ತುರಾಯಿಗಳನ್ನು ಹಾಕಿಸಿಕೊಂಡು ಕೇವಲ ಭರವಸೆಯ ಸುಳ್ಳಿನ ಕಂತೆಯನ್ನು ಜನರಿಗೆ ನೀಡುತ್ತ ರಾಜಧಾನಿಯಲ್ಲಿ ತಮ್ಮ ಪೌರುಷ ತೋರಿಸುತ್ತಿದ್ದಾರೆ.

ಉಳ್ಳವರಿಗೆ ಮಾತ್ರ ಕೆಲಸ ಕಾರ್ಯಗಳನ್ನು ಮಾಡಿಸಿಕೊಡುತ್ತ ಬಡವರನ್ನು ಇನ್ನೂ ಕೆಳಹಂತಕ್ಕೆ ತಳುತ್ತಿದ್ದಾರೆ. ಇದರಿಂದ ಬೇಸತ್ತ ಜನತೆ ಶಾಸಕರ ಮೇಲಿನ ಭರವಸೆಯನ್ನು ಕಳೆದುಕೊಂಡು ಬೇರೆಲ್ಲೋ ಹೋಗಿ ತಮ್ಮ ಜೀವನ ಸಾಗಿಸುತ್ತಿರುವುದು ಕಂಡು ಬರುತ್ತದೆ ಯಾಕೆಂದರೆ ಬದುಕಲು ಆಹಾರ, ತೊಡಲು ಬಟ್ಟೆ ಮುಂತಾದ ಮೂಲಭೂತ ಸೌಕರ್ಯಗಳು ಬೇಕೆ ಬೇಕು, ಹಾಗಾಗಿ ತಮ್ಮ ಹೊಟ್ಟೆ ಪಾಡಿನ ಜೀವನಕ್ಕಾಗಿ ಜನತೆ ಹಾಹಾಕಾರದಿಂದ ನರಳುತ್ತಿರುವ ಸ್ಥಿತಿ ಇಲ್ಲಿದೆ. ಅಧ್ಯಾಯ ನಾಲ್ಕರಲ್ಲಿ ಜನರು ಆಚರಿಸಿಕೊಂಡು ಬರುತ್ತಿರುವ ಜಾತ್ರೆ, ಹಬ್ಬ, ಸಂಪ್ರದಾಯ, ಆಚರಣೆ, ಮುಂತಾದ ಧಾರ್ಮಿಕ ವಿಧಿವಿಧಾನಗಳಲ್ಲಿ ಕಂಡುಬರುತ್ತಿರುವ ಬದಲಾವಣೆ, ಎಲ್ಲೆಲ್ಲೂ ತಾಂಡವಾಡುತ್ತಿರುವ ಆಧುನಿಕತೆ ಈ ಗ್ರಾಮದಲ್ಲೂ ಅಷ್ಟೇ ಪ್ರಮಾಣದಲ್ಲಿ ತನ್ನ ಛಾಪನ್ನು ಮೂಡಿಸಿದೆ. ಆನರ ಉಡುಗೆ-ತೊಡುಗೆ, ಆಹಾರ ಪದ್ದತಿ, ನಿತ್ಯ ಜೀವನ ಶೈಲಿ ಮುಂತಾದ ಜೀವನದ ಬಹುಮುಖ್ಯ ಚಟುವಟಿಕೆಗಳಲ್ಲಿ ಹೊಸತನ, ಹೊಸ ಹೊಸರೂಪದೊಂದಿಗೆ ಕಾಣಸಿಗುತ್ತದೆ. ಯಾವುದೇ ಒಂದು ಹಬ್ಬ ಆಚರಿಸುವಾಗ ಅಲ್ಲಿ ಯುವಕ, ಯುವತಿಯರ ಸಕ್ರಿಯ ಚಟುವಟಿಕೆಗಳೇ ಹೆಚ್ಚಾಗಿ ಕಾಣುತ್ತವೆ. ತಮಗೆ ತೋಚಿದಂತೆ, ಆಡಂಬರದಲ್ಲಿ, ಗಂಡು, ಹೆಣ್ಣು ಜೊತೆಯಾಗಿ ಆಚರಿಸುವಂತಹ ಪ್ರಕ್ರಿಯೆ ಬದಲಾವಣೆಗೆ ಹಿಡಿದ ಕನ್ನಡಿಯಾಗಿದೆ. ಉಳಿದಂತೆ ಹುಟ್ಟು, ಸಾವುಗಳಲ್ಲಿ ಹಿರಿಯರು ಮುಂದೆ ನಿಂತು ವಿಧಿ ವಿಧಾನಗಳನ್ನು ಪೂರೈಸುತ್ತಿದ್ದು, ಇಂತಹ ಕಾರ್ಯಗಳಲ್ಲಿ ಯುವಪೀಳಿಗೆ ತಲೆ ಹಾಕುವುದಿಲ್ಲ. ಹಾಗಾಗಿ ಈ ಕಾರ್ಯಗಳು ಯಾವುದೇ ಅಭ್ಯಂತರಗಳಿಲ್ಲದೆ ಸಾಂಗವಾಗಿ ನಡೆಯುತ್ತವೆ.

ದಸರಾ, ಯುಗಾದಿ, ದೀಪಾವಳಿ, ಹೋಳಿಹಬ್ಬ, ಮುಂತಾದ ಪ್ರಮುಖ ಹಬ್ಬಹರಿದಿನಗಳಲ್ಲಿ ಯುವ ನಾಯಕರು ಸಂತೋಷ ಅತಿರೇಕಕ್ಕೇರಿರುತ್ತದೆ. ಮದುವೆ ಮುಂತಾದ ಶುಭ ಕಾರ್ಯಗಳಲ್ಲಿಯೂ ಸಹ ಯುವ ಪೀಳಿಗಯಲ್ಲಿ ಪ್ರೀತಿ, ಪ್ರೇಮ ಎಂದೆಲ್ಲಾ ಮಾಡಿಕೊಂಡು, ಕುಟುಂಬದ ಕೆಂಗೆಣ್ಣಿಗೆ ಗುರಿಯಾಗುತ್ತಿದ್ದಾರೆ. ಇದರಿಂದ ಬೇರೆ ದಾರಿ ತೋಚದೆ ಹಿರಿಯರು ತಮ್ಮ ಮಕ್ಕಳು ಸುಖವಾಗಿರಲೆಂದು ಅವರನ್ನಹರಸಿ ಆರ್ಶಿವದಿಸುತ್ತಾರೆ. ಇದಕ್ಕೆ ಪಾಶ್ಚಾತ್ಯ ಸಂಸ್ಕೃತಿ ಆತಿ ಮುಖ್ಯ ಕಾರಣವಾಗಿದೆ.

ಐದನೇ ಅಧ್ಯಾಯದಲ್ಲಿ ವರ್ತಮಾನದ ಕಾಲದಲ್ಲಿ ಮೊಳಕಾಲ್ಮೂರು ನಲ್ಲಾಗಿರುವ ಪರಿವರ್ತನೆಗಳನ್ನು ಸಾದರಪಡಿಸಲಾಗಿದೆ. ಇಂದು ಗ್ರಾಮದಲ್ಲಿ ಆಸ್ಪತ್ರೆ, ಆರಕ್ಷಕ ಕಛೇರಿ, ಶಾಲಾ, ಕಾಲೇಜು, ಸಿನೇಮಾ ಮಂದಿರ ಮುಂತಾದ ಕೆಲವು ಪ್ರಗತಿಪರ ಬದಲಾವಣೆ ವ್ಯವಸ್ಥೆ ಇದ್ದು ಕೆಲವೇ ವರ್ಷಗಳ ಹಿಂದೆ ಇದ್ದ ಮೊಳಕಾಲ್ಮೂರು ಗ್ರಾಮಕ್ಕೂ ಇಂದು ಇರುವ ಗ್ರಾಮಕ್ಕೂ ಕ್ಷಿಪ್ರಗತಿಯ ಬದಲಾವಣೆಗೋಚರಿಸುತ್ತಿದ್ದು ಜನರು ತಮ್ಮ ಜೀವನ ಶೈಲಿ ಬದಲಾಯಿಸಿಕೊಂಡಿದ್ದಾರೆ. ಜೀವನಕ್ಕೆ ಬೇಕಾಗಿರುವಂತಹ ಜೀವನಾವಶ್ಯಕ ಸೌಲಭ್ಯಗಳನ್ನು ಬುದ್ಧಿವಂತಕೆಯಿಂದ ವಿವಿಧ ವೃತ್ತಿಪರ ಕೆಲಸಗಳಲ್ಲಿ ತೊಡಗಿ ಬದುಕಲ್ಲಿ ಹೊಸತನವನ್ನು ಕಂಡುಕೊಂಡಿದ್ದಾರೆ.

ಕೊನೆಯ ಅಧ್ಯಾಯರಲ್ಲಿ ಸಮಾರೋಪದಿಂದ ಮುಕ್ತಾಯಗೊಳಿಸಿದ್ದು, ಇಡೀ ಅಧ್ಯಾಯಗಳಲ್ಲಿ ಗ್ರಾಮದ ಜನಪದರ ಬದುಕು ಹಾಗೂ ಇಂದು ಬದಲಾಗುತ್ತಿರುವ ಆ ಬದುಕಿನ ಸ್ಥಿತ್ಯಂತರಗಳು, ಜೀವನ ಒಂದು ಸವಾಲಾಗುತ್ತಿರುವ ಪ್ರಸ್ತುತ ದಿನಮಾನಗಳಲ್ಲಿ ಈ ಗ್ರಾಮದವರು ಕಂಡುಕೊಂಡ ಜೀವನದ ಮೂಲಗಳು, ಆರ್ಥಿಕತೆಯ ದುಸ್ಥಿತಿ, ಕೆಳಸಮುದಾಯಗಳು ಆರ್ಥಿಕ, ಸಾಮಾಜಿಕ, ವಲಯಗಳಲ್ಲಿ ಕಂಡುಕೊಂಡ ಅಸ್ತಿತ್ವ ಎದುರಿಸುತ್ತಿರುವ ಸವಾಲುಗಳು ದೊರೆಯುವ ಸೌಲಭ್ಯಗಳು ಒಟ್ಟು ಈ ಗ್ರಾಮದ ಜನತೆಯ ಕೃಷಿ, ಕೈಗಾರಿಕೆ, ಹುಟ್ಟು-ಸಾವು, ಧಾರ್ಮಿಕತೆ ಎಲ್ಲವನ್ನೂ ಸಮಗ್ರವಾಗಿ ಚರ್ಚಿಸಲಾಗಿದೆ.

ಕೊನೆಯಲ್ಲಿ ಅನುಬಂಧದಲ್ಲಿ ಕ್ಷೇತ್ರಕಾರ್ಯಸಂದರ್ಭದಲ್ಲಿ ಸಂದರ್ಶಿಸಿದ ವಕ್ತೃಗಳ ವಿವರ, ಛಾಯಾಚಿತ್ರಗಳನ್ನು ಸಂಶೋಧನೆಗೆ ಆಯ್ಕೆಮಾಡಿಕೊಂಡ ಗ್ರಂಥಋಣವನ್ನು ನೀಡಲಾಗಿದೆ.

ಅನುಬಂಧಗಳು

ಗ್ರಂಥಋಣ

ವಕ್ತೃಗಳ ವಿವರ

ಛಾಯಚಿತ್ರಗಳು

ಗ್ರಂಥಋಣ

೧ **ಗ್ರಾಮ ಸಮಾಜ**, ಡಾ.ಜೋಗನ್ ಶಂಕರ್, ಜೀವ ಪ್ರಕಾಶನ ಮೈಸೂರು, ೧೯೯೫

೨ **ಜಾನಪದ ವಾಹಿನಿ**, ದೇ.ಜವರೇಗೌಡ, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು ೧೯೮೬

೩. **ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ**, ಅರ್ಜುನ ಯು.ಗೊಳಸಂಗಿ, ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ, ೧೯೯೫

೪. **ಕನ್ನಡ ಜಾನಪದ ಗ್ರಂಥಸೂಚಿ**, ಡಾ.ಸಿ.ಟಿ.ಗುರುಪ್ರಸಾದ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೫ **ಚಿತ್ರದುರ್ಗ ಜಿಲ್ಲಾದರ್ಶಿನಿ**, ಗಿರಿಜಾ, ರೇಖಾಪ್ರಕಾಶನ, ದಾವಣಗೆರೆ. ೧೯೯೧

೬ **ಜನಪದ ಸಮಾಜ ಸಂಸ್ಕೃತಿ**, ಎಸ್.ಎಸ್.ಹಿರೇಮಠ್, ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ.

೭. **ಗಡಿನಾಡು** (ಮೊಳಕಾಲ್ಮುರು ಗಡಿನಾಡೋತ್ಸವ ನೆನಪಿನ ಸಂಚಿಕೆ), ವಿಚಾರ ಪ್ರಕಾಶನ, ದಾವಣಗೆರೆ, ೨೦೦೨

೮. **ಮೊಳಗುವಕಲ್ಲು ಸ್ಮರಣಾ ಸಂಚಿಕೆ ಸ್ವಾಗತಸಮಿತಿ** (ಚಿತ್ರದುರ್ಗ ೭ನೇ ಕನ್ನಡ ಸಾಹಿತ್ಯ ಸಮ್ಮೇಳನ), ಮೊಳಕಾಲ್ಮುರು, ೧೯೯೮

೯. **ಭಾರತದ ಹಳ್ಳಿಗಳು**, ಈಶ್ವರನ್ ಹಿರೆಮಲ್ಲೂರ್ ಕೆ., ಪ್ರಸಾರಾಂಗ ಮೈಸೂರು, ವಿಶ್ವವಿದ್ಯಾಲಯ, ಮೈಸೂರು, ೧೯೭೨

೧೦. **ತಳಗವಾದಿ ಗ್ರಾಮ ಮತ್ತು ಆಧುನಿಕ ಪಲ್ಲಟಗಳು ಒಂದು ಅಧ್ಯಯನ**, (ಸಂ) ಎಂ.ಕೆ.ಸಿದ್ದರಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೧. **ಗ್ರಾಮೀಣ**, ಡಾ.ಎಂ.ಚಿದಾನಂದ ಮೂರ್ತಿ, ಬಾಪ್ಕೋಪ್ರಕಾಶನ, ಬೆಂಗಳೂರು, ೧೯೭೭

೧೨. **ಗ್ರಾಮೋನ್ನತಿ**, ಹೆಚ್.ಎಂ.ಮರುಳಸಿದ್ದಯ್ಯ, ಸ್ವಸ್ತಿ ಪ್ರಕಾಶನ, ಇಟಗಿ, ೧೯೯೧

೧೩. **ಒಂದು ಗ್ರಾಮದ ಜಾನಪದೀಯ ಅಧ್ಯಯನ**, ಚೆನ್ನಣ್ಣವಾಲೀಕಾರ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ ತಾಲೂಕು, ೧೯೯೧

೧೪. **ಗ್ರಾಮವ್ಯಾಸಾಂಗ**, ಹೆಚ್.ಕೆ.ನಾಗೇಶ್, ಚಂದ್ರನಾಥ ಪ್ರಕಾಶನ, ಧಾರವಾಡ, ೧೯೮೧

೧೫ **ಉಜ್ಜಯಿನಿ ಗ್ರಾಮಾಧ್ಯಯನ**, ರಮೇಶ್ ಕೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೬ **ಕರ್ನಾಟಕ ಜನಪದ ಕಲೆಗಳ ಕೋಶ**, (ಸಂ) ಡಾ.ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೧೭. **ಜಾನಪದ ಕೈಪಿಡಿ,** (ಸಂ) ಹೆಚ್.ಜೆ.ಲಕ್ಕಪ್ಪಗೌಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭

೧೮. **ನಮ್ಮ ಜನಪದ ನಂಬಿಕೆಗಳು,** ದಾಸೇಗೌಡ ಜಿ.ಪಿ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩

೧೯. **ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ,** ಎಂ.ಚಿದಾನಂದ ಮೂರ್ತಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೧೯೯೬

೨೦. **ನುಂಕೆಮಲೆ ಭೈರವೇಶ್ವರನ ಹೊಳಹು,** ಸಿದ್ದಣ್ಣ ಎ., ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. **ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ,** ಡಾ.ಎಂ.ಜಿ.ಈಶ್ವರಪ್ಪ,

೨೨. **ಮೊಳಕಾಲ್ಮುರು ತಾಲ್ಲೂಕು ದರ್ಶನ,** ಕೆ.ಎನ್.ಭೀಮಾರೆಡ್ಡಿ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂ, ೧೯೮೭

೨೩ **ಮೊಳಕಾಲ್ಮುರು ತಲೂಕಿನ ಮ್ಯಾಸ ನಾಯಕ ಜನಾಂಗದ ಬದುಕು ಒಂದು ಅಧ್ಯಯನ,** ಆಂಜನೇಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೨೪. **ಭಾರತೀಯ ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ,** ರವೀಂದ್ರಕೊಪ್ಪರ್, ವಿಜಯ ಬುಕ್ ಡಿಪ್ಪೋ ಗದಗ್

೨೫ **ನಮ್ಮ ಗ್ರಾಮಗಳು ಅಂದು-ಇಂದು,** ಡಾ.ಚಿನ್ನಸ್ವಾಮಿಸೋಸಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೨೬ **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩,** (ಸಂ) ಸೂರ್ಯನಾಥ್ ಕಾಮತ್

೨೭ **ಪೂರ್ವೋಕ್ತ,** (ಸಂ) ಗಿರಿಜಾ ಟಿ.

೨೮. **ಪೂರ್ವೋಕ್ತ,** ಇ.ದ. (ಸಂ)೧೨, ಲಕ್ಷಣ್ ತೆಲಗಾವಿ,

೨೯. **ಜನಪದ ನಂಬಿಕೆಗಳು,** ಡಾ.ಮಂಜುನಾಥ ಬೇವಿನಕಟ್ಟಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೩೦. **ಭಾರತದ ಹಬ್ಬಗಳು,** ರಂಗಸ್ವಾಮಿ ಡಿ.ಟಿ., ಸಮಾಜ ಪುಸ್ತಕಾಲಯ, ಧಾರವಾಡ, ೨೦೦೩.

೩೧. **ಕ್ಷೇತ್ರಕಾರ್ಯದ ಹಾದಿಯಲ್ಲಿ,** ಕ್ಯಾತನಹಳ್ಳಿ ರಾಮಣ್ಣ, ಅಚ್ಚೆ ಹೊತ್ತಿಗೆ ಪ್ರಕಾಶನ, ಕ್ಯಾತನಹಳ್ಳಿ, ೧೯೯೭.

೩೨. **ಜಾನಪದ ಪರಿಶೋಧನೆ,** ಡಾ.ಅಂಬಳಿಕೆ ಹಿರಿಯಣ್ಣ, ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೮.

ವಕ್ತೃಗಳ ವಿವರ

ಹೆಸರು	ವಯಸ್ಸು	ವೃತ್ತಿ	ಊರು
೧. ದೊಡ್ಡರಾಮಣ್ಣ	೫೦	ಪಂಚಾಯ್ತಿ ಅಧ್ಯಕ್ಷರು	ಮೊಳಕಾಲ್ಮೂರು
೨. ಜಿ.ಎಸ್.ಮುರಳಿ	೩೮	ಸಮಾಜಸೇವೆ	ಮೊಳಕಾಲ್ಮೂರು
೩. ಪಾರ್ಥಸಾರಥಿ	೬೦	ನಿವೃತ್ತಶಿಕ್ಷಕರು	ಮೊಳಕಾಲ್ಮೂರು
೪. ಚಂದ್ರಣ್ಣ	೪೫	ರೈತ ಸಂಘದ ಅಧ್ಯಕ್ಷರು	ಮೊಳಕಾಲ್ಮೂರು
೫. ಪ್ರಸನ್ನ	೩೮	ಪಂಚಾಯ್ತಿ ಕ್ಲರ್ಕ್	ಮೊಳಕಾಲ್ಮೂರು
೬. ತಿಪ್ಪಮ್ಮ	೪೫	ಪಂಚಾಯ್ತಿ ಸದಸ್ಯೆ	ಮೊಳಕಾಲ್ಮೂರು
೭. ತಿಪ್ಪೇಸ್ವಾಮಿ ಮರಿಕುಂಟೆ	೫೦	ತಾಲ್ಲೂಕು ಪಂಚಾಯ್ತಿ ಲೆಕ್ಕಾಧಿಕಾರಿಗಳು	ಮೊಳಕಾಲ್ಮೂರು
೮. ಶ್ರೀನಿವಾಸ ಮೂರ್ತಿ	೪೦	ಕವಿಗಳು	ಮೊಳಕಾಲ್ಮೂರು
೯. ವಸಂತಮಾಸ್ತರು	೬೧	ನಿವೃತ್ತಶಿಕ್ಷಕರು	ಮೊಳಕಾಲ್ಮೂರು
೧೦. ಕೆ.ಜಿ.ವೆಂಕಟೇಶ	೩೫	ಪತ್ರಕರ್ತರು	ಮೊಳಕಾಲ್ಮೂರು
೧೧. ಚಂದ್ರಹಾಸ	೩೦	ಶಿಕ್ಷಕರು	ಮೊಳಕಾಲ್ಮೂರು
೧೨. ಮಾರಣ್ಣ	೩೫	ಹಾಸ್ಟೆಲ್ ಕುಕ್ಕರ್	ಮೊಳಕಾಲ್ಮೂರು
೧೩. ಪ್ರಕಾಶ	೩೫	ಅಡುಗೆ ಸಹಾಯಕ	ಮೊಳಕಾಲ್ಮೂರು
೧೪. ರಾಜಶೇಖರ	೨೮	ಶಿಕ್ಷಕ	ಭೈರಾಪುರ
೧೫. ಓಬಕ್ಕ	೪೮	ಹೂವಿನ ವ್ಯಾಪಾರಿ	ಮೊಳಕಾಲ್ಮೂರು
೧೬. ಕುಮತಿ ನಿಂಗಪ್ಪ	೬೦	ಕೃಷಿಕ	ಕುಮತಿ
೧೭. ಗುಡ್ಡದ ಸಿದ್ದಣ್ಣ	೪೫	ಅರ್ಚಕ	ಪೂಜಾರಿಹಟ್ಟಿ
೧೮. ನುಂಕೇಶ್	೩೦	ವ್ಯಾಪಾರ	ಪೂಜಾರಿಹಟ್ಟಿ
೧೯. ಪೂಜಾರಿ ಬೊಮ್ಮಯ್ಯ	೬೦	ಕೃಷಿಕ	ಕುರಾಕಲಹಟ್ಟಿ

ಹೆಸರು	ವಯಸ್ಸು	ವೃತ್ತಿ	ಊರು
೨೦. ಗೌರಮ್ಮ	೩೫	ಮನೆಗೆಲಸ	ಪೂಜಾರಿಹಟ್ಟಿ
೨೧. ನಿಂಗಣ್ಣ	೫೦	ಕೃಷಿ	ಮೊಳಕಾಲ್ಮೂರು
೨೨. ಮೆಚ್ಚರಿಮರಿಯಪ್ಪ	೪೦	ಕೂಲಿ	ಮೊಳಕಾಲ್ಮೂರು
೨೩. ಮರಿಯಣ್ಣ	೬೮	ವಯಸ್ಕ	ಮೊಳಕಾಲ್ಮೂರು
೨೪. ನಾಗರಾಜ	೩೦	ಟೈಲರ್	ಮೊಳಕಾಲ್ಮೂರು
೨೫. ವಿರುಪಾಕ್ಷಪ್ಪ	೪೦	ರೇಷ್ಮೆ ನೇಯ್ಗೆ	ಮೊಳಕಾಲ್ಮೂರು
೨೬. ಈಶ್ವರ	೨೮	ರೇಷ್ಮೆ ನೇಯ್ಗೆ	ಮೊಳಕಾಲ್ಮೂರು
೨೭. ಮರಿಸ್ವಾಮಿ	೩೫	ರೇಷ್ಮೆ ನೇಯ್ಗೆ	ಮೊಳಕಾಲ್ಮೂರು
೨೮. ವೀರಮ್ಮ	೩೮	ರೇಷ್ಮೆ ನೇಯ್ಗೆ/ಮನೆಗೆಲಸ	ಮೊಳಕಾಲ್ಮೂರು
೨೯. ಜಗ್ಗಣ್ಣ	೪೦	ಬಡಗೀತನ	ಮೊಳಕಾಲ್ಮೂರು
೩೦. ಪಾಲಯ್ಯ	೫೦	ಪೂಜಾರಿ/ಕೃಷಿ	ಗಿರಿಜನಹಟ್ಟಿ
೩೧. ಪೆನ್ನೊಬಳಿ	೪೫	ಪೂಜಾರಿ	ಎಸ್.ಸಿ.ಕಾಲೋನಿ
೩೨. ದುರುಗಪ್ಪ	೫೫	ಕೃಷಿ	ಕೋಟೆ
೩೩. ಕೆಂಚಪ್ಪ	೫೦	ರೇಷ್ಮೆನೇಯ್ಗೆ	ಕೋಟೆ
೩೪. ಗೌಡ್ರಬಸವರಾಜ	೪೮	ಕೃಷಿ	ಕಾರ್ಪೋರೇಷನ್
೩೫. ಹನುಮಯ್ಯ	೫೦	ವ್ಯವಸಾಯ	ಪಿ.ಟಿ.ಹಟ್ಟಿ
೩೬. ಸೊಂಡ್ರಪ್ಪ	೫೫	ವ್ಯವಸಾಯ	ಎಸ್.ಸಿ.ಕಾಲೋನಿ
೩೭. ಲಿಂಗಪ್ಪ	೪೦	ವ್ಯವಸಾಯ	ಗಿರಿಜನಹಟ್ಟಿ
೩೮. ನಾಗೇಂದ್ರಪ್ಪ ಆರ್.	೩೮	ಶಿಕ್ಷಕರು	ಮೊಳಕಾಲ್ಮೂರು
೩೯. ವೆಂಕಟೇಶ್ ಸಿ	೩೦	ವ್ಯಾಪಾರ	ಮಾರುತಿಬಡಾವಣೆ
೪೦. ಮಂಜುನಾಥ ಬಿ	೩೦	ವ್ಯಾಪಾರ	ಮಾರುತಿ ಬಡಾವಣೆ
೪೧. ಗುರುಸ್ವಾಮಿ	೩೦	ವ್ಯಾಪಾರ	ಭಾಗ್ಯಜ್ಯೋತಿನಗರ

ಛಾಯಚಿತ್ರಗಳು



[illegible]



[illegible]



ಕೈಪಲದೇವಿಯ ಹೆಬ್ಬಾಗಿಲು.



ಕೈಪಲದೇವಿಯ ಬೆಟ್ಟದಲ್ಲಿರುವ ನೀರಿನ ಕೆರೆ.



ಸುಂಕಪ್ಪನ ಪಾದಕಟ್ಟೆ. ವೆಂಕಟಾಪುರ.



ಶ್ರೀ ಸುಂಕಪಾಲ ಸಿದ್ದೇಶ್ವರ ಸ್ವಾಮಿಯ ಮೂರ್ತಿ.



ಶ್ರೀ ಮಾರಮ್ಮ ದೇವಿಯ ಚಿತ್ರ.



ಶ್ರೀ ಮಾರ್ಕಂಡೇಯ ಸ್ವಾಮಿಯ ದೇವಸ್ಥಾನ.



ರೇಷ್ಮೆ ಸೀರೆ ನೇಯುತ್ತಿರುವ ದೃಶ್ಯ.



ರೇಷ್ಮೆ ಕೈಮಗ್ಗದಲ್ಲಿ ತಯಾರಾಗುತ್ತಿರುವ ರೇಷ್ಮೆ ಸೀರೆ



ಗ್ರಾಮದ ಪಟ್ಟಣ ಪಂಚಾಯ್ತಿ ಕಾರ್ಯಾಲಯ.



ನೂತನವಾಗಿ ನಿರ್ಮಾಣಗೊಂಡ ಸಾರ್ವಜನಿಕ ಆಸ್ಪತ್ರೆ.